ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಶೌರ್ಯ ದೋವಲ್ : ಇನ್ನೊಬ್ಬ ಸುಪುತ್ರ

ಸಂಪುಟ 11 | ಸಂಚಿಕೆ 47 | ಪುಟ 16 | ನವೆಂಬರ್ 13–19, 2017 | ರೂ. 10/-

web: www.janashakthi.co.in e-mail : js_weekly@yahoo.com



ದೆಹಲಿಯಲ್ಲಿ ಲಕ್ಷಾಂತರ ಕಾರ್ಮಿಕರ ಮಹಾಧರಣಿ



ಸಾಮಾಜಿಕ ನ್ಯಾಯದ ಹೋರಾಟಕ್ಕೆ ಹೊಸ ಹುಮ್ಮಸ್ಸು




ಅನಂತನ ಅವಾಂತರಗಳು



ಹತ್ತು ಸೋವಿಯತ್ ಅದ್ಭುತಗಳು

ಸೂಪರ್ ಶ್ರೀಮಂತರ 'ಪ್ಯಾರಾಡೈಸ್'



ಪರಿವರ್ತನಾ ಯಾತ್ರೆ: ಫ್ಲಾಪ್ ಶೋ



ಮೊದಲ ಬಾರಿಗೆ ಸರಕಾರವೊಂದು ಸಾವು-ನೋವುಗಳ ಸಂಭ್ರಮಾಚರಣೆ ನಡೆಸುತ್ತಿದೆ
ನೋಟುರದ್ಧತಿಯ ಸರಕಾರೀ 'ವಾರ್ಷಿಕೋತ್ಸವ'ದ ಬಗ್ಗೆ ಎಡಪಕ್ಷಗಳ ಖಂಡನೆ

"ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಮೊತ್ತಮೊದಲ ಬಾರಿ ಸರಕಾರವೊಂದು ಜನತೆಯ ಸಾವು-ನೋವುಗಳ ಸಂಭ್ರಮಾಚರಣೆ ನಡೆಸುತ್ತಿದೆ" ಎಂದು ನವಂಬರ್ 8ರಂದು ನೋಟುರದ್ಧತಿಯ ವಿರುದ್ಧ ಎಡಪಕ್ಷಗಳ ಪ್ರತಿಭಟನಾ ದಿನಾಚರಣೆಯ ಸಂದರ್ಭದಲ್ಲಿ ಕೇಳಿ ಬಂದ ಮಾತು. ಆಳುವ ಪಕ್ಷಗಳ ಮುಖಂಡರು ತಮ್ಮ ಸರಕಾರದ ನೋಟುರದ್ಧತಿಯ 'ಯಶಸ್ಸ'ನ್ನು ಘೋಷಿಸಿ ಕೊಳ್ಳುತ್ತಿರುವುದನ್ನು ಎಡಪಕ್ಷಗಳು ಬಲವಾಗಿ ಟೀಕಿಸಿವೆ.



ದೇಶದ ರಾಜಧಾನಿಯಲ್ಲಿ ಆರು ಎಡಪಕ್ಷಗಳು ನಡೆಸಿದ ಪ್ರತಿಭಟನಾ ಮೆರವಣಿಗೆಯಲ್ಲಿ ಈ ಪಕ್ಷಗಳ ಹಿರಿಯ ಮುಖಂಡರುಗಳು ಭಾಗವಹಿಸಿದರು.

"ಮೋದಿ ಸರಕಾರ ಜಗತ್ತಿನಲ್ಲಿ ಎರಡು ದಾಖಲೆಗಳನ್ನು ನಿರ್ಮಿಸಿದೆ. ಒಂದು, ಜನಗಳನ್ನು ಸಾಲುಗಟ್ಟಿ ನಿಲ್ಲಿಸಿದ್ದು, ಇದರಲ್ಲಿ ಹಲವರು ಪ್ರಾಣ ಕಳಕೊಮಡರು. ಎರಡು, ನೋಟುರದ್ಧತಿಯಿಂದ ಕಪ್ಪು ಹಣವನ್ನು ನಿಲ್ಲಿಸುತ್ತೇನೆ ಎಂದು ಮೋದಿಯವರು ಜನರಿಗೆ ಮತ್ತು ಜಗತ್ತಿಗೆ ಸಾರಿದರೂ, ವಾಸ್ತವವಾಗಿ ಇದು ಕಳ್ಳದಾಸ್ತಾನುಗಾರರಿಗೆ ಕಪ್ಪು ಹಣವನ್ನು ಬಿಳಿಮಾಡಲು ನೆರವಾಯಿತು" ಎಂದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದರು.

ಮುಂದುವರೆದು ಬೃಂದಾ ಅವರು ಈ ಮೇಲೆ ಆರಂಭದಲ್ಲಿ ಹೇಳಿದ ಮಾತನ್ನು ಉಚ್ಚರಿಸಿದರು.

ಸಿಪಿಐ ಮುಖಂಡರಾದ ಅತುಲ್ ಅಂಜನ್ "ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕಾರ್ಮಿಕರು ಕೆಲಸ ಕಳಕೊಳ್ಳುತ್ತಿದ್ದಾರೆ, ಆದರೂ ಸರಕಾರ ತನ್ನ ತಪ್ಪನ್ನು ಒಪ್ಪಿಕೊಂಡಿಲ್ಲ" ಎಂದರು. ಮೋದಿಯವರು ದುಡಿಯುವ ಜನರಿಗೆ ನರಕವನ್ನೇ ಸೃಷ್ಟಿಸಿದ್ದಾರೆ ಎಂದರು.

ಆರು ಎಡಪಕ್ಷಗಳ ಕರೆಗೆ ಓಗೊಟ್ಟು ದೇಶಾದ್ಯಂತ ನವಂಬರ್ 8ರಂದು ನೋಟುರದ್ಧತಿಯ ಒಂದು ವರ್ಷವನ್ನು ಮೋದಿ ಸರಕಾರದ ಜನ-ವಿರೋಧಿ ಧೋರಣೆಗಳಿಗೆ ಪ್ರತಿಭಟನೆಯ ದಿನವಾಗಿ ಆಚರಿಸಲಾಗಿದೆ.

ಎನ್‌ಟಿಪಿಸಿ ಘಟಕದ ದುರ್ಘಟನೆಯಲ್ಲಿ 34 ಕಾರ್ಮಿಕರ ಸಾವು- ಸ್ವತಂತ್ರ ತನಿಖೆ ಮತ್ತು ಸಾಕಷ್ಟು ಪರಿಹಾರಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳ ಆಗ್ರಹ

ಉತ್ತರಪ್ರದೇಶದಲ್ಲಿರುವ ರಾಷ್ಟ್ರೀಯ ತಾಪ ವಿದ್ಯುತ್ ನಿಗಮ(ಎನ್‌ಟಿಪಿಸಿ)ದ ಉಂಚಹಾರ್ ಸ್ಥಾವರದಲ್ಲಿ ನವಂಬರ್ 1ರಂದು ಸಂಭವಿಸಿದ ಒಂದು ದೊಡ್ಡ ಅಪಘಾತದಲ್ಲಿ ನವಂಬರ್ 5 ರವರೆಗಿನ ವರದಿಗಳ ಪ್ರಕಾರ 34 ಕಾರ್ಮಿಕರು ಸಾವನ್ನಪ್ಪಿದ್ದಾರೆ. ಈ ಬಗ್ಗೆ ಕೇಂದ್ರ ಕಾರ್ಮಿಕ ಸಂಘಟನೆಗಳು ಗಂಭೀರ ಆಘಾತವನ್ನು ವ್ಯಕ್ತಪಡಿಸಿವೆ. ಕಾಂಟ್ರಾಕ್ಟ್ ಕಾರ್ಮಿಕರು ಸೇರಿದಂತೆ ನೂರಾರು ಕಾರ್ಮಿಕರು ಗಾಯಗೊಂಡಿದ್ದಾರೆ, ಅವರಲ್ಲಿ ಹಲವರು 70ಶೇಕಡಾಕ್ಕಿಂತ ಹೆಚ್ಚು ಸುಟ್ಟ ಗಾಯಗಳಿಂದ ನರಳುತ್ತಿದ್ದಾರೆ. ಇನ್ನೂ ಸಾವು-ಬದುಕಿನ ನಡುವೆ ಸೆಣಸುತ್ತಿದ್ದಾರೆ ಎಂದಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಈ ಗಂಭೀರ ಅಪಘಾತದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ಆಳವಾದ, ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿವೆ.

ಬಾಯ್ಲರ್ ಸ್ಫೋಟದ ಈ ಅಪಘಾತ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಭವಿಸಿದೆ ಎಂಬುದು ಕಾರ್ಮಿಕರ ಹೇಳಿಕೆಗಳೂ ಸೇರಿದಂತೆ ವಿವಿಧ ವರದಿಗಳಿಂದ ಕಂಡುಬರುತ್ತದೆ. ಬಾಯ್ಲರ್ ನಿರ್ವಹಣೆಯಲ್ಲಿ ತೊಂದರೆಯಿಂದಾಗಿ ಅದನ್ನು ಅದರ ಸಾಮರ್ಥ್ಯಕ್ಕಿಂತ ಬಹಳ ಕೆಳಗಿನ ಮಟ್ಟದಲ್ಲೇ ಬಳಸಲಾಗುತ್ತಿತ್ತು ಎಂದು ಹೇಳಲಾಗಿದೆ.

ಕೆಲಸದ ಸ್ಥಳಗಳಲ್ಲಿ ಅಪಘಾತಗಳನ್ನು ತಡೆಯಲು ಸುರಕ್ಷತಾ ಕ್ರಮಗಳನ್ನು ಏರ್ಪಡಿಸುವಲ್ಲಿ ತೀವ್ರ ಕೊರತೆಗಳಿವೆ ಎಂಬುದನ್ನೂ ಈ ದುರ್ಘಟನೆ ಬಯಲಿಗೆಳೆದಿದೆ ಎಂದು ಕಾರ್ಮಿಕ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ. ಒಂದು ಉನ್ನತ ಮಟ್ಟದ ಸ್ವತಂತ್ರ ತನಿಖೆಯನ್ನು ನಡೆಸಿ ಇದಕ್ಕೆ ಕಾರಣಗಳನ್ನು ಗುರುತಿಸಬೇಕು ಮತ್ತು ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು, ಇದರ ಆಧಾರದಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು, ಇಂತಹ ಮರಣಾಂತಿಕ ಘಟನೆಗಳು ಮತ್ತೆ ಸಂಭವಿಸದಂತೆ ತಡೆಯುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವು ಆಗ್ರಹಿಸಿವೆ.

ಕಾಂಟ್ರಾಕ್ಟ್ ಕಾರ್ಮಿಕರು ಸೇರಿದಂತೆ ಗಾಯಗೊಂಡಿರುವ ಎಲ್ಲರು ಸಂಪೂರ್ಣ ಗುಣಮುಖರಾಗುವ ವರೆಗೆ ವೈದ್ಯಕೀಯ ಶುಶ್ರೂಷೆಯನ್ನು ಒದಗಿಸಬೇಕು, ಸಾವುಂಟಾಗಿರುವವರ ಕುಟುಂಬಗಳಿಗೆ 50ಲಕ್ಷ ರೂ. ಕಡಿಮೆಯಿಲ್ಲದಂತೆ ಪರಿಹಾರ ಒದಗಿಸಬೇಕು. ಗಾಯಗೊಂಡಿರುವವರಿಗೆ ಪ್ರಕಟಿಸಿರುವ ಪರಿಹಾರಕ್ಕಿಂತ ಎಷ್ಟೋ ಪಟ್ಟು ಹೆಚ್ಚಿನ ಪರಿಹಾರದ ಅಗತ್ಯ ಇದೆ ಎಂದಿರುವ ಈ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಈ ದುರ್ಘಟನೆಯಲ್ಲಿ ಪ್ರಾಣ ಕಳಕೊಂಡಿರುವವರನ್ನು ಮತ್ತು ತೀವ್ರವಾಗಿ ಗಾಯಗೊಂಡಿರುವವರನ್ನು ಅವಲಂಬಿಸಿರುವವರಲ್ಲಿ ಒಬ್ಬರಿಗೆ ಕಂಪನಿಯಲ್ಲಿ ಖಾಯಂ ಉದ್ಯೋಗ ನೀಡಬೇಕು, ಇದು ಕಾಂಟ್ರಾಕ್ಟ್ ಕಾರ್ಮಿಕರಿಗೂ ಅನ್ವಯವಾಗಬೇಕು ಎಂದಿವೆ.

ಡಿಸೆಂಬರ್20: ಕೃಷಿಕೂಲಿಕಾರರ ಸಮಸ್ಯೆಗಳ ಮೇಲೆ ಸಾಮೂಹಿಕ ಕಾರ್ಯಾಚರಣೆ ದಿನ ಫೆಬ್ರುವರಿ 2018ರಲ್ಲಿ ಮನರೇಗ ರಾಷ್ಟ್ರೀಯ ಸಮಾವೇಶ, ನಂತರ ದೇಶವ್ಯಾಪಿ ಆಂದೋಲನ

ಎಐಎಡಬ್ಲ್ಯುಯು ಜನರಲ್ ಕೌನ್ಸಿಲ್ ನಿರ್ಧಾರ

ಅಖಿಲ ಭಾರತ ಕೃಷಿ ಕೂಲಿಕಾರ ಸಂಘ(ಎಐಎಡಬ್ಲ್ಯುಯು)ದ ಜನರಲ್ ಕೌನ್ಸಿಲ್ ನವಂಬರ್ 4-5ರಂದು ನವದೆಹಲಿಯಲ್ಲಿ ಸಭೆ ಸೇರಿ ನಲ್ಗೊಂಡದಲ್ಲಿ ಕಳೆದ ವರ್ಷ ಸಪ್ಟಂಬರ್‌ನಲ್ಲಿ ನಡೆದ ಸಭೆಯ ನಂತರದ ಬೆಳವಣಿಗೆಗಗಳನ್ನು ಪರಿಶೀಲಿಸಿತು. ಈ ಕುರಿತ ಅಧ್ಯಕ್ಷ ಎಸ್.ತಿರುನಾವಕ್ಕರಸು ಮತ್ತು ಪ್ರಧಾನ ಕಾರ್ಯದರ್ಶಿ ಎ. ವಿಜಯರಾಘವನ್ ಭಾಷಣಗಳ ನಂತರ ಜಂಟ ಕಾರ್ಯದರ್ಶಿ ಸುನೀತ್ ಚೋಪ್ರಾ ಮುಂದಿನ ಕಾರ್ಯಾಚರಣೆಯ ಯೋಜನೆಯನ್ನು ಮಂಡಿಸಿದರು.

ಡಿಸೆಂಬರ್ 20ರಂದು ಕೃಷಿ ಕೂಲಿಕಾರರ ಪ್ರಶ್ನೆಗಳಾದ ಆಹಾರ ಭದ್ರತೆ, ಬೆಲೆಯೇರಿಕೆ, ಮಹಾತ್ಮ ಗಾಂಧೀ ಉದ್ಯೋಗ ಖಾತ್ರಿ ಯೋಜನೆ(ಮನರೇಗ) ಭೂಹೀನರಿಗೆ ಭೂಮಿ, ಮನೆಯಿಲ್ಲದವರಿಗೆ ಮನೆ, ಸಮಾನ ಕೆಲಸಕ್ಕೆ ಸಮಾನ ಕೂಲಿ, ದಲಿತರು, ಅಲ್ಪಸಂಖ್ಯಾತರು, ಮಹಿಳೆಯರ ಮೇಲೆ ಅತ್ಯಾಚಾರಗಳು, ಬಾಲ ದುಡಿಮೆ ರದ್ದತಿ, ಗ್ರಾಮಿಣ ಪ್ರದೇಶಗಳಲ್ಲಿ ಸರಕಾರೀ ಶಾಲೆಗಳು ಮುಚ್ಚಿಕೆ ಮತ್ತು ವಯಸ್ಸಾದವರಿಗೆ ಪೆನ್ಶನ್ ಮುಂತಾದ ವಿಷಯಗಳ ಮೇಲೆ ಸಾಮೂಹಿಕ ಕಾರ್ಯಾಚರಣೆಯ ದಿನವನ್ನು ಆಚರಿಸುವ ಪ್ರಸ್ತಾವವವನ್ನು ಚರ್ಚಿಸಲಾಯಿತು. ಇದಕ್ಕೆ ರಾಜ್ಯಸಮಿತಿಗಳು ಸಾಮೂಹಿಕ ಕಾರ್ಯಾಚರಣೆಯಲ್ಲಿ ಆಸಕ್ತಿ ಕುದುರಿಸುವಂತೆ ಗ್ರಾಮ ಮಟ್ಟದಿಂದ ಪ್ರಚಾರಾಂದೋಲನಗಳನ್ನು ರೂಪಿಸಬೇಕು ಎಂದು ಕರೆ ಕೊಡಲಾಯಿತು.


ಇದಲ್ಲದೆ ಮನರೇಗ ಜಾರಿಯಲ್ಲಿನ ವಿಫಲತೆಗಳಿಗೆ ಸಂಬಂಧಪಟ್ಟಂತೆ ಫೆಬ್ರುವರಿ 2018ರಲ್ಲಿ ಒಂದು ರಾಷ್ಟ್ರಮಟ್ಟದ ಜಂಟಿ ಸಮಾವೇಶವನ್ನು ನಡೆಸಬೇಕು ಎಂದೂ ಚರ್ಚಿಸಲಾಯಿತು. ಇದಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಮೂರ್ತ ಅಧ್ಯಯನ ನಡೆಸಿ, ಗ್ರಾಮ ಮಟ್ಟದಿಂದ ಇವುಗಳನ್ನು ಚರ್ಚಿಸಿ, ಈ ರಾಷ್ಟ್ರೀಯ ಸಮಾವೇಶಕ್ಕೆ ಪ್ರತಿನಿಧಿಗಳನ್ನು ಆರಿಸಿ ಕಳಿಸಬೇಕು, ಈ ಸಮಾವೇಶದ ನಂತರ ಒಂದು ದೇಶವ್ಯಾಪಿ ಆಂದೋಲನನವನ್ನು ರೂಪಿಸಬೇಕು ಎಂದು ಕರೆ ಕೊಡಲಾಯಿತು. ಇಂತಹ ಚಳುವಳಿ, ಪ್ರತಿರೋಧ ಇಲ್ಲದಿದ್ದರೆ ಗ್ರಾಮೀಣ ಜನಗಳ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜನರಲ್ ಕೌನ್ಸಿಲ್ ಎಚ್ಚರಿಸಿದೆ.

ದೇಶದ ರಾಜಧಾನಿಗೆ ಲಕ್ಷಾಂತರ ಕಾರ್ಮಿಕರ ಲಗ್ಗೆ – ಸಂಸತ್ ಮಾರ್ಗದಲ್ಲಿ 'ಮಹಾಪಡಾವ್' ಆರಂಭ

ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು (ಸಂಘಪರಿವಾರದ ಬಿಎಂಎಸ್ ಬಿಟ್ಟು ಎಲ್ಲವೂ) ಮತ್ತು ಕೈಗಾರಿಕಾವಾರು ನೌಕರರ ಒಕ್ಕೂಟಗಳ ಜಂಟಿ ಕರೆಗೆ ಓಗೊಟ್ಟು ಸುಮಾರು ಒಂದು ಲಕ್ಷದಷ್ಟು ಸಾರ್ವಜನಿಕ, ಖಾಸಗೀ, ಸರಕಾರೀ, ಖಾಯಂ, ಕಾಂಟ್ರಾಕ್ಟ್, ಕ್ಯಾಶುವಲ್, ಸ್ಕೀಮ್ ಕಾರ್ಮಿಕರು, ನೌಕರರು ಒಟ್ಟುಗೂಡಿ ನವಂಬರ್ 9 ರಂದು ಸಂಸತ್ ಮಾರ್ಗದ ಬಳಿ ತಮ್ಮ ಮೂರು ದಿನಗಳ ಚಾರಿತ್ರಿಕ ಮಹಾಧರಣಿ ಆರಂಭಿಸಿದ್ದಾರೆ. ದಿಲ್ಲಿ ನಗರವನ್ನು ಕವಿದಿರುವ ಹೊಗೆಮಂಜನ್ನೂ ಲೆಕ್ಕಿಸದೆ ರಾಜಧಾನಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ರೈಲು ವಿಳಂಬ ಮತ್ತಿತರ ಕಾರಣಗಳಿಂದ ಇನ್ನು ಹಲವಾರು ಕಾರ್ಮಿಕರು ದಿಲ್ಲಿ ತಲುಪಿಲಲ್. ಮುಂದಿನ ಎರಡು ದಿನಗಳಲ್ಲಿ ದೇಶದ ಇನ್ನೂ ಹಲವು ಭಾಗಗಳಿಂದ ಇನ್ನೂ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ದಿಲ್ಲಿಗೆ ಬಂದು ಈ ಮಹಾಪಡಾವ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಹೇಳಿದ್ದಾರೆ. ಮೂರು ತಿಂಗಳ ವ್ಯಾಪಕ ಪ್ರಚಾರಾಂದೋಲನ ನಡೆಸಿ ಈ ಸಾವಿರಾರು ಕಾರ್ಮಿಕರು ದಿಲ್ಲಿಗೆ ಲಗೆಯಿಟ್ಟಿದ್ದಾರೆ.

ಮಹಾಧರಣಿಯ ಉದ್ಘಾಟನಾ ಅಧಿವೇಶನದಲ್ಲಿ ಬಿಜೆಪಿ ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ರಾಷ್ಟ್ರ-ವಿರೋಧಿ ಧೋರಣೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು, ಈಗಲೂ ಸರಕಾರ ಕಾರ್ಮಿಕರ 12 ಬೇಡಿಕೆಗಳನ್ನು ಈಡೇರಿಸಲು ಮುಂದೆ ಬಾರದಿದ್ದರೆ ಒಂದು ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧರಾಗಬೇಕೆಂಬ ಮುಖಂಡರ ಕರೆಗೆ ಉತ್ಸಾಹಪೂರ್ಣವಾಗಿ ಕಾರ್ಮಿಕರು, ನೌಕರರು ಸ್ಪಂದಿಸಿದರು.

ಪುಟ 7 ನೋಡಿ






ಬಿಜೆಪಿ ಪರಿವರ್ತನಾ ಯಾತ್ರೆ: “ಫ್ಲಾಪ್ ಶೋ”

ಸಂಪಾದಕೀಯ

ಸುಮಾರು 75 ದಿನಗಳಲ್ಲಿ ಪ್ರತಿ ದಿನ 3–4 ರಂತೆ ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರಗಳನ್ನೂ ತಲುಪುವ ಅಂದಾಜು 7,500 ಕಿ.ಮೀ.ಗಳನ್ನು ಕ್ರಮಿಸುವ ಗುರಿ ಹೊಂದಲಾಗಿದ್ದ ‘ನವ ಕರ್ನಾಟಕ ನಿರ್ಮಾಣಕ್ಕಾಗಿ ಪರಿವರ್ತನಾ ಯಾತ್ರೆ” ಬಿಜೆಪಿಗೂ ರಾಜ್ಯ ರಾಜ–ಕಾರಣಕ್ಕೂ ಒಂದು ಪ್ರಮುಖ ಬೆಳವಣಿಗೆಯಾಗಬೇಕಿತ್ತು. ಆದರೆ ನವೆಂಬರ್ 2 ರ ಉದ್ಘಾಟನಾ ಸಮಾರಂಭದಿಂದ ಹಿಡಿದು ಮೊದಲ 7 ದಿನಗಳ ಟ್ರೆಂಡ್ ನೋಡಿದರೆ ಪೂರ್ತಿ “ಫ್ಲಾಪ್ ಶೋ” ಆಗುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ಮೊದಲ 8 ದಿನಗಳಲ್ಲಿ ತುಮಕೂರು, ಹಾಸನ, ಚಿಕ್ಕಮಗಳೂರು, ಕೊಡಗು? ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆ ಪೂರ್ಣಗೊಂಡಿದೆ. ಹೆಚ್ಚಿನ ಕಡೆ ಯಾತ್ರೆ ಬಿಜೆಪಿ ಪರ ಸಕಾರಾತ್ಮಕ ಅಲೆ ಎಬ್ಬಿಸುವ ಬದಲು ಹಲವು ಅಧ್ವಾನಗಳ ಮೂಲಕ ನಕಾರಾತ್ಮಕವಾಗಿದೆ.

ಬೆಂಗಳೂರಿನ ಹೊರವಲಯದಲ್ಲಿನ ತುಮಕೂರು ರಸ್ತೆಯಲ್ಲಿರುವ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ ಆವರಣದಲ್ಲಿ ಬೃಹತ್ ಉದ್ಘಾಟನಾ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಉದ್ಘಾಟಿಸಿದ ಈ ಸಮಾವೇಶದಲ್ಲಿ 3 ಲಕ್ಷ ಜನ ಸೇರಲಿದ್ದಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅಲ್ಲಿ ಅರ್ಧಕ್ಕೂ ಹೆಚ್ಚು ಖಾಲಿ ಕುರ್ಚಿಗಳು ಅಮಿತ್ ಶಾ ಮತ್ತು ಇತರ ನಾಯಕರನ್ನು ರೇಗಿಸುವಂತೆ ಅಣಕಿಸುವಂತಿದ್ದವು. ಡ್ರೋನ್ ಮೂಲಕ ತಯಾರಿಸಿದ ವಿಡಿಯೋ ಎಷ್ಟೇ ಎಡಿಟ್ ಮಾಡಿದರೂ ಸಮಾವೇಶಕ್ಕೆ ನಿರುತ್ಸಾಹದ ಪ್ರತಿಕ್ರಿಯೆಯನ್ನು ಸ್ಪಷ್ಟವಾಗಿಯೇ ಬಿಂಬಿಸಿತು. ಬಿಜೆಪಿಯ ಮುಖವಾಣಿಯಂತೆ ವರ್ತಿಸುತ್ತಿರುವ ಹೆಚ್ಚಿನ ಕನ್ನಡ ಇಂಗ್ಲಿಷ್ ಪತ್ರಿಕೆ–ಟಿವಿ ವಾಹಿನಿಗಳೂ “ಖಾಲಿ ಕುರ್ಚಿ”ಗಳ ಬಗ್ಗೆ ವರದಿ ಮಾಡದೇ ಇರಲಾಗಲಿಲ್ಲ. ಉದ್ಘಾಟನೆ ದಿನದಂದು ತಯಾರಿಸಲಾಗಿದ್ದ ರಾಶಿ ರಾಶಿ ಅನ್ನವನ್ನು ಚೆಲ್ಲಲಾಗಿದೆ. ಇದರ ಫೋಟೋಗಳು ಸಾಮಾಜಿ ಜಾಲತಾಣಗಳಲ್ಲಿ ವೈರಲ್ ಆಗಿದೆ.



ಕೃಪೆ: ಸತೀಶ್ ಆಚಾರ್ಯ

ಅಮಿತ್ ಶಾ ಮತ್ತು ಕೇಂದ್ರ ಉಸ್ತುವಾರಿ ಪ್ರಕಾಶ್ ಜಾವಡೇಕರ್ ಕೆಂಡಾಮಂಡಲವಾಗಿ “ಆಂತರಿಕ ತನಿಖೆ”ಗೆ ಆಜ್ಞೆ ಮಾಡಿದ್ದರು. ಬೆಂಗಳೂರು ಉದ್ಘಾಟನಾ ಸಮಾವೇಶದಲ್ಲಿ ದಕ್ಷಿಣ ಕರ್ನಾಟಕದ 14 ಜಿಲ್ಲೆಗಳ ವಿಧಾನ ಸಭಾ ಕ್ಷೇತ್ರಗಳ ಪ್ರತಿಯೊಂದು ಬೂತ್ ನಿಂದ ಮೂವರಂತೆ ಬೈಕ್ ರ್‍ಯಾಲಿಯಲ್ಲಿ ಬರಲು ಯೋಜಿಸಲಾಗಿತ್ತು. ಅಷ್ಟು ಜನ ಬಂದರೋ ಇಲ್ಲವೋ ಗೊತ್ತಿಲ್ಲ. ಅಮಿತ್ ಶಾ ಬಯಸಿದಂತೆ (ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಜಾರಿ ಮಾಡಿದಂತೆ) ಬೈಕ್ ರ್‍ಯಾಲಿಯಲ್ಲಿ ಬಂದ ಬೈಕ್ ಗಳನ್ನು ಮತ್ತು ಕಾರ್ಯಕರ್ತರನ್ನು ವೇದಿಕೆಯ ಬಳಿ ಪ್ರತ್ಯೇಕವಾಗಿ ಕೂರಿಸಿ ಅವರಲ್ಲಿ ಸ್ಫೂರ್ತಿ–ಉತ್ಸಾಹಗಳನ್ನೂ, ಜನರ ನಡುವೆ ಇಷ್ಟು ಬೂತ್ ಮಟ್ಟದ ಕಾರ್ಯಕರ್ತರಿದ್ದಾರೆ ಎಂಬ ಪ್ರಚಾರವನ್ನೂ ಮಾಡುವ ಯೋಜನೆಯಂತೂ ಜಾರಿಯಾಗಿರಲಿಲ್ಲ.

ಉದ್ಘಾಟನೆಯ ನಂತರ ಯಾತ್ರೆ ಮುಟ್ಟಿದ ತುಮಕೂರಿನಲ್ಲಿ ಅತ್ಯಂತ ಹೆಚ್ಚು ಅಧ್ವಾನಗಳಾದವು. ಸ್ಥಳೀಯ ಪದಾಧಿಕಾರಿಯನ್ನು ವಜಾಗೊಳಿಸಿದ್ದರಿಂದ ಅಲ್ಲಿ ಯಾತ್ರಾವಾಹನಗಳು ನಿಲ್ಲದೆ ಹೋದಾಗ ಬಾಣಸಂದ್ರದ ಅತೃಪ್ತ ಬಿಜೆಪಿ ಕಾರ್ಯಕರ್ತರೇ ಯಾತ್ರಾ ವಾಹನಗಳ ಮೇಲೆ ತೆಂಗಿನಕಾಯಿ ಒಗೆದು ವಾಹನಗಳಿಗೆ ಜಖಂ ಆಯಿತು. ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ನಡೆಯುತ್ತಿರುವುದು “ಬಿಜೆಪಿ ಪರಿವರ್ತನಾ ಯಾತ್ರೆಯಲ್ಲ ಕೆಜೆಪಿ ಪರಿವರ್ತನಾ ಯಾತ್ರೆ” ಎಂದು ತುಮಕೂರಿನ ಬಿಜೆಪಿ ಹಿರಿಯ ಮುಖಂಡ ಸೊಗಡು ಶಿವಣ್ಣ ಆರೋಪಿಸಿ ಸಮಾವೇಶವನ್ನು ಬಹಿಷ್ಕರಿಸಿದರು. ಯಾತ್ರೆ ಅಂಗವಾಗಿ ಹಮ್ಮಿಕೊಳ್ಳುತ್ತಿರುವ ಸಮಾವೇಶದಲ್ಲಿ ಅಭ್ಯರ್ಥಿ ಹೆಸರನ್ನು ಯೆಡಿಯೂರಪ್ಪ ಪ್ರಕಟಿಸುತ್ತಿರುವುದು, ಸ್ಥಳೀಯ ಮಟ್ಟದಲ್ಲಿ ಆಕ್ರೋಶ ಗೊಂದಲ ಹುಟ್ಟಿಸುತ್ತಿದೆ. ಕ್ಷೇತ್ರವಾರು ಆಂತರಿಕ ಸಮೀಕ್ಷೆ ನಡೆಸಿ ಗೆಲ್ಲುವ ಅಭ್ಯರ್ಥಿಗೆ ಟಿಕೇಟು ಕೊಡುವ ಬಗ್ಗೆ ಹೈ ಕಮಾಂಡ್ ನಿರ್ಧರಿಸುತ್ತದೆ. ರಾಜ್ಯ ಅಧ್ಯಕ್ಷರಿಗಾಗಲಿ ಘಟಕಕ್ಕಾಗಲಿ ಈ ಅಧಿಕಾರವಿಲ್ಲ. ಟಿಕೆಟ್ ಆಕಾಂಕ್ಷಿಗಳು ತಮ್ಮ ಕ್ಷೇತ್ರವ್ಯಾಪ್ತಿಯ ಬೂತ್ ಗಳಲ್ಲಿ 10 ಜನರಿರುವ ಸಮಿತಿ ರಚಿಸಬೇಕು. ಯಾತ್ರೆ ವೇಳೆ ಕ್ಷೇತ್ರದಲ್ಲಿ ನಡೆಯುವ ಸಮಾವೇಶದ ಯಶಸ್ಸು ಬೂತ್ ಸಮಿತಿ ರಚನೆಯಲ್ಲಿ ಪ್ರಗತಿ ಮಾತ್ರ ಟಿಕೆಟ್ ನೀಡಿಕೆಗೆ ಮಾನದಂಡ. ಈ ಕೇಂದ್ರೀಯ ನಾಯಕರ ಸ್ಪಷ್ಟ ನಿರ್ದೇಶನಕ್ಕೆ ವ್ಯತಿರಿಕ್ತವಾಗಿ ಯೆಡಿಯೂರಪ್ಪ ಮತ್ತು ಶೋಭಾ ಏಕಪಕ್ಷೀಯವಾಗಿ ನಿರ್ಧರಿಸಿ ಅಭ್ಯರ್ಥಿ ಹೆಸರು ಘೋಷಣೆ ಮಾಡುತ್ತಿದ್ದಾರೆ. ಎಂದು ಸ್ಥಳೀಯ ನಾಯಕರು ಕೆಲವರು ಖಾಸಗಿಯಾಗಿ ಕೆಲವರು ಬಹಿರಂಗವಾಗಿಯೇ ದೂರುತ್ತಿದ್ದಾರೆ. ಹಾಸನದ ಸಮಾವೇಶದಲ್ಲಿ ಜಿಲ್ಲಾ ಉಪಾಧ್ಯಕ್ಷ ಪ್ರೀತಮ್ ಗೌಡ ಹೆಸರಿದ್ದ ಕವರ್ ಗಳಲ್ಲಿ ಮಹಿಳೆಯರಿಗೆ ಸೀರೆ ವಿತರಿಸಲಾಯಿತು. ಇನ್ನೊಬ್ಬ ಬಿಜೆಪಿ ನಾಯಕನ ಕಂಪನಿಯ ಹೆಸರಿನ ಕೂಪನುಗಳನ್ನು ವಿತರಿಸಿ ಅದನ್ನು ಕೊಟ್ಟವರಿಗೆ ಹಣ ವಿತರಿಸಲಾಯಿತು ಎಂಬ ಆಪಾದನೆ ಕೇಳಿ ಬಂದಿದೆ. ಹಣ ಸೀರೆ ವಿತರಿಸಿದರೂ ಹೆಚ್ಚಿನ ಸಮಾವೇಶಗಳಲ್ಲಿ ನಿರೀಕ್ಷಿತ ಸಂಖ್ಯೆಯಲ್ಲಿ ಜನ ಸೇರಿಲ್ಲವೆಂದು ವರದಿಯಾಗಿದೆ. ಬಿಜೆಪಿಯ ಯಾವುದೇ ಕಾರ್ಯಕ್ರಮವನ್ನು ದೊಡ್ಡದಾಗಿ ವರದಿ ಮಾಡುವ ಪತ್ರಿಕೆ–ಟಿವಿ ವಾಹಿನಿಗಳು ಸ್ಥಳೀಯ ಸಮಾವೇಶದ ಬಗ್ಗೆ ವರದಿಗಳನ್ನೇ ಮಾಡದಿರುವುದು ಈ ಯಾತ್ರೆ “ಫ್ಲಾಪ್” ಆಗುತ್ತಿದೆ ಎಂಬುದನ್ನು ಎತ್ತಿ ತೋರಿಸುತ್ತಿದೆ.

ಇದಕ್ಕೆ ಕಾರಣಗಳೇನು ಎಂಬುದನ್ನು ವಿಶ್ಲೇಷಿಸುವುದು ಅಗತ್ಯ. ಸಾಮಾನ್ಯವಾಗಿ ಕೊಡುವ ಕಾರಣ ಯೆಡಿಯೂರಪ್ಪ ಅವರ ಯಜಮಾನಿಕೆಯ ಶೈಲಿ ಮತ್ತು ವ್ಯಾಪಕವಾಗಿರುವ ಗುಂಪುಗಾರಿಕೆ. ಇದನ್ನು ತೊಡೆಯಲು ಹೈ ಕಮಾಂಡ್ ತೆಗೆದುಕೊಂಡ ಕ್ರಮಗಳು ವಿಫಲವಾಗಿರುವುದು. ಗುಂಪುಗಾರಿಕೆಯಿಂದಾಗಿ ಪರಸ್ಪರ ಕಾಲೆಳೆಯಲು ಸಮಾವೇಶ ವಿಫಲ ಮಾಡುವ ಹಂತಕ್ಕೆ ಹೋಗಿರಬಹುದು. ಆದರೆ ಇದೊಂದೇ ಕಾರಣವಲ್ಲ. “ನವ ಕರ್ನಾಟಕ ನಿರ್ಮಾಣಕ್ಕಾಗಿ ಪರಿವರ್ತನಾ ಯಾತ್ರೆ” **ಪುಟ 4 ಕ್ಕೆ**

“ಸೌಹಾರ್ದಕ್ಕಾಗಿ ಕರ್ನಾಟಕ”ವನ್ನು ಉಳಿಸೋಣ ಬನ್ನಿ!”

ನವೆಂಬರ್ 19ರ 10.30ಕ್ಕೆ ಬೆಂಗಳೂರಿನ ಗಾಂಧಿ ಭವನದಲ್ಲಿ ಸಮಾಲೋಚನಾ ಸಭೆ

ನಾಡಿನ ಹಿರಿಯ ಸಾಂಸ್ಕೃತಿಕ ನಾಯಕರ ಆಹ್ವಾನ

ಮಾನ್ಯರೆ,

ಆದಿ ಕವಿ ಪಂಪನಿಂದ ಆರಂಭವಾಗಿ ಇಂದಿನವರೆಗೆ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆ ಸೌಹಾರ್ದಮಯವಾಗಿದೆ, ಸೌಹಾರ್ದ ಪ್ರಿಯವಾಗಿದೆ. ನಾಡಿನೆಲ್ಲ ಜನರು ಶಾಂತಿ ಮತ್ತು ನೆಮ್ಮದಿಯ ವಾತಾವರಣದಲ್ಲಿ ಬದುಕನ್ನು ಸಾಗಿಸಲು ಬಯಸುವಂಥವರು.

ಆದರೆ ಇತ್ತೀಚಿನ ದಶಕದಲ್ಲಿ ಈ ಸೌಹಾರ್ದವನ್ನು ನಾಶ ಮಾಡಲು, ಕೋಮುದ್ವೇಷವನ್ನು ಹರಡಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈಗಾಗಲೇ ಕರಾವಳಿಯನ್ನು ತಮ್ಮ ಪ್ರಯೋಗಶಾಲೆಯಾಗಿಸಿಕೊಂಡ ಕೋಮುವಾದಿ ಶಕ್ತಿಗಳು ನಿತ್ಯವೂ ಜನರ ನೆಮ್ಮದಿಯ ಬದುಕಿಗೆ ಭಂಗ ತರುತ್ತಿದ್ದಾರೆ. ಸಮಾಜದ ನಾಗರಿಕರ ಮೇಲೆ, ವಿಶೇಷವಾಗಿ ಅಲ್ಪಸಂಖ್ಯಾತರ ಮೇಲೆ, ದಲಿತರು, ಮಹಿಳೆಯರ ಮೇಲೆ ವಿವಿಧ ನೆಪಗಳನ್ನೊಡ್ಡಿ ದೈಹಿಕ, ಮೌಖಿಕ ದಾಳಿಗಳನ್ನು ನಡೆಸಲಾಗುತ್ತಿದೆ. ನಾಡಿನ ಸಾಂಸ್ಕೃತಿಕ, ವೈಚಾರಿಕ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದ ಹಿರಿಯ ಸಂಶೋಧಕರಾದ ಪ್ರೊ.ಎಂ.ಎಂ. ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶರ ಕೊಲೆಗಳು ನಾಡಿನ ಜನರನ್ನು ಬೆಚ್ಚಿ ಬೀಳಿಸಿವೆ.

ಇದೇ ಸಮಯದಲ್ಲಿ ದೇಶದಲ್ಲಿನ ವಾತಾವರಣ ಮತ್ತಷ್ಟು ಹದಗೆಡುತ್ತಿದೆ. ಶಿಕ್ಷಣದ ಉನ್ನತ ಸಂಸ್ಥೆಗಳಾದ ವಿಶ್ವವಿದ್ಯಾಲಯಗಳ ಮೇಲೆ ದಾಳಿ, ಸಾಹಿತಿ, ಚಿಂತಕರ ಮೇಲೆ ಅಸಹ್ಯಕರ ಬೈಗುಳುಗಳ ದಾಳಿಗಳು ಸಾಮಾನ್ಯವಾಗಿ ಬಿಟ್ಟಿವೆ. ಹಿಂಸೆ, ದ್ವೇಷದ ವಾತಾವರಣ ವಿಷಗಾಳಿಯಂತೆ ಹಬ್ಬುತ್ತಿದೆ. ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕೆಲಸ, ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆಯನ್ನು ನಾಶ ಮಾಡುವ ಪ್ರಯತ್ನಗಳು ಎಡೆಬಿಡದೆ ಸಾಗುತ್ತಿವೆ. ದೇಶದ ಹಲವು ರಾಜ್ಯಗಳನ್ನು ಆವರಿಸಿದ ಈ ಶಕ್ತಿಗಳು ನಮ್ಮ ರಾಜ್ಯವನ್ನೂ ಕಬಳಿಸುವ ಹುನ್ನಾರ ಮಾಡುತ್ತಿವೆ.

ಇಂತಹ ಅಪಾಯಕಾರಿ ಸನ್ನಿವೇಶವನ್ನು ನಾಡಿನೆಲ್ಲಾ ಜನರು ಒಟ್ಟಾಗಿ ಎದುರಿಸಬೇಕಾಗಿದೆ. ಕರ್ನಾಟಕದ ಜನರ ಬದುಕಿನ ನೆಮ್ಮದಿಯನ್ನು ಕಾಪಾಡಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ರಾಜ್ಯದ ಹಲವೆಡೆಗಳಲ್ಲಿ ವಿಚಾರ ಸಂಕಿರಣಗಳು, ಸಮಾವೇಶಗಳು, ಬಹಿರಂಗ ಸಭೆಗಳು ಮೊದಲಾದ ಹಲವು ರೀತಿಯ ಚಟುವಟಿಕೆಗಳು ನಡೆದಿವೆ. ಆದರೂ ಶಾಂತಿ, ನೆಮ್ಮದಿ ಕದಡುವ, ಸೌಹಾರ್ದತೆ ಕೆಡಿಸುವ, ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ಶಕ್ತಿಗಳ ದಾಳಿಯ ವೇಗ ಮತ್ತು ಬಿರುಸಿಗೆ ಇವು ಸಾಲದಾಗಿವೆ. ಆದ್ದರಿಂದ ಈ ಮಹತ್ತರ ಅಪಾಯದ ಬಗ್ಗೆ ಕರ್ನಾಟಕದ ಲಕ್ಷಾಂತರ, ಕೋಟ್ಯಂತರ ಜನರನ್ನು ಜಾಗೃತಿಸುವ ಬೃಹತ್ ಪ್ರಯತ್ನ ಇಂದು ಅತಿ ತುರ್ತಿನದಾಗಿದೆ.

ಕರ್ನಾಟಕದ ಸೌಹಾರ್ದಮಯ ಬದುಕನ್ನು, ನಮ್ಮ ವೈವಿಧ್ಯಮಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ, ನಮ್ಮ ತಲೆಮಾರು ಮಾತ್ರವಲ್ಲ, ನಮ್ಮ ಮಕ್ಕಳ, ಮರಿಮಕ್ಕಳ ನೆಮ್ಮದಿಯನ್ನು ಖಾತರಿಪಡಿಸುವ ಸಲುವಾಗಿ ನಾಡಿನ ಹಲವು ಚಿಂತಕರು, ಸಾಹಿತಿಗಳು, ಮಠಾಧೀಶರು, ರೈತ–ಕೂಲಿಕಾರರು,ಕಾರ್ಮಿಕ, ದಲಿತ, ಆದಿವಾಸಿ,ಮಹಿಳಾ, ವಿದ್ಯಾರ್ಥಿ–ಯುವಜನ ಚಳುವಳಿಗಳ ಹೋರಾಟಗಾರರು ನಾಡಿನೆಲ್ಲಾ ಸೌಹಾರ್ದ ಪ್ರೇಮಿಗಳು ಒಂದಾಗಿದ್ದಾರೆ, ಒಂದಾಗುತ್ತಿದ್ದಾರೆ. “ಸೌಹಾರ್ದಕ್ಕಾಗಿ ಕರ್ನಾಟಕ” ವನ್ನು ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ಒಂದು ವೇದಿಕೆಯಲ್ಲಿ ಒಂದುಗೂಡಿ ಬೃಹತ್ ಕಾರ್ಯಕ್ರಮ ರೂಪಿಸಬೇಕಿದೆ. ಬಸವಕಲ್ಯಾಣದಿಂದ ಬೆಂಗಳೂರು ಮಾರ್ಗವಾಗಿ ಚಾಮರಾಜನಗರದ ಮಹದೇಶ್ವರ ಬೆಟ್ಟದವರೆಗೆ, ಕಾರವಾರದಿಂದ ಮಂಗಳೂರು ಮಾರ್ಗವಾಗಿ ಮಡಿಕೇರಿಯವರೆಗೆ, ಬೆಳಗಾವಿಯಿಂದ ಶಿವಮೊಗ್ಗ ಮಾರ್ಗವಾಗಿ ಮೈಸೂರುವರೆಗೆ ಒಂದು ಬೃಹತ್ ಮಾನವ ಸರಪಳಿಯನ್ನು ರಚಿಸುವ ಚಿಂತನೆಯೂ ನಡೆದಿದೆ.

ಇಂತಹ ಒಂದು ಬೃಹತ್ ಸಾಹಸ ರಾಜ್ಯದ ಸಾವಿರಾರು ಹಳ್ಳಿಗಳು, ಹಲವಾರು ಪಟ್ಟಣಗಳು, ನಗರ, ಮಹಾನಗರಗಳನ್ನು ಆವರಿಸಿಕೊಂಡು ಕರ್ನಾಟಕದ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲಾಗಲಿದೆ. ದಶಲಕ್ಷಗಟ್ಟಲೇ ಜನರನ್ನು ಎಚ್ಚರಿಸಿ, ಅವರಲ್ಲಿ ಅರಿವನ್ನು ಮೂಡಿಸುವ ಪ್ರಯತ್ನವಾಗಲಿದೆ.

ಈ ಪ್ರಯತ್ನವನ್ನು ಕೈಗೊಳ್ಳುವಲ್ಲಿ, ಕರ್ನಾಟಕದಲ್ಲಿ ಹಲವು ದಶಕಗಳಿಂದ ಸೌಹಾರ್ದದ ಬದುಕಿಗಾಗಿ, ವೈವಿಧ್ಯತೆ, ಮತನಿರಪೇಕ್ಷತೆ, ಪ್ರಜಾಪ್ರಭುತ್ವ ಮೌಲ್ಯಗಳನ್ನು ರಕ್ಷಿಸುವಲ್ಲಿ, ಸಮಾನತೆಯ ತಳಹದಿಯಲ್ಲಿ ಶ್ರಮಿಸಿರುವ ಪ್ರಮುಖರಾದ ತಾವು ಈ ಕಾರ್ಯದ ಅದರ ಅವಿಭಾಜ್ಯ ಅಂಗವಾಗಬೇಕೆಂಬುದು ನಮ್ಮೆಲ್ಲರ ಅಭಿಲಾಷೆ.

ಅದರ ಮೊದಲ ಸಮಾಲೋಚನಾ ಸಭೆಯನ್ನು ಇದೇ ನವೆಂಬರ್ 19, 2017ರಂದು ಬೆಳಿಗ್ಗೆ 10.30 ಗಂಟೆಗೆ ಗಾಂಧಿ ಭವನದಲ್ಲಿ ನಡೆಸಬೇಕೆಂದು ಯೋಜಿಸಲಾಗಿದೆ. ಈ ಸಭೆಗೆ ತಾವು ಅಗತ್ಯವಾಗಿ ಭಾಗವಹಿಸಿ ಅಮೂಲ್ಯ ಸಲಹೆ–ಸೂಚನೆಗಳನ್ನು ನೀಡಬೇಕೆಂದೂ ಮತ್ತು ಈ ಸಮಿತಿಯ ಭಾಗವಾಗಿ ಈ ಮಹತ್ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸುತ್ತೇವೆ.

***ವೀರಭದ್ರ ಚನ್ನಮಲ್ಲ ಸ್ವಾಮೀಜಿ *ನ್ಯಾಯಮೂರ್ತಿ ವಿ. ಗೋಪಾಲಗೌಡ *ಡಾ.ಕೆ.ಮರುಳಸಿದ್ಧಪ *ಡಾ.ಜಿ.ರಾಮಕೃಷ್ಣ *ಡಾ.ಬರಗೂರು ರಾಮಚಂದ್ರಪ್ಪ *ಪ್ರೊ.ಚಂದ್ರಶೇಖರ ಪಾಟೀಲ್ *ನ್ಯಾ. ಹೆಚ್.ಎನ್.ನಾಗಮೋಹನದಾಸ್ *ಪ್ರೊ. ಎಸ್.ಜಿ.ಸಿದ್ಧರಾಮಯ್ಯ *ಪ್ರೊ. ಸುಕನ್ಯಾ ಮಾರುತಿ *ಪ್ರೊ. ಅರವಿಂದ ಮಾಲಗತ್ತಿ *ಕುಂ.ವೀರಭದ್ರಪ್ಪ *ಕೆ.ಶರೀಫಾ *ಪ್ರೊ. ಅಂಬ್ರೋಜ್ ಪಿಂಟೋ.**

ವಾಸುದೇವ ಉಚ್ಚಿಲ

ಎರಡು ವಿಶಿಷ್ಟ ವಿಚಾರ ಸಂಕಿರಣಗಳು

ಜಾಗತಿಕ ತಾಯ್ತನಕ್ಕೆ ಒಡ್ಡಿದ ಸೇವೆ ಮದರ್ ತೆರೇಸಾ ಅವರದು



ಮದರ್ ತೆರೇಸಾ ಪ್ರೀತಿಯನ್ನು ಸೇವೆ ಎಂದು ಹಂಚಲಿಲ್ಲ. ಬದಲಾಗಿ ತಾಯ್ತನದಿಂದ ಬಡವರ, ನಿರ್ಗತಿಕರ ಸೇವೆ ಮಾಡಿದರು. ಇತ್ತೀಚಿನ ವರ್ಷಗಳಲ್ಲಿ ಕ್ರೈಸ್ತರು ಹೊರಗಿನವರು ಎಂಬ ಧೋರಣೆಯನ್ನು ಬಿತ್ತಲಾಗುತ್ತಿದೆ. ಆದರೆ ಮದರ್ ತೆರೇಸಾ ಅವರಿಗೆ ಸೇವೆ ಮಾಡುವಾಗ, ಹೊರಗಿನವರು-ಒಳಗಿನವರು ಎಂಬ ಭೇದ ಇರಲಿಲ್ಲ. ಕುಷ್ಠರೋಗಿಗಳಿಗೆ, ಬಡತನಕ್ಕೆ ಕಷ್ಟ ಕಾರ್ಪಣ್ಯಗಳಿಗೆ ಯಾವ ಜಾತಿಯೂ ಇರುವುದಿಲ್ಲ. ಸ್ಲಂ ನಿವಾಸಿಗಳನ್ನು ಯಾವ ಜಾತಿ ಎಂದು ವಿಚಾರಿಸಿ ಅವರು ಸೇವೆ ನೀಡಿಲ್ಲ. ರೋಗದ ವಿರುದ್ಧ ನೋವಿನ ವಿರುದ್ಧದ ಹೋರಾಟದಲ್ಲಿ ಅವರು ಸಹಭಾಗಿಯಾಗಿ ದುಡಿದಿದ್ದರು. ಜಗತ್ತಿನ ತಾಯ್ತನಕ್ಕೆ ಮದರ್ ತೆರೇಸಾ ಒಪ್ಪಿಕೊಂಡ ಪ್ರಕ್ರಿಯೆಗೆ ನಾವಿಂದು ತೆರೆದುಕೊಳ್ಳಬೇಕಾಗಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಐಕ್ಯತೆಯನ್ನು ಕಟ್ಟುವಲ್ಲಿ ಮದರ್ ತೆರೇಸಾ ನಮ್ಮ ಶಕ್ತಿಯಾಗಬೇಕು ಎಂಬುದಾಗಿ ಲೇಖಕಿ ಕೆ.ನೀಲಾ ಹೇಳಿದರು.

ಸಂತ ಮದರ್ ತೆರೇಸಾ ವಿಚಾರ ವೇದಿಕೆ ಮಂಗಳೂರು ಇದರ ಆಶ್ರಯದಲ್ಲಿ 'ಸ್ವಾಸ್ಥ್ಯ ಸಮಾಜಕ್ಕೆ ಮದರ್ ತೆರೇಸಾ ಸೇವೆಯ ಅಗತ್ಯತೆ' ವಿಷಯದ ಕುರಿತು ನವಂಬರ್ 6 ರಂದು ಮಂಗಳೂರು ಪುರಭವನದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಕೆ.ನೀಲಾ ಅವರು ವಿಚಾರ ಮಂಡನೆ ಮಾಡಿ ಮಾತನಾಡಿದರು.

ಜೆಎನ್‌ಯು ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ಪ್ರೀತಿ ಎಂಬುದು ಕೇವಲ ಭಾವನೆಯಾಗಿರದೆ ಕ್ರಿಯೆಯಾಗಿ ವ್ಯಕ್ತವಾಗುವುದು ಮದರ್ ತೆರೇಸಾ ಅವರ ಸೇವೆಯಲ್ಲಿ. ತೆರೇಸಾ ಅವರು ಕ್ರಿಯೆಯನ್ನು ಸೇವೆಯೆಂದು ಹೇಳಿಕೊಂಡಿದ್ದರಿಂದಾಗಿ ಕೋಲ್ಕತ್ತಾದ ಸಾವುಗಳನ್ನು, ವಿಯಟ್ನಾಂ ತಬ್ಬಲಿಗಳನ್ನು, ಇಥಿಯೋಪಿಯಾದ ಹಸಿವಿನ ಸಂತ್ರಸ್ತರನ್ನು, ಅಮೆರಿಕಾದ ಒಂಟಿತನವನ್ನು, ಐರ್ಲೆಂಡಿನ ಅನಾಥ ಪ್ರಜ್ಞೆಯನ್ನು, ಆಸ್ಟ್ರೇಲಿಯಾದ ಅಂಗವಿಕಲರ ಬಗ್ಗೆ ಮಾತುಗಳನಾಡುತ್ತಾ ತಮ್ಮೆರಡು ಬಾಹುಗಳ ಮೂಲಕ ಇಡೀ ಜಗತ್ತನ್ನೇ ತಬ್ಬಿಕೊಂಡರು. ಅಂಥ ಅಪ್ಪುಗೆಯ ಬಾಹುಗಳು ನಮ್ಮದಾಗಲಿ ಎಂದು ಅವರು ಆಶಿಸಿದರು.

ತಾನು ಇತ್ತೀಚೆಗೆ ದೆಹಲಿಯಲ್ಲಿ ವಲಸಿಗ ರೋಹಿಂಗ್ಯಾಗಳ ಶಿಬಿರಕ್ಕೆ ಭೇಟಿ ನೀಡಿ, ಅಳುತ್ತಿರುವ ಮಕ್ಕಳನ್ನು ಮಹಿಳೆಯರನ್ನು, ವೃದ್ಧರನ್ನು ಕಂಡು ವಿಚಲಿತನಾದೆ. ಅವರಿಗೆ ಭಯೋತ್ಪಾದಕರೆಂಬ ಹಣೆಪಟ್ಟಿ ಕಟ್ಟಲಾಗಿದೆ. ಯಾರೋ ಒಂದಿಬ್ಬರು ಆ ಸಮುದಾಯದಿಂದ ಭಯೋತ್ಪಾದಕರಾಗಿರಬಹುದು. ಅದಕ್ಕಾಗಿ ಇಡೀ ಸಮುದಾಯವನ್ನು ಬಲಿಕೊಡುವುದು ತಪ್ಪು ಎಂದು ಹೇಳಿದ್ದಲ್ಲದೆ, ಇತರ ರಾಷ್ಟ್ರಗಳಲ್ಲಿ ನಡೆಯುವ ಅಂಥದ್ದೇ ಇನ್ನಿತರ ವಿದ್ಯಮಾನಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು. ರೋಹಿಂಗ್ಯಾಗಳ ಕಣ್ಣೀರು ಒರೆಸಲು ಮದರ್ ತೆರೇಸಾ ನಮಗೆ ಸ್ಫೂರ್ತಿ ಪ್ರೇರಣೆಯಾಗಬೇಕು ಎಂದು ಡಾ.ಪುರುಷೋತ್ತಮ ಬಿಳಿಮಲೆ ಆಶಯ ವ್ಯಕ್ತಪಡಿಸಿದರು.

ಪ್ರಿನ್ಸಿಪಾಲ್ ಹಾಗೂ ಚಿಂತಕ ಡಾ.ಎನ್. ಇಸ್ಮಾಯಿಲ್, ಸೈಂಟ್ ಅಲೋಶಿಯಸ್ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಆಲ್ವಿನ್ ಡೇಸಾ ವಿಷಯ ಮಂಡನೆ ಬಳಿಕ ಪ್ರತಿಕ್ರಿಯೆ ನೀಡಿದರು.

ವೇದಿಕೆಯ ಗೌರವಾಧ್ಯಕ್ಷ ಕೊಂಕಣಿ ಸಾಹಿತ್ಯ ಅಕಾಡೆಮಿಕ ಮಾಜಿ ಅಧ್ಯಕ್ಷ ರಾಯ್ ಕ್ಯಾಸ್ಟಲಿನೋ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದಸಂಸ ರಾಜ್ಯ ಸಂಘಟನಾ ಸಂಚಾಲಕರಾದ ಎಂ.ದೇವದಾಸ್, ಲೇಖಕ ಅಧ್ಯಾಪಕ ಡಾ.ವಾಸುದೇವ ಬೆಳ್ಳೆ, ನ್ಯಾಯವಾದಿಗಳ ಸಂಘದ ಯಶವಂತ ಮರೋಳಿ, ವಿಕಾರ್ ಜನರಲ್ ಫಾದರ್ ರೆನ್ನಿಸ್ ಮೊರಾಸ್ ಪ್ರಭು, ಸಮಾಜ ಕಾರ್ಯಕರ್ತರಾದ ಸುಶೀಲ್ ನೊರೊನ್ಹಾ, ರಫೀಕ್ ಮಾಸ್ಟರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು, ಯುವಜನರಿಂದಲೂ ಪುರಭವನ ತುಂಬಿ ತುಳುಕಿತ್ತು. ●

ಹೋರಾಟಗಾರರು ಜನಪದ ಸಂಸ್ಕೃತಿ ಅರಿಯಬೇಕು: ಬಿಳಿಮಲೆ

ಲಿಖಿತ ಜ್ಞಾನ ಸಂಪತ್ತನ್ನು ಕೈವಶ ಮಾಡಿದ್ದ ಬ್ರಾಹ್ಮಣ ವರ್ಗದ ಸಹಯೋಗದೊಂದಿಗೆ ಬ್ರಿಟಿಷ್ ವಸಾಹತುಶಾಹಿಯು ರಚಿಸಿಕೊಟ್ಟ ಚರಿತ್ರೆಯನ್ನೇ ದೇಶದ ಸಂಸ್ಕೃತಿ ಎಂದು ನಂಬಲಾಗುತ್ತಿದೆ. ಶೇ.97ರಷ್ಟು ಜನರು ಮೌಖಿಕವಾಗಿ ಉಳಿಸಿಕೊಂಡು ಬಂದ ಸಂಸ್ಕೃತಿ ವಿಸ್ಮೃತಿಗೂ ಅವಗಣನೆಗೂ ಈಡಾಗಿದೆ. ಸ್ವಾತಂತ್ರ್ಯದ ಬಳಿಕ ನಾವು ನಂಬಿ ಅರಿತಿರುವ ಸಂಸ್ಕೃತಿ ಕೇವಲ 2–3% ಜನರ ಸಂಸ್ಕೃತಿಯಾಗಿದೆ. ಯುವ ತಲೆಮಾರು ಮತ್ತು ಹೋರಾಟಗಾರರು ಮರವೆಯಲ್ಲಿ ಇಡಲಾದ ನಮ್ಮ ಜನಪದ ಸಂಸ್ಕೃತಿಯನ್ನು ಅರಿತುಕೊಳ್ಳಬೇಕು. ಅದರಲ್ಲಿ ಇರುವ ತಳಮೂಲದ ಜನತೆಯ ಬದುಕು, ಬವಣೆ, ಹೋರಾಟ, ತ್ಯಾಗ, ವೀರತ್ವವನ್ನು ಮುನ್ನೆಲೆ ತಂದು ಜನಪರ ಹೋರಾಟಗಳಿಗೆ ಪ್ರೇರಣೆಯನ್ನು ಪಡೆಯಬೇಕಾಗಿದೆ ಎಂದು ಜೆಎನ್‌ಯು ಪ್ರಾಧ್ಯಾಪಕ ಹಾಗೂ ಜಾನಪದ ತಜ್ಞ ಪ್ರೊ.ಪುರುಷೋತ್ತಮ ಬಿಳಿಮಲೆ ಹೇಳಿದರು.

ಅವರು ನವಂಬರ್ 6 ರಂದು ಮಂಗಳೂರಿನಲ್ಲಿ ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಏರ್ಪಡಿಸಿದ್ದ ಉಪನ್ಯಾಸ-ಸಂವಾದ ಕಾರ್ಯಕ್ರಮದಲ್ಲಿ 'ತುಳುನಾಡಿನ ಜನಸಂಸ್ಕೃತಿ ಮತ್ತು ಹೊಸತಲೆಮಾರು' ಕುರಿತು ಮಾತನಾಡಿದರು.

ವಸಾಹತುಶಾಹಿಗಳು ತುಳುನಾಡು-ಕರಾವಳಿಗೆ ಆಗಮಿಸಿದ ಆನಂತರ ಇಲ್ಲಿನ ಚರಿತ್ರೆಯನ್ನು ದಾಖಲಿಸಲು ಆರಂಭಿಸಿದಾಗ ಅವರಿಗೆ ಸಹಕಾರಿಯಾಗಿದ್ದವರು ಇಲ್ಲಿನ ಅಕ್ಷರ ಜ್ಞಾನ ಹೊಂದಿದ ಮೇಲುಜಾತಿಯ ವೈದಿಕ ಜನರು. ಆ ಕಾರಣದಿಂದ ತುಳುನಾಡಿನ ಚರಿತ್ರೆ ಅವರ ಪ್ರಬಾವದಿಂದ ಕೇವಲ ವೈದಿಕ ಪರಂಪರೆಗೆ ಸೀಮಿತವಾಯಿತು. ಬಹುಸಂಖ್ಯೆಯ ಕೆಳಸಮುದಾಯ ಅಕ್ಷರ ಜ್ಞಾನದಿಂದಲೂ ವಂಚಿತವಾಗಿದ್ದ ಸಮುದಾಯವಾಗಿತ್ತು ಎಂದವರು ತಿಳಿಸಿದರು.

ಇತ್ತೀಚಿನ ಎರಡು ದಶಕಗಳಲ್ಲಿ ತುಳುನಾಡಿನ ಸಂಸ್ಕೃತಿಯಲ್ಲಿ ವೇಗವಾಗಿ ಸಾಕಷ್ಟು ಬದಲಾವಣೆಗಳು ನಡೆಯುತ್ತಿವೆ. ಅದರಲ್ಲಿಯೂ ಗರಿಷ್ಠ ಪ್ರಮಾಣದಲ್ಲಿ ವೈದಿಕ ಸಂಸ್ಕೃತಿಯ ಪ್ರಭಾವ ಇಲ್ಲಿನ ಜನಸಂಸ್ಕೃತಿಯನ್ನು ಮರೆಮಾಡುತ್ತಾ ಬಂದಿದೆ. ವೈದಿಕ ಸಂಸ್ಕೃತಿಯ ಪ್ರಚಾರ ವ್ಯಾಪಕವಾಗಿ ನಡೆಯುತ್ತಿದ್ದು ಏಕಾಕೃತಿಯ ಮಾದರಿಯಲ್ಲಿ ಗ್ರಹಿಸುವ ವಿವರಿಸುವ ಸ್ಥಿತಿಗೆ ನಮ್ಮನ್ನು ತಂದು ನಿಲ್ಲಿಸಿದೆ. ಜನಸಂಸ್ಕೃತಿಯಲ್ಲಿ ಮೇಲುವರ್ಗಕ್ಕೆ ಸವಾಲು ಒಡ್ಡಿದ್ದ ಕೋಟಿಚೆನ್ನಯರ ಪ್ರಾಕ್‌ಗುಡಿಗಳ ನಿರ್ಮಾಣ ಸಂಬಂಧ ಅಷ್ಟಮಂಗಳ ಪ್ರಶ್ನೆಯನ್ನು ಇಡಲಾಗಿದೆ. ಅಲ್ಲದೆ ಕೋಟಿಚೆನ್ನಯರಿಂದ ಕೊಲ್ಲಲ್ಪಟ್ಟ ಪಾಳೆಯಗಾರಿ ಪ್ರತಿನಿಧಿ ಬುದ್ಯಂತನ ಗುಡಿ ನಿರ್ಮಿಸುವ ಪ್ರಸ್ತಾವವಾಗುತ್ತಿರುವುದು ತುಳುವರ ಬೌದ್ಧಿಕತೆ ನಷ್ಟವಾಗಿರುವ ಸಂಕೇತವಾಗಿದೆ. ಹಸಿವಿನ ಸಂಕೇತವಾಗಿರುವ ಕೊರಗ ತನಿಯ, ಪ್ರತಿಭಟನೆಯ ಧ್ವನಿಗಳಾಗಿರುವ ಕೋಡ್ದಬ್ಬು ಹಾಗೂ ಕಲ್ಕುಡ-ಕಲ್ಲುರ್ಟಿಯರ ಪುರುಷಾಧಿಪತ್ಯವನ್ನು ತಿರಸ್ಕರಿಸಿದ ಸಿರಿ ಅಲ್ಲದೆ ಇನ್ನೂ ಅನೇಕ ತುಳುವ ಜನಸಂಸ್ಕೃತಿಯ ನಾಯಕರ ಆರಾಧನೆಯಲ್ಲಿ ವೈದಿಕ ಪ್ರಭಾವ ಹಾಗೂ ನಿಯಂತ್ರಣ ದಟ್ಟೈಸಿದೆ. ಇಂತಹ ಸನ್ನಿವೇಶದಲ್ಲಿ ಸಮಕಾಲೀನ ಬೆಳವಣಿಗೆಯನ್ನು ನಿರಾಕರಿಸಿ ಏಕಾಕೃತಿಯ ಮಾದರಿಯ ವಿರುದ್ಧವಾಗಿ ಬಹುತ್ವದ ಮಾದರಿಯನ್ನು ಹೊಂದಿರುವ ತುಳುನಾಡಿನ ಜನಪದರು ಕಟ್ಟಿಕೊಂಡು ಬಂದಿರುವ ಪಾಡ್ದನ ಮತ್ತು ಆಚರಣೆಗಳಲ್ಲಿರುವ ಮೌಖಿಕ ಸಂಸ್ಕೃತಿಯನ್ನು ಎಚ್ಚರಿಕೆಯಿಂದ ಗ್ರಹಿಸಿಕೊಂಡು ಅಭ್ಯಾಸ ಮಾಡಲು ಪ್ರೊ.ಪುರುಷೋತ್ತಮ ಬಿಳಿಮಲೆ ಯುವ ತಲೆಮಾರಿಗೆ ಕರೆ ನೀಡಿದರು.

ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕ ಮಾತುಗಳನ್ನಾಡಿದರು. ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ವೇದಿಕೆ ಮೇಲಿದ್ದರು. ●

ಬಿಜೆಪಿ ಪರಿವರ್ತನಾ ಯಾತ್ರೆ: "ಫ್ಲಾಪ್ ಶೋ".... ಪುಟ 3 ರಿಂದ

ಎಂಬ ಹೆಸರನ್ನಾದರೂ ಸಾರ್ಥಕಗೊಳಿಸುವ ಏನೂ ಯಾತ್ರೆಯಲ್ಲಿ ಇರಲಿಲ್ಲ. "ನವ ಕರ್ನಾಟಕ" ಎಂದರೇನು? ಅದರ ನಿರ್ಮಾಣಕ್ಕೆ ಯಾವ ರೀತಿಯ "ಪರಿವರ್ತನೆ" ಹೇಗೆ ತರಲಾಗುತ್ತದೆ? ಎಂಬ ಬಗ್ಗೆ ಏನೂ ಇರಲಿಲ್ಲ. ಆದ್ದರಿಂದ "ಪಶ್ಚಾತ್ತಾಪ ಯಾತ್ರೆ", ಕಾಂಗ್ರೆಸ್-ಜೆಡಿ-ಎಸ್ ನವರನ್ನು "ಪರಿವರ್ತಿಸುವ ಯಾತ್ರೆ" "ಭ್ರಷ್ಟರನ್ನು ಶುದ್ಧರಾಗಿ ತೋರಿಸುವ ಯಾತ್ರೆ" ಇತ್ಯಾದಿಯಾಗಿ ಗೇಲಿಗೆ ಒಳಗಾಯಿತು. ಕೇಂದ್ರದಲ್ಲಿ ಈಗಿನ ಬಿಜೆಪಿಯ ಮೂರುವರೆ ವರ್ಷಗಳ ಆಡಳಿತದ ವೈಖರಿ, ಹತ್ತು ದೊಡ್ಡ ಆಶ್ವಾಸನೆಗಳನ್ನು ಕೊಟ್ಟು ಒಂದನ್ನೂ ಪ್ರಾಮಾಣಿಕವಾಗಿ ಈಡೇರಿಸದೆ ಹೋಗಿದ್ದು ಜನರಲ್ಲಿ ಭ್ರಮ ನಿರಸನ ಉಂಟು ಮಾಡಿದೆ. ಹಿಂದಿನ ಬಿಜೆಪಿ ರಾಜ್ಯ ಸರಕಾರದ ರೆಕಾರ್ಡು ಸಹ ಭರವಸೆ ಹುಟ್ಟಿಸುವಂತಹುದಲ್ಲ. ಅಲ್ಲದೆ ರಾಜ್ಯದ ಪ್ರಮುಖ ವಿಷಯಗಳನ್ನು ಎತ್ತಿಕೊಳ್ಳದೆ ಕೋಮುವಾದಿ ಮತ್ತಿತರ ಅಸಂಭದ್ಧ ವಿಷಯಗಳತ್ತ ಗಮನ ತಿರುಗಿಸುವ ಬಿಜೆಪಿಯ ತಂತ್ರ ಸಹ ಜನರಿಗೆ ಜುಗುಪ್ಸೆ ಹುಟ್ಟಿಸುತ್ತಿದೆ. ವಿರೋಧಿ ಸರಕಾರಗಳಿಗೆ ಗವರ್ನರ್ ಬಳಸಿ ಕಿರುಕುಳ ಕೊಡುವ, ಇತರ ಪಕ್ಷಗಳನ್ನು ಒಡೆಯುವ, ಹಣ-ಅಧಿಕಾರದ ಆಮಿಷದ ಮೇಲೆ ನಾಯಕರನ್ನು ಎಳೆಯುವ ಮತ್ತಿತರ ಕೊಳಕು ರಾಜಕಾರಣದಿಂದ ಜನ ರೋಸಿ ಹೋಗಿದ್ದಾರೆ. ಇದೇ ಬಿಜೆಪಿ ಪರಿವರ್ತನಾ ಯಾತ್ರೆ "ಫ್ಲಾಪ್ ಶೋ" ಆಗಲು ಪ್ರಮುಖ ಕಾರಣ ಎನ್ನಬಹುದು.

ಇದೇ ವೈಖರಿಯಲ್ಲಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿ(ಎಸ್) ನ "ವಿಕಾಸ ಯಾತ್ರೆ" ಉದ್ಘಾಟಿಸಲಾಯಿತು. ಜೆಡಿ-ಎಸ್ ಚುನಾವಣಾ ಪ್ರಚಾರವನ್ನು "ಕುಮಾರ ಪರ್ವ-2018" ಎಂದು ಕರೆಯಲಾಗಿದೆ. ಚಾಮುಂಡೇಶ್ವರಿ ಕ್ಷೇತ್ರ ಉದ್ಘಾಟನೆಗೆ ಆಯ್ಕೆ ಮಾಡಿದ್ದಕ್ಕೆ ಕಾರಣ ಅಲ್ಲಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬುದು. ಅಲ್ಲಿ ಮಾಡಲಾದ ಭಾಷಣಗಳು ಮತ್ತು ಆ ಮೇಲಿನ ಹೇಳಿಕೆಗಳಲ್ಲಿ ರಾಜ್ಯದ ಸಮಸ್ಯೆಗಳ ಬಗ್ಗೆ ಬದಲಿ ನೀತಿಗಳ ಬದಲಿ ರಾಜಕಾರಣದ ಯಾವುದೇ ಭರವಸೆಗಳೂ ಇರಲಿಲ್ಲ. "ಸಿದ್ದರಾಮಯ್ಯನವರು ಠೇವಣಿ ಕಳೆದುಕೊಳ್ಳುವಂತೆ ಮಾಡಿ" ಎಂಬುದು ಸಮಾವೇಶದ ಪ್ರಮುಖ ಘೋಷಣೆಯಾಗಿತ್ತು! ಬಿಜೆಪಿ ಕಾಂಗ್ರೆಸುಗಳ ಕಿತ್ತಾಟದಲ್ಲಿ ಯಾರಿಗೂ ಬಹುಮತ ಬರದೆ ತಾನು "ಕಿಂಗ್ ಮೇಕರ್" ಆಗಬಹುದು ಎಂಬುದಷ್ಟೇ ಅದರ ಸೀಮಿತ ದರ್ಶನವಿದ್ದಂತೆ ಕಾಣುತ್ತದೆ. ನವೆಂಬರ್ 8 ರಂದು ನೋಟು ನಿಷೇಧದ ವಾರ್ಷಿಕದ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದಾಗ ಜೆಡಿ-ಎಸ್ ಜಾಣಮೌನ ವಹಿಸಿತ್ತು. ಅದೇ ಅದರ ರಾಜಕೀಯ ದಿವಾಳಿತನವನ್ನು ತೋರಿಸುತ್ತದೆ. ●

ಹರೇಕಳದಲ್ಲಿ ನಿವೇಶನ ರಹಿತರ ಫಲಾನುಭವಿಗಳ ಪಟ್ಟಿ ಬಿಡುಗಡೆ:

ಉಳ್ಳಾಲ ವಲಯದ ಹರೇಕಳ ಗ್ರಾಮ ಪಂಚಾಯತು ವ್ಯಾಪ್ತಿಯಲ್ಲಿ ನಿವೇಶನ ರಹಿತರು ಡಿವೈಎಫ್‌ಐ ನೇತೃತ್ವದಲ್ಲಿ ನಿವೇಶನಕ್ಕಾಗಿ ಆಗ್ರಹಿಸಿ ಗ್ರಾ.ಪಂ.ವಿರುದ್ಧ ಪ್ರತಿಭಟನೆ ಮಾಡಿ, ಪರಿಣಾಮವಾಗಿ ನಿವೇಶನ ರಹಿತರ ಪಟ್ಟಿ ಸಿದ್ಧಪಡಿಸದೆ ಇರುವ ಬಗ್ಗೆ ಕಳೆದ ತಿಂಗಳು ಪ್ರತಿಭಟನೆ ಮಾಡಿದ್ದರೂ ಆದಾಗ್ಯೂ ಪಟ್ಟಿ ಪ್ರಕಟಿಸದೆ ಇರುವುದರ ವಿರುದ್ಧ ನವಂಬರ್ 7 ರಂದು ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಗ್ರಾ.ಪಂ. ಎದುರುಗಡೆ ಹಮ್ಮಿಕೊಳ್ಳಲಾಗಿತ್ತು.

ಆದರೆ ಧರಣಿ ಮುಂದುವರಿದಿರುವಂತೆಯೇ ಸ್ಥಳಕ್ಕೆ ಆಗಮಿಸಿದ ಕಂದಾಯಾಧಿಕಾರಿ ಪ್ರತಿಭಟನೆಕಾರರ ಜೊತೆ ಮಾತುಕತೆ ನಡೆಸಿ, ಧರಣಿ ನಿರತರ ಬೇಡಿಕೆಯಂತೆ ಅಲ್ಲಿಯೇ ನಿವೇಶನರಹಿತರ ಪಟ್ಟಿ ಬಿಡುಗಡೆ ಮಾಡಿದುದು ಹೋರಾಟಕ್ಕೆ ಸಿಕ್ಕ ಜಯವಾಗಿದೆ. 576 ಅರ್ಜಿದಾರರ ಪೈಕಿ 131 ಮಂದಿ ಅರ್ಹರ ಪಟ್ಟಿ ಬಿಡುಗಡೆ ಮಾಡಲಾಗಿದೆ. ಈ ಪಟ್ಟಿಯ ಅರ್ಜಿದಾರರ ಬಗ್ಗೆ ತಾವೂ ಪರಿಶೀಲನೆ ನಡೆಸುವುದಾಗಿ ಡಿವೈಎಫ್‌ಐ ಪ್ರಕಟಿಸಿದೆ.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಉಪಾಧ್ಯಕ್ಷ ರಫೀಕ್ ಹರೇಕಳ, ಗ್ರಾಮ ಘಟಕಗಳ ಅಶ್ರಫ್ ಹರೇಕಳ, ನಿಯಾಜ್, ಹನೀಫ್, ನಜೀರ್, ಸಿಪಿಐ(ಎಂ) ಕಾರ್ಯಕರ್ತರಾದ ಉಮರಬ್ಬ, ಜನಾರ್ಧನ್, ಸಂತೋಷ್ ಧರಣಿಯಲ್ಲಿ ಭಾಗವಹಿಸಿದ್ದರು. ●


ಬೆಂಗಳೂರು


ಉತ್ತರ ಕನ್ನಡ


ತುಮಕೂರು

ನೋಟು ರದ್ದತಿಯ ವಾರ್ಷಿಕದಂದು ಎಡಪಕ್ಷಗಳ ಪ್ರತಿಭಟನೆ

ಕಳೆದ ವರ್ಷದ ನವಂಬರ್ 8 ರಂದು ರೂ.500 ಮತ್ತು ರೂ.1000 ನೋಟುಗಳ ರದ್ಧತಿಯನ್ನು ಪ್ರಧಾನ ಮಂತ್ರಿಗಳ ಘೋಷಣೆಯೊಂದಿಗೆ ಕೇಂದ್ರದ ಬಿಜೆಪಿ ಸರಕಾರ ಕೈಗೊಂಡುದುದರಿಂದ, ಒಂದು ವರ್ಷದ ಅವಧಿಯಲ್ಲಿ ಸಾಮಾನ್ಯ ಜನತೆ ತುಂಬಾ ಬವಣೆ ಪಡಬೇಕಾಯಿತು. ಕಪ್ಪುಹಣ ನಿಲುಗಡೆ, ಖೋಟಾ ನೋಟು ಬಹಿರಂಗ, ಭ್ರಷ್ಟಾಚಾರ ನಿಲುಗಡೆ, ಭಯೋತ್ಪಾದನೆ ನಿಲುಗಡೆ, ನಗದು ರಹಿತ ಬ್ಯಾಂಕು ವ್ಯವಹಾರ, ನಕ್ಸಲ್‌ವಾದದ ದಮನ–ಇತ್ಯಾದಿ ಯಾವ ಘೋಷಿತ ಉದ್ದೇಶಗಳೂ ಈಡೇರದೆ ಹೋಗಿವೆ. ಕೇಂದ್ರ ಸರಕಾರದ ನೋಟು ರದ್ದತಿಯ ವೈಫಲ್ಯದ ವಿರುದ್ಧ ಮೊನ್ನೆ ನವಂಬರ್ 8 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಎಡಪಕ್ಷಗಳು ಕರೆನೀಡಿದ ಮೇರೆಗೆ ರಾಜ್ಯದಾದ್ಯಂತ ಪ್ರತಿಭಟನೆಯನ್ನು ನಡೆಸಲಾಯಿತು. ಈ ಬಾರಿ ಎಡ ಪಕ್ಷಗಳಲ್ಲದೆ ಕಾಂಗ್ರೆಸ್ ಸೇರಿದಂತೆ ಹೆಚ್ಚು ಕಡಿಮೆ ಎಲ್ಲಾ ವಿರೋಧ ಪಕ್ಷಗಳೂ "ಕಪ್ಪು ದಿನ"ವಾಗಿ ಆಚರಿಸಲು ಕರೆ ಕೊಟ್ಟಿದ್ದವು. ಇದರಿಂದ ಬೆದರಿದ ಬಿಜೆಪಿ, ಆದರೂ ತನ್ನ ಭಂಡತನ ಬಿಡದೆ "ಕಪ್ಪು ಹಣ ವಿರೋಧಿ" ದಿನಕ್ಕೆ ಕರೆ ಕೊಟ್ಟಿತ್ತು. ರಾಜ್ಯದಲ್ಲಿ ಎಡ ಪಕ್ಷಗಳ ಪ್ರತಿಭಟನೆ ಅಲ್ಲದೆ ಕಾಂಗ್ರೆಸ್, ಆಪ್ ಪಕ್ಷಗಳು ಕಪ್ಪು ದಿನ ಆಚರಿಸಿದವು. ಜೆಡಿ–ಎಸ್ ಮಾತ್ರ ಮೌನಕ್ಕೆ ಜಾರಿತ್ತು.

ಬೆಂಗಳೂರು, ಮಂಗಳೂರು, ಧಾರವಾಡ, ಗಜೇಂದ್ರಗಡ, ಕಾರವಾರ, ತುಮಕೂರು, ಹಾಸನಗಳಿಂದ ಎಡ ಪಕ್ಷಗಳ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.


ಮಂಗಳೂರು


ಧಾರವಾಡ


ಹಾಸನ


ಬೆಂಗಳೂರು



ಬೀಗಮುದ್ರೆ ತೆರವು ಮಾಡಿದ ಮದ್ದೂರು ರೈತರು

ಸಾಲದ ಕಾರಣಕ್ಕಾಗಿ ಕೆಸ್ತೂರು ವಿಜಯ ಬ್ಯಾಂಕ್ ಮದ್ದೂರು ತಾಲ್ಲೂಕು ಕುಂದನಕುಪ್ಪೆ ಗ್ರಾಮದ ರೈತ ಚಂದ್ರಶೇಖರ ಕುಟುಂಬದ ಏಕೈಕ ವಾಸದ ಮನೆಯನ್ನು ಬೀಗಮುದ್ರೆ ಹಾಕಿತ್ತು. ಜಪ್ತಿ ಮಾಡಿರುವ ಬ್ಯಾಂಕ್ ನ ರೈತ ವಿರೋಧಿ ಧೋರಣೆ ಖಂಡಿಸಿ, ಕೂಡಲೇ ಬೀಗಮುದ್ರೆ ತೆರವು ಮಾಡಿ ವಾಸಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿ ನವೆಂಬರ್ 3ರಂದು ರಂದು ವೇಳೆ 11–00ಗಂಟೆಗೆ ಬ್ಯಾಂಕ್ ಎದುರು ಪ್ರತಿಭಟನೆ ನಡೆಸಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಗಳ ಆಶ್ರಯದಲ್ಲಿ ಈ ಪ್ರತಿಭಟನೆ ನಡೆಯಿತು. ಪ್ರತಿಭಟನೆಗೆ ಸ್ಪಂದಿಸಿದ ಬ್ಯಾಂಕ್ ಬೀಗಮುದ್ರೆ ತೆರವು ಮಾಡಿತು.

– ಟಿ. ಯಶವಂತ

ರೈತರ ನಷ್ಟ ಪರಿಹಾರಕ್ಕೆ ಮತ್ತು ಬೇಡಿಕೆಗೆ ಒತ್ತಾಯಿಸಿ ಪ್ರತಿಭಟನೆ

ಮಳವಳ್ಳಿ ಯಲ್ಲಿ ಬಗರ್ ಹುಕುಂ ಸಾಗುವಳಿ ದಾರರಿಗೆ ಹಕ್ಕು ಪತ್ರಕ್ಕಾಗಿ ಪೋಡಿರಹಿತ ಜಮೀನು ಗಳನ್ನ ದುರಸ್ತಿಗಾಗಿ ಮಳೆಯಿಂದ ನಷ್ಟಕ್ಕೆ ಒಳಗಾಗಿಗಿರುವ ರೈತರಿಗೆ ಪರಿಹಾರಕ್ಕಾಗಿ ಮುಂತಾದ ಬೇಡಿಕೆ ಗಳಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು. ಸ್ಥಳಕ್ಕೆ ತಹಸೀಲ್ದಾರ್ ಕೃಷಿ. ತೋಟಗಾರಿಕೆ ಇಲಾಖೆ ಗಳ ಎ ಡಿ ಗಳು ತಾಲ್ಲೂಕು ಪಂಚಾಯತಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಲೀಡ್ ಬ್ಯಾಂಕ್ ಮತ್ತು **SBI** ಮ್ಯಾನೇಜರ್ ರವರು ಭಾಗವಹಿಸಿ ಕೆಲವು ಭರವಸೆಗಳನ್ನು ಈಡೇರಿಸಿದರೆ ಮತ್ತೆ ಕೆಲವನ್ನ ಕಾಲಾವಕಾಶ ಕೋರಿ ಈಡೇರಿಸುವ ಭರವಸೆ ನೀಡಿದರು.



ಮೂಲಭೂತ ಸೌಕರ್ಯಗಳಿಗಾಗಿ ಧರಣಿ

ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಬಡವರಿಗೆ ಹಕ್ಕು ಪತ್ರ, ಕುಡಿಯುವ ನೀರು, ವಿದ್ಯುತ್, ರಸ್ತೆ. ಚರಂಡಿ ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ ಒತ್ತಾಯಿಸಿ ಮಂಡ್ಯ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ. ಮಂಡ್ಯ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅನಿರ್ದಿಷ್ಟ ಧರಣಿ ನಡೆಯಿತು.



ಅತಿಥಿ ಅಂಕಣ



ದಕ್ಷಿಣದಲ್ಲಿ ಸಮೃದ್ಧಿ–ಸಹಿಷ್ಣುತೆ, ಉತ್ತರದಲ್ಲಿ ದುಸ್ಥಿತಿ–ಅಸಹಿಷ್ಣುತೆ! ಏಕೆ?!



ಕೃಪೆ: ಸತೀಶ್ ಆಚಾರ್ಯ

ಪ್ರೊ. ಟಿ.ಆರ್. ಚಂದ್ರಶೇಖರ

ನನಗೆ ಕಳೆದ ಎರಡು–ಮೂರು ವರ್ಷಗಳಿಂದ ಹಿಂದುತ್ವ ಶಕ್ತಿಗಳಿಗೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ನೆಲೆ ದೊರೆಯುತ್ತಿಲ್ಲಏಕೆ ಎಂಬ ಪ್ರಶ್ನೆ ಕಾಡುತ್ತಿದೆ.ಇದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನವೇ ಪ್ರಸ್ತುತ ಲೇಖನ. ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಹಿಂದುತ್ವಕ್ಕೆ ಭಿನ್ನವಾದ ರಾಜಕೀಯ ಪಕ್ಷಗಳು ಅಧಿಕಾರ ನಡೆಸುತ್ತಿವೆ. ಈ ಬಗೆಯ ಹಿಂದುತ್ವಕ್ಕೆ ವಿರುದ್ಧವಾದ ರಾಜಕೀಯ–ಕ್ಕೆ ಇಲ್ಲಿ ದೊಡ್ಡ ಚರಿತ್ರೆಯಿದೆ. ಕಳೆದ ಶತಮಾನದ ಆದಿ ಭಾಗದಲ್ಲಿ ಹುಟ್ಟಿಕೊಂಡ ಬ್ರಾಹ್ಮಣೇತರ ಚಳುವಳಿಯ ಮೂಲದಲ್ಲಿ ದಕ್ಷಿಣ ಭಾರತದ ಇಂದಿನ ರಾಜಕೀಯ ಸ್ವರೂಪದ ಬೇರುಗಳಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಬ್ರಾಹ್ಮಣೇತರ ಚಳುವಳಿಯ ಮೂಲಕ 1919ರಲ್ಲಿ ಹಳೆಯ ಮದರಾಸು ಪ್ರಾಂತದಲ್ಲಿ ಜಸ್ಟೀಸ್ ಪಾರ್ಟಿಯು(ಸೌತ್ ಇಂಡಿಯನ್ ಲಿಬರಲ್ ಫೆಡರೇಶನ್) ಅಧಿಕಾರಕ್ಕೆ ಬಂದಿತ್ತು. ಅದರ ಕೂಸುಗಳೆ ಇಂದು ತಮಿಳುನಾಡಿನಲ್ಲಿರುವ ದ್ರಾವಿಡ ಪಕ್ಷಗಳು. ಈ ಬ್ರಾಹ್ಮಣೇತರ ಚಳುವಳಿಯ ಪ್ರಭಾವವನ್ನು ಕರ್ನಾಟಕದ ರಾಜಕೀಯದಲ್ಲಿಯೂ ಕಾಣಬಹುದಾಗಿದೆ. ಮೈಸೂರು ಸಂಸ್ಥಾನದಲ್ಲಿ 1916ರಲ್ಲಿ ಹಿಂದುಳಿದ ವರ್ಗಗಳ ಹಿತಾಸಕ್ತಿಗಳನ್ನು ಒತ್ತಾಯಿಸುವ ಉದ್ದೇಶದಿಂದ 'ಪ್ರಜಾ ಮಿತ್ರ ಮಂಡಳಿ' ಅಸ್ತಿತ್ವಕ್ಕೆ ಬಂದಿತು. ಬ್ರಾಹ್ಮಣೇತರ ಚಳುವಳಿಯ ಕಾರಣದಿಂದ ಮೈಸೂರು ಸಂಸ್ಥಾನದಲ್ಲಿ 1920ರಲ್ಲಿ ಸರ್ಕಾರಿ ಉದ್ಯೋಗದಲ್ಲಿ ಮತ್ತು ಶಿಕ್ಷಣದಲ್ಲಿ ಮೀಸಲಾತಿ ಕ್ರಮ ಜಾರಿಗೆ ಬಂತು. ಸಮಾನತೆ ಮೌಲ್ಯವನ್ನು ಬದುಕುತ್ತ ಬಂದಿರುವ ದಕ್ಷಿಣ ಭಾರತದ ರಾಜ್ಯಗಳಲ್ಲಿ ಅಸಮಾನತೆ ಅನ್ನುವುದು ಇಲ್ಲವೇ ಇಲ್ಲ ಎಂದು ಹೇಳಲು ಬರದಿದ್ದರೂ ಅದರ ತೀವ್ರತೆಯು ಉತ್ತರ ಭಾರತದಲ್ಲಿರುವಷ್ಟು ಉಗ್ರ ಸ್ವರೂಪದಲ್ಲಿಲ್ಲ. ಸಮಾನತೆಗಾಗಿ ಚಳುವಳಿಗಳನ್ನು ಜೀವಂತವಾಗಿಟ್ಟುಕೊಂಡಿರುವ ಪ್ರದೇಶ ದಕ್ಷಿಣ ಭಾರತ.ಕರ್ನಾಟಕದಲ್ಲಿ ಬಸವಣ್ಣ, ಕೇರಳದಲ್ಲಿ ನಾರಾಯಣಗುರು, ತಮಿಳುನಾಡಿನಲ್ಲಿ ಪೆರಿಯಾರ್ ಮುಂತಾದವರು ಹಚ್ಚಿಟ್ಟ ಸಮಾನತೆಯ ಜ್ಯೋತಿ ದಕ್ಷಿಣ ಭಾರತದಲ್ಲಿ ಇನ್ನು ಉರಿಯುತ್ತಿದೆ. ಸಾಮಾಜಿಕ ನ್ಯಾಯ ಅನ್ನುವುದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನರ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಉತ್ತರ ಭಾರತದಲ್ಲಿ ಅದಕ್ಕೆ ಎಷ್ಟೊಂದು ವಿರೋಧವಿದೆ ಅನ್ನುವುದು ಹಿಂದೆ ನಡೆದ ಮಂಡಲ್ ಸಮಿತಿ ವರದಿ ವಿರೋಧಿ ಚಳುವಳಿಯು ಸಾಕ್ಷಿಯಾಗಿದೆ.

ಇಂದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದುತ್ವವಾದಿ ಪಕ್ಷಕ್ಕೆ ಪ್ರತಿಯಾಗಿ ಹಿಂದುಳಿದ ವರ್ಗಗಳು ಪ್ರಧಾನವಾಗಿರುವ, ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ರಾಜಕೀಯ ಪಕ್ಷಗಳು ಅಧಿಕಾರದಲ್ಲಿವೆ. ಕರ್ನಾಟಕದಲ್ಲಿ ಕಾಂಗ್ರೆಸ್, ತಮಿಳುನಾಡಿನಲ್ಲಿ ಎಐಡಿಎ–ಂಕೆ, ಕೇರಳದಲ್ಲಿ ಎಡಪಕ್ಷಗಳು, ತೆಲಂಗಾಣದಲ್ಲಿತೆಲಂಗಾಣ ರಾಷ್ಟ್ರ ಸಮಿತಿ, ಆಂಧ್ರಪ್ರದೇಶದಲ್ಲಿ ತೆಲುಗುದೇಶಂ, ಪುದುಚೆರಿಯಲ್ಲಿ ಕಾಂಗ್ರೇಸ್ ಪಕ್ಷಗಳು ಅಧಿಕಾರದಲ್ಲಿವೆ. ನಿಜ, ಅಲ್ಲಿಇಲ್ಲಿ ಕೋಮುವಾದಿ ಪಕ್ಷ ಕೆಲವು ಶಾಸನಸಭೆಸ್ಥಾನಗಳನ್ನು ಮತ್ತು ಸಂಸತ್ತಿನ ಸ್ಥಾನಗಳನ್ನು ಗೆದ್ದುಕೊಂಡಿದೆ ಮತ್ತು ಆಳುವ ಪಕ್ಷಗಳ ಜೊತೆ ರಾಜಕೀಯ ಸಂಬಂಧವನ್ನು ಸಾಧಿಸಿಕೊಂಡಿದೆ. ಆದರೆ ಸಾಮಾಜಿಕವಾಗಿ ಅದಕ್ಕೆ ಇಲ್ಲಿ ನೆಲೆ ದೊರೆಯುತ್ತಿಲ್ಲ. ದಲಿತರನ್ನು ಮತ್ತು ಹಿಂದುಳಿದ ವರ್ಗಗಳನ್ನು ನಿರ್ಲಕ್ಷಿಸಿ ರಾಜಕೀಯ ನಡೆಸುವುದು ಸಾಧ್ಯವಿಲ್ಲ ಅನ್ನುವ ಸ್ಥಿತಿ ದಕ್ಷಿಣ ಭಾರತದಲ್ಲಿದೆ.

ಮತಾಂಧತೆ–ಅಸಹಿಷ್ಣುತೆ ಇಲ್ಲದಿರುವುದು ಕಾರಣವೇ?

ಕಳೆದ ನಾಲ್ಕು–ಐದು ದಶಕಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳು ಸಾಪೇಕ್ಷವಾಗಿ ಆರ್ಥಿಕ ಸಮೃದ್ಧತೆಯನ್ನು ಸಾಧಿಸಿಕೊಂಡಿದ್ದರೆ ಉತ್ತರದ ರಾಜ್ಯಗಳು, ಅದರಲ್ಲೂ ಹಿಂದಿ ಪ್ರದೇಶದ ರಾಜ್ಯಗಳು ಎಂದು ಯಾವುದನ್ನೂ ಕರೆಯುತ್ತಿದ್ದೇವೆಯೋ ಅವು ಸಾಪೇಕ್ಷವಾಗಿ ದುಸ್ಥಿತಿಯನ್ನು ಅನುಭವಿಸುತ್ತಿವೆ. ಹಿಂದಿ ಪ್ರದೇಶದ ರಾಜ್ಯಗಳೇನಿವೆ ಅವೆಲ್ಲವೂ ಹಿಂದುತ್ವದ ಕಟ್ಟಾ ಕೇಂದ್ರಗಳಾಗಿವೆ. ಪೂರ್ವ ಮತ್ತು ಪಶ್ಚಿಮ ಭಾಗದ ರಾಜ್ಯಗಳಲ್ಲಿ ವಿಭಿನ್ನವಾದ ರಾಜಕೀಯ ಸ್ವರೂಪವಿದೆ. ಇದಕ್ಕೆ ಪಂಜಾಬ್, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಒರಿಸ್ಸಾ ಮುಂತಾದ ಉದಾಹರಣೆಗಳನ್ನು ನೀಡಬಹುದು. ಈ ಪ್ರಬಂಧದಲ್ಲಿ ಸಮೃದ್ಧತೆ ಮತ್ತು ದುಸ್ಥಿತಿ ಅನ್ನುವುದನ್ನು ಸಾಪೇಕ್ಷವಾಗಿ ಬಳಸಲಾಗಿದೆ. ಸಮೃದ್ಧಿ ಅಂದರೆ ಅಲ್ಲಿ ಕೊರತೆ ಇಲ್ಲವೇ ಇಲ್ಲ ಎಂದು ಅರ್ಥವಲ್ಲ ಅಥವಾ ದುಸ್ಥಿತಿ ಅಂದರೆ ಅಲ್ಲಿ ಸಮೃದ್ಧತೆ ಇಲ್ಲವೇ ಇಲ್ಲ ಎಂದು ಅರ್ಥವಲ್ಲ. ಸಮೃದ್ಧತೆಯ ನಡುವೆ ದುಸ್ಥಿತಿಯು, ದುಸ್ಥಿತಿಯ ನಡುವೆ ಸಮೃದ್ಧತೆಯು ಇರುವುದನ್ನು ಕಾಣಬಹುದು.ಆದರೆ ಸಮೃದ್ಧತೆಯು ದಕ್ಷಿಣ ಭಾರತದಲ್ಲಿ ಪ್ರಧಾನವಾಗಿ ಕಂಡುಬಂದರೆ, ಉತ್ತರ ಭಾರತದ ರಾಜ್ಯಗಳಲ್ಲಿ ದುಸ್ಥಿತಿಯು ದಟ್ಟವಾಗಿ ಕಂಡುಬರುತ್ತದೆ. ಇಲ್ಲಿ ಕೆಲವು ಅಪವಾದಗಳಿರಬಹುದು.

ದಕ್ಷಿಣ ಭಾರತದ ರಾಜ್ಯಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಯನ್ನು ಸಾಧಿಸಿಕೊಂಡಿದ್ದರೆ ಅದಕ್ಕೆ ಅಲ್ಲಿ ಮತಾಂಧತೆ–ಅಸಹಿಷ್ಣುತೆ ಇಲ್ಲದಿರುವುದು ಒಂದು ಕಾರಣವಾಗಿದೆ. ದಕ್ಷಿಣ ಭಾರತದಲ್ಲಿ ಮತಾಂಧತೆಯನ್ನು ಹರಡಲು ಇಂದು ದುಷ್ಟ ಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ಆದರೆ ಅವು ಮೂಲತಃ ಮತಾಂಧತೆಯ ರಾಜ್ಯಗಳಲ್ಲ. ಇಲ್ಲಿ ಸಹಿಷ್ಣುತೆಗೆ ನೂರಾರು ವರ್ಷಗಳ ಚರಿತ್ರೆಯಿದೆ. ಸಮಾನತೆಯ ಹರಿಕಾರ ಬಸವಣ್ಣನ ಒಂದು ಮಾತು ಇಲ್ಲಿ ಉಲ್ಲೇಖನೀಯ. ಅವನು ಹೇಳುತ್ತಾನೆ 'ಶರಣ–

ಗುಜರಾತ್ ಮತ್ತು ಕೇರಳ ಅಭಿವೃದ್ಧಿ ಮಾದರಿಗಳ ಸಾಪೇಕ್ಷ ಸ್ಥಾನಮಾನ			
ಕ್ರ.ಸಂ.	ಅಭಿವೃದ್ಧಿ ಸೂಚಿಗಳು	ಕೇರಳ	ಗುಜರಾತ್
1	ಜನಸಂಖ್ಯೆಯ ಬೆಳವಣಿಗೆ ಪ್ರಮಾಣ(2001–2011)	ಶೇ4.9.	ಶೇ22.7
2	ಲಿಂಗ ಅನುಪಾತ 2011	1058	920
3	ಮಕ್ಕಳ ಲಿಂಗ ಅನುಪಾತ 2011	964	890
4	ಮಹಿಳೆಯರ ಸಾಕ್ಷರತಾ ಪ್ರಮಾಣ 2011	ಶೇ.92.07	ಶೇ.69.67
5	ಸಾಕ್ಷರತೆಯಲ್ಲಿ ಲಿಂಗ ಅಸಮಾನತೆ 2011	ಶೇ3.94	ಶೇ.16.08
6	ಮಹಿಳೆಯರಲ್ಲಿ ಅನಿಮಿಯ(15–49 ವರ್ಷ ವಯೋಮಾನ)2015–16	ಶೇ.34.2	ಶೇ.54.9
7	ಮಕ್ಕಳಲ್ಲಿ ಅನಿಮಿಯ(6 ರಿಂದ 59 ತಿಂಗಳು ವಯೋಮಾನ) 2015–16	ಶೇ35.6	ಶೇ.62.6.
8	ನಿವ್ವಳ ತಲಾ ಆಂತರಿಕ ಉತ್ಪನ್ನ(ತಲಾ ವರಮಾನ)(ಚಾಲ್ತಿ ಬೆಲೆ: 2015–16)	ರೂ.155516	ರೂ.138023
9	ಮಾನವ ಅಭಿವೃದ್ಧಿ ಸೂಚ್ಯಂಕ 2007–08	0.790	0.527
10	ಜನನದಿಂದ ಜೀವನಾಯುಷ್ಯ 2015	78.2 ವರ್ಷಗಳು	69.1 ವರ್ಷಗಳು
11	ಶಿಶು ಮರಣ ಪ್ರಮಾಣ 2015	12	33
12	ಒಟ್ಟು ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಪ್ರಮಾಣ 2011	ಶೇ.45.20	ಶೇ.11.29

ಮೂಲ: (1).ಸೆನ್ಸಸ್ ಆಫ್ ಇಂಡಿಯ 2011. (2). ಆರ್ಥಿಕ ಸಮೀಕ್ಷೆ, 2016–17. ಸಂ.2. ಭಾರತ ಸರ್ಕಾರ. (3) ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್ಎಫ್ಎಚ್ಎಸ್)–4: 2015–16.

ದಕ್ಷಿಣ ಭಾರತದ ರಾಜ್ಯಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಯನ್ನು ಸಾಧಿಸಿಕೊಂಡಿದ್ದರೆ ಅದಕ್ಕೆ ಅಲ್ಲಿ ಮತಾಂಧತೆ–ಅಸಹಿಷ್ಣುತೆ ಇಲ್ಲದಿರುವುದು ಒಂದು ಕಾರಣವಾಗಿದೆ. ದಕ್ಷಿಣ ಭಾರತದಲ್ಲಿ ಮತಾಂಧತೆಯನ್ನು ಹರಡಲು ಇಂದು ದುಷ್ಟ ಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ಆದರೆ ಅವು ಮೂಲತಃ ಮತಾಂಧತೆಯ ರಾಜ್ಯಗಳಲ್ಲ. ಇಲ್ಲಿ ಸಹಿಷ್ಣುತೆಗೆ ನೂರಾರು ವರ್ಷಗಳ ಚರಿತ್ರೆಯಿದೆ.ಕಳೆದ ಹತ್ತಾರು ವರ್ಷಗಳಿಂದ ಗುಜರಾತ್ ಅಭಿವೃದ್ಧಿ ಮಾದರಿಯ ಬಗ್ಗೆ ಮಾತನಾಡಲಾಗುತ್ತಿದೆ. ಅದು ಕೇವಲ ಮಾತಿನಲ್ಲಿದೆಯೆ ವಿನಾ ಕೃತಿಯಲ್ಲಿಲ್ಲ. ಆದರೆ ದಕ್ಷಿಣ ಭಾರತದ ರಾಜ್ಯಗಳ ಅಭಿವೃದ್ಧಿ ಮಾದರಿಯೇನಿದೆ ಅದು ಕೃತಿಯಲ್ಲಿದೆ. ಜನರು ಅದನ್ನು ಅನುಭವಿಸುತ್ತಿದ್ದಾರೆ. ಇದು ವಸ್ತುಸ್ಥಿತಿ.

ರು ಶರಣರಲ್ಲಿ ಗುಣವನರಸುವರೆ? ಕೂಡಲಸಂಗನ ಶರಣರು ನೊಂದು ಸೈರಿಸಬೇಕು'. ಸಮಾನತೆಗೆ ಮತ್ತು ಸಹಿಷ್ಣುತೆಗೆ ಇಲ್ಲಿದೆ ನಿದರ್ಶನ. ಇಲ್ಲಿ ದುಸ್ಥಿತಿಯನ್ನು ಅನುಭವಿಸುತ್ತಿರುವ ವರ್ಗಗಳಿಗೆ ಉದ್ಯೋಗಗಳಲ್ಲಿ ಮತ್ತು ಶಿಕ್ಷಣದಲ್ಲಿ ಮೀಸಲಾತಿ ನೀಡುವ ಕ್ರಮಗಳಿಗೆ ನೂರು ವರ್ಷಕ್ಕೂ ಮಿಕ್ಕು ಚರಿತ್ರೆಯಿದೆ. ಮೈಸೂರು ಸಂಸ್ಥಾನದಲ್ಲಿ 1920ರಲ್ಲಿಯೇ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಘೋಷಿಸಲಾಗಿತ್ತು. ಮದರಾಸ್ ಪ್ರಾಂತದಲ್ಲಿ 1910ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದ ಜಸ್ಟೀಸ್ ಪಾರ್ಟಿಯು 1919ರಲ್ಲಿ ಮದರಾಸ್ ಪ್ರಾಂತದಲ್ಲಿ ಸರ್ಕಾರವನ್ನು ರಚಿಸಿತು. ಬ್ರಾಹ್ಮಣೇತರ ಚಳುವಳಿಯ ಆಧಾರದಲ್ಲಿ ಜಸ್ಟೀಸ್ ಪಾರ್ಟಿಯು ಹಿಂದುಳಿದ ವರ್ಗಗಳಿಗೆ ಶಿಕ್ಷಣದಲ್ಲಿ ಮತ್ತು ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿತು. ಎಲ್ಲಕ್ಕಿಂತ ಮುಖ್ಯವಾಗಿ 1921ರಲ್ಲಿ ಅದು ಮಹಿಳೆಯರಿಗೆ ಮತದಾನದ ಹಕ್ಕನ್ನು ಶಾಸನಾತ್ಮಕವಾಗಿ ನೀಡಿತು. ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಸಂಸ್ಕೃತ ಜ್ಞಾನವನ್ನು ಕಡ್ಡಾಯ ಮಾಡಿದ್ದ ನಿಯಮವನ್ನು ರದ್ದುಪಡಿಸಿ ಹಿಂದುಳಿದ ವರ್ಗಗಳಿಗೆ ವೈದ್ಯಕೀಯ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿತು. ತಿರುವಾಂಕೂರು ರಾಜ ಸಂಸ್ಥಾನವು 1936ರಲ್ಲಿ ಎಲ್ಲರಿಗೂ ದೇವಾಲಯ ಪ್ರವೇಶವನ್ನು ಕಾನೂನುಬದ್ಧಗೊಳಿಸಿತು. ಕೇರಳದ ಅನೇಕ ಸಂಸ್ಥಾನಗಳು ಉದಾರವಾದಿ ನೀತಿಯನ್ನು ಅನುಸರಿಸುತ್ತಿದ್ದವು. ಸಾಮಾಜಿಕ ನ್ಯಾಯದ ಮೂಲವನ್ನು ಬ್ರಾಹ್ಮಣೇತರ ಚಳುವಳಿಯಲ್ಲಿ ಕಾಣಬಹುದು.

ಮಾನವ ಅಭಿವೃದ್ಧಿಯಲ್ಲಿ ವ್ಯತ್ಯಾಸವೇಕೆ?

ಮಹಿಳಾ ಸಮಾನತೆಯನ್ನು ಸಹಜವೆನ್ನುವಂತೆ ಒಪ್ಪಿಕೊಂಡ ಪ್ರದೇಶ ದಕ್ಷಿಣ ಭಾರತ. ಇವುಗಳಿಗೆ ಅಪವಾದಗಳಿಲ್ಲವೆಂದು ಭಾವಿಸಬೇಕಾಗಿಲ್ಲ. ಆದರೆ ಸಮಾಜವು ಹೆಚ್ಚು ಉದಾರಿಯಾಗಿದೆ ಎಂಬುದನ್ನುಒತ್ತಿ ಹೇಳಬೇಕಾಗಿದೆ. ಉದಾಹರಣೆಗೆ ದಕ್ಷಿಣದ ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತೆಯು 2011 ರಲ್ಲಿ ಸರಾಸರಿ ಶೇ.70 ಮೀರಿದ್ದ–ರೆ ಉತ್ತರ ಭಾರತದಲ್ಲಿ ಅದು ಶೇ.60 ಮತ್ತು ಅದಕ್ಕಿಂತ ಕೆಳಮಟ್ಟದಲ್ಲಿದೆ.ಸಾಕ್ಷರತೆಗೆ ಸಂಬಂಧಿಸಿದ ಲಿಂಗ ಅಸಮಾನತೆ 2011ರಲ್ಲಿ ದಕ್ಷಿಣ ಭಾರತದಲ್ಲಿ ಸರಾಸರಿ ಶೇ.15 ಅಂಶಕ್ಕಿಂತ ಕಡಿಮೆಯಿದ್ದರೆ ಉತ್ತರ ಭಾರತದ ರಾಜ್ಯಗಳಲ್ಲಿ ಅದು ಶೇ.20 ಅಂಶಕ್ಕಿಂತ ಅಧಿಕವಿದೆ. ಮಹಿಳಾ ಸಾಕ್ಷರತೆ ಕೇರಳದಲ್ಲಿ ಶೇ.92.07ರಷ್ಟಿದ್ದರೆ ಇದ–ಕ್ಕೆ ವಿರುದ್ಧವಾಗಿ ಉತ್ತರ ಪ್ರದೇಶದಲ್ಲಿ ಅದು 2011ರಲ್ಲಿ ಶೇ.51.36ರಷ್ಟಿತ್ತು. ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವ ರಾಜ್ಯ ಯಾವ ರಾಜ್ಯದಿಂದ ಪಾಠ ಕಲಿಯಬೇಕು ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ಮಹಿಳೆಯರಲ್ಲಿ ಅನಿಮಿಯಾ ಪ್ರಮಾಣ(15–49 ವರ್ಷ ವಯೋಮಾನ) ಬಿಹಾರದಲ್ಲಿ ಶೇ.60ರಷ್ಟು, ಯುಪಿಯಲ್ಲಿ ಶೇ.52ರಷ್ಟಿದ್ದರೆ ಕೇರಳದಲ್ಲಿ ಅದರ ಪ್ರಮಾಣ ಶೇ.34.2 ಮತ್ತು ಕರ್ನಾಟಕದಲ್ಲಿ ಇದು ಶೇ,44.8.

ಅಪೌಷ್ಟಿಕತೆಯನ್ನು ತಜ್ಞರು 'ಮುಚ್ಚಿಟ್ಟ ಹಸಿವು' ಎಂದು ಕರೆಯುತ್ತಾರೆ. ಅಂದರೆ ಅದು ಹಸಿವಿನ ಸೂಚಿಯೂ ಹೌದು. ಅನೇಕ ವರ್ಷಗಳಿಂದ ದಕ್ಷಿಣ ಭಾರತದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಮಾನವ ಅಭಿವೃದ್ಧಿಯಲ್ಲಿ ದೇಶದಲ್ಲಿಯೇ ಉನ್ನತ ಸ್ಥಾನದಲ್ಲಿವೆ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ಇಂದಿನ ರಾಜಕಾರಣವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಸಾಮಾಜಿಕ ನ್ಯಾಯ, ಸಮಾನತೆ, ಮಹಿಳಾ ಹಕ್ಕುಗಳು ಮುಂತಾದ ಪ್ರಗತಿಪರ ಮೌಲ್ಯಗಳ ಆಗರವಾಗಿರುವ ದಕ್ಷಿಣ ಭಾರತದ ರಾಜ್ಯಗಳು ಸಹಜವಾಗಿ ದೇಶದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮುಂಚೂಣಿಯಲ್ಲಿವೆ. ಕೇರಳದ ಮಾನವ ಅಭಿವೃದ್ಧಿ ಸೂಚ್ಯಂಕ 2007–08ರಲ್ಲಿ 0.790ರಷ್ಟಿದ್ದರೆ ತಮಿಳುನಾಡಿನಲ್ಲಿ 0.570ರಷ್ಟಿದೆ. ಯುಎನ್‌ಡಿಪಿ ವರ್ಗೀಕರಣದ ಪ್ರಕಾರ ಕೇರಳವು ಉನ್ನತ ಮಾನವ ಅಭಿವೃದ್ಧಿ ಸೂಚ್ಯಂಕದ ದೇಶಗಳ ಗುಂಪಿಗೆ ಸೇರಿದರೆ ತಮಿಳುನಾಡು ಮಧ್ಯಮಸ್ಥಿತಿ ದೇಶಗಳ ಗುಂಪಿಗೆ ಸೇರುತ್ತದೆ. ಕೇರಳದ ಮಾನವ ಅಭಿವೃದ್ಧಿ ಸೂಚ್ಯಂಕವು (0.790) ಚೀನದ ಸೂಚ್ಯಂಕಕ್ಕಿಂತ (0.738) ಉನ್ನತ ಸ್ಥಿತಿಯಲ್ಲಿದೆ.

ಆದರೆ ಉತ್ತರ ಭಾರತದ ರಾಜ್ಯಗಳು ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕದ ದೇಶಗಳ ಗುಂಪಿಗೆ ಸೇರುತ್ತವೆ. ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶಗಳಲ್ಲಿ ಅದು 0.400ಕ್ಕಿಂತ ಕೆಳಮಟ್ಟದಲ್ಲಿದೆ. ಗುಜರಾತ್ ರಾಜ್ಯವೂ ಕೂಡ ಕೆಳಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕದ ಗುಂಪಿಗೆ ಸೇರುತ್ತದೆ.ಈ ರಾಜ್ಯಗಳಲ್ಲಿ ಶಿಶು ಮರಣ ಪ್ರಮಾಣ 2015ರಲ್ಲಿ 40ಕ್ಕಿಂತ ಅಧಿಕವಾಗಿದೆ. ಉತ್ತರ ಪ್ರದೇಶದಲ್ಲಿ ಅದು 46, ರಾಜಸ್ಥಾನದಲ್ಲಿ 43 ಮತ್ತು ಮಧ್ಯಪ್ರದೇಶದಲ್ಲಿ ಅದು ಅತ್ಯಧಿಕ 50ರ ಮಟ್ಟದಲ್ಲಿದೆ. ಆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ಸಂಬಂಧಿಸಿದಂತೆ ಕೇರಳಲ್ಲಿ ಅದು 12, ಕರ್ನಾಟಕದಲ್ಲಿ 28, ತಮಿಳುನಾಡಿನಲ್ಲಿ ಅದು 19. ಹೀಗೆ ಉತ್ತಮ ಬದುಕಿನ ಸೂಚಿಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳ ಜನರ ಬದುಕು ಸಮೃದ್ಧವಾಗಿದ್ದರೆ ಉತ್ತರ ಭಾರತದ ರಾಜ್ಯಗಳಲ್ಲಿ ಅದು ದುಸ್ಥಿತಿಯಿಂದ ಕೂಡಿದೆ.

ಕೇರಳ vs ಗುಜರಾತ್ ಮಾದರಿ

ದಕ್ಷಿಣ ಭಾರತದ ಕೇರಳ, ಕರ್ನಾಟಕ, ತಮಿಳುನಾಡು, ಪುದುಚೆರಿ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ 2015–16ರ ಒಟ್ಟು ವರಮಾನ(ಚಾಲ್ತಿ ಬೆಲೆಗಳಲ್ಲಿ) ರೂ.36.44 ಲಕ್ಷ ಕೋಟಿ. ಭಾರತದ ವರಮಾನ ರೂ 122.42 ಲಕ್ಷ ಕೋಟಿ. ಅಂದರೆ ಭಾರತದ ಒಟ್ಟು ವರಮಾನದಲ್ಲಿ ದಕ್ಷಿಣ ಭಾರತದ ವರಮಾನದ ಪ್ರಮಾಣ ಶೇ. 29.76. ಆದರೆ ಅದು ಭಾರತದ ಜನಸಂಖ್ಯೆಯಲ್ಲಿ ಪಡೆದಿರುವ ಪಾಲು ಶೇ.18.36. ಆದರೆ ಮಧ್ಯಪ್ರದೇಶ, ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳು ದೇಶದ ಜನಸಂಖ್ಯೆಯಲ್ಲಿ ಶೇ.31.09 ಪಾಲು ಪಡೆದಿವೆ ಮತ್ತು ದೇಶದ ವರಮಾನದಲ್ಲಿ ಅವುಗಳ ವರಮಾನದ ಪ್ರಮಾಣ ಶೇ.15.40. ಕಳೆದ ಹತ್ತಾರು ವರ್ಷಗಳಿಂದ ಗುಜರಾತ್ ಅಭಿವೃದ್ಧಿ ಮಾದರಿಯ

ಪುಟ 10 ಕ್ಕೆ

ಪ್ಯಾರಡೈಸ್ ಪೇಪರ್ಸ್ ಬಿಚ್ಚಿಟ್ಟ ಸಿರಿವಂತರ ಸ್ವರ್ಗಗಳ ರಹಸ್ಯ

ಸೂಪರ್ ಶ್ರೀಮಂತರು ಮತ್ತು ಕಾರ್ಪೋರೇಟ್‌ಗಳು ತೆರಿಗೆ ಆಶ್ರಯಧಾಮಗಳಲ್ಲಿ ಕಂಪೆನಿಗಳನ್ನು ಸ್ಥಾಪಿಸುವುದು, ಅವುಗಳಿಗೆ ಹಣವನ್ನು ವರ್ಗಾಯಿಸುವುದು ಮತ್ತು ಕಪ್ಪು ಹಣವನ್ನು ಬಿಳಿ ಮಾಡುವುದು ಈ ಸಂರಚನೆಯ ಮೇಲೆ ಪ್ಯಾರಡೈಸ್ ಪೇಪರ್ಸ್ ಮತ್ತೊಮ್ಮೆ ಬೆಳಕು ಚೆಲ್ಲಿವೆ.

*** ಪ್ರಕಾಶ್ ಕಾರಟ್**





ಈಗ ಮಾಡಬೇಕಾದ್ದೆಂದರೆ, ಈಗ ಕಾನೂನುಬದ್ಧ ವ್ಯಾಪಾರ ಚಟುವಟಿಕೆ ಎಂದು ಅವಕಾಶ ಪಡೆದಿರುವ ತೆರಿಗೆ ಆಶ್ರಯಧಾಮಗಳನ್ನು ಬಳಸಿಕೊಳ್ಳುವುದನ್ನು ತಡೆಯಲು ಬಲವಾದ ಕ್ರಮಗಳನ್ನು ಕೈಗೊಳ್ಳುವುದು ತಪ್ಪಿತಸ್ಥರನ್ನು ಶಿಕ್ಷಿಸಲು ಮತ್ತು ತೆರಿಗೆ ತಪ್ಪಿಸಲು ಸಾಧ್ಯವಾಗುವಂತೆ ಮಾಡಿರುವ ಲೋಪದೋಷಗಳನ್ನು ಸರಿಪಡಿಸುವ ಸೂಕ್ತ ಕಾನೂನುಗಳು ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಆದರೆ ಕಾರ್ಪೋರೇಟ್ ಮತ್ತು ಅಂತಾರ್ರಾಷ್ಟ್ರೀಯ ಬಂಡವಾಳದ ಸೇವೆಗೆ ನಿಂತಿರುವ ಒಂದು ಸರಕಾರ ಇದನ್ನು ಮಾಡುತ್ತದೆ ಎಂದು ನಿರೀಕ್ಷಿಸುವುದು ಮೊದ್ದುತನವಾಗುತ್ತದೆ.

ತನಿಖಾ ಪತ್ರಕರ್ತರ ಅಂತಾರ್ರಾಷ್ಟ್ರೀಯ ಒಕ್ಕೂಟ (ಐಸಿಐಜೆ)ದ ತನಿಖೆಯ ಆಧಾರದಲ್ಲಿ ಬಿಡುಗಡೆ ಮಾಡಲಾಗಿರುವ ಪ್ಯಾರಡೈಸ್ ಪೇಪರ್‌ಗಳು ತೆರಿಗೆ ತಪ್ಪಿಸುವ ಆಶ್ರಯಧಾಮಗಳು, ಅಪಾರದರ್ಶಕ ಕಂಪೆನಿಗಳು ಮತ್ತು ಹಣಕಾಸು ವ್ಯವಹಾರಗಳ ಒಂದು ಸಂಕೀರ್ಣ ಜಾಲವು ಯಾವ ರೀತಿಯಲ್ಲಿ ಬಹುರಾಷ್ಟ್ರೀಯ ಕಾರ್ಪೊರೇಟ್(ಎಂಎನ್‌ಸಿ)ಗಳು ಮತ್ತು ಅಂತಾರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅಗತ್ಯಗಳನ್ನು ಪೂರೈಸಲು ಬೆಳವಣಿಗೆ ಹೊಂದಿದೆ ಎನ್ನುವುದರ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ.

ಬೆರ್ಮುಡಾದಲ್ಲಿನ ಆಪಲ್‌ಬಿ ಮತ್ತು ಸಿಂಗಾಪುರದಲ್ಲಿನ ಏಷ್ಯಾಸಿಟಿ ಎಂಬ ಎರಡು ಕಂಪೆನಿಗಳ ಸೋರಿಕೆಯಾದ ಹಣಕಾಸು ದಾಖಲೆಗಳು ಹಾಗೂ ಜಗತ್ತಿನ 19 ತೆರಿಗೆ ತಪ್ಪಿಸುವ ಧಾಮಗಳ ಕಂಪೆನಿ ರಿಜಿಸ್ಟರ್‌ಗಳ 13.4 ಮಿಲಿಯ ದಾಖಲೆಗಳ ಪರಿಶೀಲನೆಯನ್ನು ಆಧರಿಸಿವೆ ಈ ಪ್ಯಾರಡೈಸ್ ಪೇಪರ್‌ಗಳು. ಇದಕ್ಕೂ ಮುಂಚೆ 18 ತಿಂಗಳ ಹಿಂದೆ, ಪನಾಮಾ ಪೇಪರ್‌ಗಳು ಪನಾಮಾದಲ್ಲಿನ ಒಂದು ಕಂಪೆನಿಯ ವ್ಯವಹಾರಗಳನ್ನು ಬಯಲಿಗೆಳೆದಿದ್ದವು. ಇದೀಗ ಪ್ಯಾರಡೈಸ್ ಪೇಪರ್‌ಗಳು ಜಗತ್ತಿನ ಅತಿ ಶ್ರೀಮಂತರು ತಮ್ಮ ತಮ್ಮ ದೇಶದಲ್ಲಿ ತೆರಿಗೆ ತಪ್ಪಿಸುವುದಕ್ಕಾಗಿ ಯಾವ ರೀತಿಯಲ್ಲಿ ಹಣವನ್ನು ಅತಿ ತೆರಿಗೆ ಆಶ್ರಯಧಾಮಗಳಿಗೆ ವರ್ಗಾಯಿಸುತ್ತಾರೆ ಎನ್ನುವುದರ ಒಂದು ನಿಕಟ ನೋಟವನ್ನು ಕೊಡುತ್ತಿವೆ. ಎಂಎನ್‌ಸಿಗಳು ಮತ್ತು ಕಾರ್ಪೊರೇಟ್‌ಗಳು ಈ ತೆರಿಗೆ ಆಶ್ರಯತಾಣಗಳಲ್ಲಿ ಉಪ ಕಂಪೆನಿಗಳನ್ನು ತೆರೆಯುವ ಮೂಲಕ ಹೇಗೆ ಅಲ್ಲಿ ತಮ್ಮ ಲಾಭವನ್ನು ಒಯ್ದಿಡುತ್ತವೆ ಎನ್ನುವುದರ ಮೇಲೆ ಗಮನ ಕೇಂದ್ರೀಕರಿಸಿವೆ.

ಇದು ಹಣಕಾಸು ಬಂಡವಾಳ ಹೇಗೆ ಕಾರ್ಯಾಚರಿಸುತ್ತದೆ ಎನ್ನುವುದರ ಒಂದು ಹಾದಿ ತಪ್ಪಿದ ಪ್ರಕ್ರಿಯೆಯೇನಲ್ಲ. ಅದು ಜಾಗತೀಕರಣಗೊಂಡ ಹಣಕಾಸು ಬಂಡವಾಳದಲ್ಲೇ ಅಂತರ್ಗತವಾಗಿರುವಂತದ್ದು. ಅರ್ಥಶಾಸ್ತ್ರಜ್ಞ ಗೇಬ್ರಿಯಲ್ ಝುಕ್‌ಮ್ಯಾನ್ ಸಹಸಂಪಾದಕತ್ವದಲ್ಲಿ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಪ್ರಕಟವಾದ ಒಂದು ವರದಿ ಹೇಳುವ ಪ್ರಕಾರ, ಜಗತ್ತಿನ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ)ದ ಅಂದರೆ 7.8 ಟ್ರಿಲಿಯನ್ ಡಾಲರ್ ಪೈಕಿ ಶೇಕಡಾ ಹತ್ತರಷ್ಟು ಆಯಾ ದೇಶಗಳಲ್ಲಿ ಇರದೆ ಅವನ್ನು ಸಾಗರದಾಚೆಗೆ ಸಾಗಿಸಿಡಲಾಗಿದೆ, ಕೇವಲ ಕಳೆದ ಒಂದು ವರ್ಷದಲ್ಲಿಯೇ ಎಂಎನ್‌ಸಿಗಳ 600 ಬಿಲಿಯ ಯೂರೋ ಲಾಭವನ್ನು ಸಾಗರದಾಚೆಗಿನ ತೆರಿಗೆ ಧಾಮಗಳಿಗೆ ವರ್ಗಾಯಿಸಲಾಗಿದೆ ಎನ್ನುತ್ತಾರೆ ಝುಕ್‌ಮ್ಯಾನ್.

ಅತಿ ಶ್ರೀಮಂತ ಮತ್ತು ದೊಡ್ಡ ಕಾರ್ಪೋರೇಟ್ ಕಂಪೆನಿಗಳು ಈ ರೀತಿಯಲ್ಲಿ ತೆರಿಗೆಯನ್ನು ವಂಚಿಸುವ ಮೂಲಕ ತಮ್ಮ ದೇಶದ ಖಜಾನೆಗೆ ತೆರಿಗೆ ಆದಾಯ ಬರುವುದನ್ನು ತಪ್ಪಿಸುತ್ತಾರೆ. ಈ ಆದಾಯದಿಂದಲೇ ಶಾಲೆಗಳು, ಆಸ್ಪತ್ರೆಗಳು ಮತ್ತು ನಾಗರಿಕರ ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ಸಿಗಬೇಕಾದ್ದು. ಅದನ್ನು ಅವರು ವಂಚಿಸುತ್ತಿದ್ದಾರೆ. ಇದು ಕಾನೂನು ಸಮ್ಮತವಾದುದು ಎನ್ನುವ ಮಾತ್ರಕ್ಕೆ ಅದು ಕಡಿಮೆ ಕೊಳಕಿನದ್ದಾಗಲಾರದು ಅದು ನವ–ಉದಾರವಾದಿ ಬಂಡವಾಳದ ಇಬ್ಬಗೆ ನೀತಿಗಳನ್ನು ಬಯಲು ಮಾಡುತ್ತದೆ– ಅಂದರೆ ಶ್ರೀಮಂತರು ತೆರಿಗೆ ತಪ್ಪಿಸಿಕೊಳ್ಳಲು ಅವಕಾಶ, ಅದೇ ಹೊತ್ತಿಗೆ ಕಷ್ಟಪಟ್ಟು ಒಂದು ಕನಿಷ್ಟ ಸಂಬಳವನ್ನು ಸಂಪಾದಿಸಬೇಕಾದ ನಾಗರಿಕರು ತೆರಿಗೆಗಳನ್ನು ಕಟ್ಟಬೇಕು

ಪ್ಯಾರಡೈಸ್ ಪೇಪರ್‌ಗಳು 714 ಭಾರತೀಯ ಕಂಪೆನಿಗಳು ಮತ್ತು ವ್ಯಕ್ತಿಗಳ ಹೆಸರುಗಳನ್ನು ಹೊರಗೆಡಹಿವೆ. ತೆರಿಗೆ ಧಾಮಗಳಲ್ಲಿ ಕಂಪೆನಿಗಳನ್ನು ಸ್ಥಾಪಿಸಲು ಹಾಗೂ ಹಣವನ್ನು ಕೂಡಿಡಲು ಈ ಎರಡು ಹಣಕಾಸು ಕಂಪೆನಿಗಳನ್ನು ಅವರು ಬಳಸಿಕೊಂಡಿದ್ದಾರೆ. ಈ ಪಟ್ಟಿಯಲ್ಲಿರುವವರ ಪೈಕಿ ಭಾರತದ ಅನೇಕ ದೊಡ್ಡ ಕಂಪೆನಿಗಳಿವೆ, ವಾಣಿಜ್ಯೋದ್ಯಮಿಗಳಿದ್ದಾರೆ ಹಾಗೂ ರಿಯಲ್ ಎಸ್ಟೇಟ್ ಕುಳಗಳೂ ಇದ್ದಾರೆ. ಅವರಲ್ಲಿ ಕೆಲವರು ಬಿಜೆಪಿಗೆ ಸೇರಿದವರಾಗಿದ್ದಾರೆ. ಹಿಂದಿನ ಪನಾಮಾ ಪೇಪರ್ಸ್‌ನಂತೆ ಪ್ಯಾರಡೈಸ್ ಪೇಪರ್ಸ್ ಮೋದಿ ಸರಕಾರದ ಕಪ್ಪು ಹಣದ ವಿರುದ್ಧದ ಹೋರಾಟದ ಮಿಥ್ಯೆಯನ್ನು ಪರಿಣಾಮಕಾರಿಯಾಗಿ ಒಡೆದು ಹಾಕಿಬಿಟ್ಟಿದೆ. ನೋಟುರದ್ಧತಿಗೆ ಒಂದು ವರ್ಷ ತುಂಬುವುದಕ್ಕೆ ಎರಡು ದಿನಗಳಿರುವಾಗ ಈ ಪೇಪರ್ಸ್ ಪ್ರಕಟವಾಗಿವೆ. ನೋಟುರದ್ಧತಿಯಿಂದ ಕಪ್ಪು ಹಣ ಸ್ಥಗಿತಗೊಂಡಿದೆ ಎಂಬ ಮೋದಿ ಸರಕಾರದ ಹೇಳಿಕೆ ಅಸಂಬದ್ಧ ಎನ್ನುವುದನ್ನು ಅವು ರುಜುವಾತು ಪಡಿಸಿವೆ. ಕಪ್ಪು ಹಣದ ಸೃಷ್ಟಿ, ವಿದೇಶದಲ್ಲಿ ಸಂಪತ್ತಾಗಿ ಅದರ ಪರಿವರ್ತನೆ, ಸಾಲ ನೀಡಿಕೆ ಹಾಗೂ ಈ ಹಣಸ ಸುತ್ತು ಸಂಚಾರ– ಈ ಎಲ್ಲವೂ ಪ್ಯಾರಡೈಸ್ ಪೇಪರ್ಸ್‌ಗಳಿಂದ ಬಯಲಾಗಿದೆ.

ನೋಟುರದ್ಧತಿಯು ಈ ಪ್ರಕ್ರಿಯೆಯಲ್ಲಿ ಎಳ್ಳಷ್ಟೂ ವ್ಯತ್ಯಾಸ ಮಾಡಿಲ್ಲ, ಅದು ಅಬಾಧಿತವಾಗಿ ನಡೆಯುತ್ತಿದೆ ಎನ್ನುವುದು ವಾಸ್ತವ ಸಂಗತಿ.

ಮೋದಿ ಸರಕಾರ ಪನಾಮಾ ಪೇಪರ್ಸ್‌ನ ಪಟ್ಟಿಯಲ್ಲಿರುವವರ ಬಗ್ಗೆ ತನಿಖೆ ನಡೆಸಲು ವಿವಿಧ ತನಿಖಾ ಸಂಸ್ಥೆಗಳ ಒಂದು ಗುಂಪನ್ನು ನೇಮಿಸುವುದಾಗಿ ಪ್ರಕಟಿಸಿದೆ. ಅದು ಪ್ಯಾರಡೈಸ್ ಪೇಪರ್ಸ್‌ನಲ್ಲಿರುವ ಭಾರತೀಯರ ವಿವರಗಳ ತನಿಖೆಯನ್ನೂ ನಡೆಸುತ್ತದೆಯಂತೆ. ಅಂದರೆ ಪಟ್ಟಿಯಲ್ಲಿರುವವರು ಘೋಷಣೆ ಮಾಡದ ಕೆಲವು ಆದಾಯಕ್ಕೆ ತೆರಿಗೆ ಮತ್ತು ದಂಡ ವಿಧಿಸಲಾಗುತ್ತದೆ ಎಂದು ತಾನೇ ಇದರ ಅರ್ಥ. ಅದಕ್ಕಿಂತ ಹೆಚ್ಚೇನೂ ಅಲ್ಲ.

ತೆರಿಗೆ ಆಶ್ರಯಧಾಮಗಳಲ್ಲಿ ಕಂಪೆನಿಗಳನ್ನು ಸ್ಥಾಪಿಸುವುದು, ಅವುಗಳಿಗೆ ಹಣವನ್ನು ವರ್ಗಾಯಿಸುವುದು ಮತ್ತು ಕಪ್ಪು ಹಣವನ್ನು ಬಿಳಿ ಮಾಡುವುದು ಈ ಸಂರಚನೆಯ ಬಗ್ಗೆ ತನಿಖೆ ಮಾಡುವುದಿಲ್ಲ ಅಥವಾ ಅವುಗಳನ್ನು ಪ್ರಶ್ನಿಸುವುದೂ ಇಲ್ಲ. ಹಾಗೆ ಮಾಡುವುದೆಂದರೆ ಹಣಕಾಸು ಹೂಡಿಕೆದಾರರನ್ನು ಮತ್ತು ಕೊಳ್ಳೆ ಹೊಡೆಯುವ ದೈತ್ಯ ಹಣಕಾಸು ಬಂಡವಾಳದ ಬುಡಕ್ಕೇ ಸವಾಲು ಹಾಕಿದಂತೆ ಆಗುತ್ತದೆ.

ಈಗ ಮಾಡಬೇಕಾದ್ದೆಂದರೆ, ಈಗ ಕಾನೂನುಬದ್ಧ ವ್ಯಾಪಾರ ಚಟುವಟಿಕೆ ಎಂದು ಅವಕಾಶ ಪಡೆದಿರುವ ತೆರಿಗೆ ಆಶ್ರಯಧಾಮಗಳನ್ನು ಬಳಸಿಕೊಳ್ಳುವುದನ್ನು ತಡೆಯಲು ಬಲವಾದ ಕ್ರಮಗಳನ್ನು ಕೈಗೊಳ್ಳುವುದು ತಪ್ಪಿತಸ್ಥರನ್ನು ಶಿಕ್ಷಿಸಲು ಮತ್ತು ತೆರಿಗೆ ತಪ್ಪಿಸಲು ಸಾಧ್ಯವಾಗುವಂತೆ ಮಾಡಿರುವ ಲೋಪದೋಷಗಳನ್ನು ಸರಿಪಡಿಸುವ ಸೂಕ್ತ ಕಾನೂನುಗಳು ಮತ್ತು ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ತಪ್ಪಿತಸ್ಥರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡರೆ ಭವಿಷ್ಯದಲ್ಲಿ ಈ ರೀತಿಯ ಅಪರಾಧ ಮಾಡುವುದನ್ನು ತಡೆಯುವ ದಿಸೆಯಲ್ಲಿ ಎಚ್ಚರಿಕೆ ಗಂಟೆಯಾಗುತ್ತದೆ. ಆದರೆ ಮೋದಿ ಸರಕಾರ ಇವೆಲ್ಲವನ್ನು ಮಾಡುತ್ತದೆ ಎಂದು ನಿರೀಕ್ಷಿಸುವುದು ಮೊದ್ದುತನವಾಗುತ್ತದೆ. ಇದು ಕಾರ್ಪೊರೇಟ್ ಮತ್ತು ಅಂತಾರ್ರಾಷ್ಟ್ರೀಯ ಬಂಡವಾಳದ ಸೇವೆಗೆ ನಿಂತಿರುವ ಒಂದು ಸರಕಾರ.

ಅನು: ವಿಶ್ವ

ಸಂಸತ್ ಮಾರ್ಗದಲ್ಲಿ ಕಾರ್ಮಿಕರ 'ಮಹಾಪಡಾವ್' ಆರಂಭ

ಪುಟ 2 ರಿಂದ

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಮಾತಾಡುತ್ತ ಕಾರ್ಮಿಕರ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟರು. "ನಾವು ಸರಕಾರ ಬಯಸಿದರೆ ಮಾತುಕತೆಗೆ ಸಿದ್ಧರಿದ್ದೇವೆ, ಅವರು ನಮ್ಮ ಬೇಡಿಕೆಗಳಿಗೆ ಒಪ್ಪದಿದ್ದರೆ ನಮ್ಮ ಹಕ್ಕುಗಳು ಮತ್ತು ಬೇಡಿಕೆಗಳಿಗಾಗಿ ಹೋರಾಟ ಬೀದಿಗಳಲ್ಲಿ ಮುಂದುವರೆಯುತ್ತದೆ" ಎಂದು ಅವರು ಎಚ್ಚರಿಸಿದರು.

ಕಾರ್ಮಿಕರ 12 ಬೇಡಿಕೆಗಳಲ್ಲಿ ಕನಿಷ್ಟ ಕೂಲಿಗಳು, ಸಾಮಾಜಿಕ ಭದ್ರತೆಯ ಕ್ರಮಗಳು, ಸ್ಕೀಮ್ ನೌಕರರ ಖಾಯಮಾತಿ ಮತ್ತು ಕಾನೂನುಬದ್ಧ ಸೌಲಭ್ಯಗಳು, ಸಮಾನ ಕೆಲಸಕ್ಕೆ ಸಮಾನ ಸಂಬಳ ಮುಂತಾದವು ಸೇರಿವೆ.



ಕನಿಷ್ಟ ಕೂಲಿ ವಾಸ್ತವವಾಗಿ 26,000ರೂ. ಆಗಬೇಕು. ಆದರೆ ನಾವು 18,000ವಷ್ಟೇ ಕೇಳುತ್ತಿದ್ದೇವೆ ಎಂದ ತಪನ್ ಸೇನ್ ಸರಕಾರ ಕಾರ್ಪೊರೇಟ್–ಪರ ಅಜೆಂಡಾ ಹೊಂದಿದೆ, ನಾವು ಈ ಬೀದಿಗಳಲ್ಲೇ ಹಲವಾರು ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣವನ್ನು ನಿಲ್ಲಿಸಿದ್ದೇವೆ, ಮತ್ತೆ ಇಲ್ಲಿಯೇ ಅದನ್ನು ನಿಲ್ಲಿಸುತ್ತೇವೆ ಎಂದರು.

ಐಎನ್‌ಟಿಯುಸಿಯ ಅಶೋಕ್ ಸಿಂಗ್ ಮಾತಾಡುತ್ತ ಸರಕಾರ ತನ್ನ ಖಾಸಗೀಕರಣ, ಎಫ್‌ಡಿಐ ಧೋರಣೆಗಳಿಂದ ದೇಶವನ್ನು ಮುಗಿಸಿ ಬಿಡಲು ಪ್ರಯತ್ನಿಸುತ್ತಿದೆ, ಆದರೆ ನಾವು ಹಾಗೆ ಮಾಡಲು ಬಿಡುವುದಿಲ್ಲ, ಅದನ್ನೇ ಮುಗಿಸುತ್ತೇವೆ ಎಂದು ಪ್ರಧಾನ ಮಂತ್ರಿಗಳನ್ನು ಎಚ್ಚರಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಗುರುದಾಸ್ ದಾಸ್‌ಗುಪ್ತ "ಈ ಮಹಾಪಡಾವ್ ಒಂದು ಕಾಳಗವಷ್ಟೇ, ನಾವು ಈಗ ಇಡೀ ಸಮರಕ್ಕೆ ಸಿದ್ಧರಾಗಬೇಕು" ಎಂದರು.

ಮೊದಲ ಅಧಿವೇಶನದ ಎರಡನೇ ಭಾಗದಲ್ಲಿ ವಿವಿಧ ನೌಕರರ ಒಕ್ಕೂಟಗಳ ಮುಖಂಡರು ಮಾತನಾಡಿದರು. ರೈಲ್ವೆ ನೌಕರರ ಎರಡು ಪ್ರಮುಖ ಸಂಘಟನೆಗಳಾದ ಎಐಆರ್‌ಎಫ್ ಪ್ರಧಾನ ಕಾರ್ಯದರ್ಶಿಶಿವಗೋಪಾಲ್ ಮಿಶ್ರ ಮತ್ತು ಎನ್‌ಎಫ್‌ಐಆರ್‌ನ ಪ್ರಧಾನ ಕಾರ್ಯದರ್ಶಿ ರಾಘವಯ್ಯ ಕಾರ್ಮಿಕ ಸಂಘಟನೆಗಳ ವೇದಿಕೆ ಯಾವ ದಿನದಿಂದಲಾದರೂ ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರಕ್ಕೆ ಕರೆ ಕೊಟ್ಟರೆ ಅದರಲ್ಲಿ ರೈಲ್ವೆ ನೌಕರರು ಬಾಗವಹಿಸುತ್ತಾರೆ ಎಂದು ಹೇಳಿದ್ದು ಮಹತ್ವಪೂರ್ಣವಾಗಿತ್ತು.

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ವೆಂಕಟಾಚಲಂ, ಅಖಿಲ ಭಾರತ ರಾಜ್ಯ ಸರಕಾರೀ ನೌಕರರ ಸಂಘದ ಅಡಿಶನಲ್ ಪ್ರಧಾನ ಕಾರ್ಯದರ್ಶಿ ಸುಭಾಷ್ ಲಾಂಬ, ಭಾರತದ ವಿದ್ಯುತ್ ಕಾರ್ಮಿಕರ ಒಕ್ಕೂಟದ ಕಾರ್ಯದರ್ಶಿ ಕೆ.ಕೆ.ದಿವಾಕರನ್, ಅಖಿಲ ಭಾರತ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿ.ಶ್ರೀಕುಮಾರ್, ಅಖಿಲ ಭಾರತ ರಕ್ಷಣಾ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜಗದೀಶ್ ಶ್ರೀಮಾಲಿ ಮತ್ತಿತರ ಮುಖಂಡರು ಮಾತನಾಡಿ ಅನಿರ್ದಿಷ್ಟ ಕಾಲದ ಸಾರ್ವತ್ರಿಕ ಮುಷ್ಕರ ಅಗತ್ಯವಾದರೆ ಅದರಲ್ಲಿ ತಂತಮ್ಮ ವಿಭಾಗಗಳ ನೌಕರರು ಭಾಗವಹಿಸುವುದಾಗಿ ಹೇಳಿದರು.

ಕಾರ್ಮಿಕ ಸಂಘಗಳ ಜಂಟಿ ವೇದಿಕೆ ಎತ್ತಿರುವ ಈ ಬೇಡಿಕೆಗಳು ಕೇವಲ ಕಾರ್ಮಿಕರ ಬೇಡಿಕೆಗಳಲ್ಲ, ಇಡೀ ಜನತೆಯ ಬೇಡಿಕೆಗಳು ಎಂದು ಸಿಐಟಿಯು ಅಧ್ಯಕ್ಷರಾದ ಡಾ.ಹೇಮಲತಾ ಹೇಳುತ್ತಾರೆ.

ದಲಿತ್ ಶೋಷಣ ಮುಕ್ತಿ ಮಂಚ್‌ನ 2ನೇ ರಾಷ್ಟ್ರೀಯ ಸಮ್ಮೇಳನ
ಸಾಮಾಜಿಕ ನ್ಯಾಯದ ಹೋರಾಟಕ್ಕೆ ಹೊಸ ಹುಮ್ಮಸ್ಸು



ವರದಿ: ನಾಗರಾಜ ನಂಜುಂಡಯ್ಯ

ತಮಿಳುನಾಡಿನ ಮಧುರೈ ನಗರದಲ್ಲಿ ನವೆಂಬರ್ 4 ರಿಂದ 6 ರ ವರೆಗೆ ದಲಿತಾ ಶೋಷಣ ಮುಕ್ತಿ ಮಂಚ್ (ಡಿಎಸ್ಎಂಎಂ) ನ 2ನೇ ಅಖಿಲ ಭಾರತ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಒಟ್ಟು 452 ಪ್ರತಿನಿಧಿಗಳು ಇದರಲ್ಲಿ 55 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕದಿಂದ 32 ಪ್ರತಿನಿಧಿಗಳು ಅದರಲ್ಲಿ 10 ಮಹಿಳಾ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಡಿಎಸ್ಎಂಎಂ ನ ಉದ್ಘಾಟನಾ ಸಮಾವೇಶವು 2014 ರಲ್ಲಿ ನವದೆಹಲಿಯಲ್ಲಿ ನಡೆದಾಗ 9 ರಾಜ್ಯಗಳಲ್ಲಿ ಮಾತ್ರ ಇದರ ಸದಸ್ಯ ಸಂಘಟನೆಗಳಿದ್ದವು. ಇದರಲ್ಲಿ ನಮ್ಮ ರಾಜ್ಯ 'ದಲಿತ ಹಕ್ಕುಗಳ ಸಮಿತಿ' (ಡಿಹೆಚ್ಎಸ್) ಕೂಡ ಒಂದಾಗಿತ್ತು. ಇದೀಗ ಈ 2ನೇ ಸಮ್ಮೇಳನದಲ್ಲಿ 22 ರಾಜ್ಯಗಳಿಂದ ಡಿಎಸ್ಎಂಎಂ ಗೆ ವಿವಿಧ ಬಗೆಯ 'ದಲಿತ' ಸಂಘಟನೆಗಳು ಸದಸ್ಯರಾಗಿರುವುದು ದೇಶಾದಾದ್ಯಂತ ಡಿಎಸ್ಎಂಎಂ ನ ವಿಸ್ತರಣೆಗೆ ಸಿಕ್ಕಿರುವ ಮಹತ್ವವಾಗಿದೆ.



ಡಿಎಸ್ಎಂಎಂ ಒಂದು ಜಾತಿಯ ವೇದಿಕೆಯಲ್ಲ. ಈ ವೇದಿಕೆಯ ಆರಂಭವಾಗಿರುವುದು "ಭಾರತ ದೇಶದಲ್ಲಿನ ಪಾಳೇಯಗಾರಿ ವ್ಯವಸ್ಥೆಯ ಭಾಗವಾಗಿರುವ ಜಾತಿ ಪದ್ಧತಿ. ಜಾತಿ-ತಾರತಮ್ಯ ಹಾಗೂ ಅಸ್ಪೃಶ್ಯತಾ ಆಚರಣೆಗಳನ್ನು ನಿರ್ಮೂಲನೆ ಮಾಡುವುದಾಗಿದೆ ಎಂಬ ಸ್ಪಷ್ಟವಾದ ಕಾರ್ಯಯೋಜನೆ ಹಾಗೂ ಕಾರ್ಯತಂತ್ರದ ಆಧಾರದಲ್ಲಿ. ನಮ್ಮ ದೇಶದಲ್ಲಿನ ಜಾತಿ ಪದ್ಧತಿಯು ಮೂಲತಃ ವರ್ಗ ಶೋಷಣೆ ಮತ್ತು ಜಾತಿದಮನ ಎರಡು ಅಂಶಗಳನ್ನು ಹೊಂದಿರುವುದರಿಂದ 'ಜಾತಿ ಪದ್ಧತಿಯ ನಿರ್ಮೂಲನೆ' ಡಿಎಸ್ಎಂಎಂ ನ ಮೂಲ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ಯಾರಾದರೂ ವ್ಯಕ್ತಿಗಳು, ಸಂಘಟನೆಗಳು ಹೋರಾಟದಲ್ಲಿ ಈಗಾಗಲೇ ತಮ್ಮನ್ನು ತೊಡಗಿಸಿಕೊಂಡಿದ್ದರೆ, ಅಂತಹವರು ಡಿಎಸ್ಎಂಎಂ ನ ಸದಸ್ಯರಾಗಬಹುದು

ಹೀಗೆ ಸ್ಪಷ್ಟವಾದ ಕಾರ್ಯಯೋಜನೆಯೊಂದಿಗೆ ಮೂರು ವರ್ಷಗಳ ಹಿಂದೆ ಆರಂಭವಾದ ಈ ವೇದಿಕೆಯೊಂದಿಗೆ ಈಗಾಗಲೇ ದೇಶದಾದ್ಯಂತ ಸಾಕಷ್ಟು ಸಂಘಟನೆಗಳು ಆಕರ್ಷಿಸುತ್ತಿರುವುದು ಈ 2ನೇ ಸಮ್ಮೇಳನದ ಪ್ರಮುಖ ವಿಚಾರವಾಗಿತ್ತು. ಮೂರು ವರ್ಷಗಳ ಹಿಂದೆ ತೆಗೆದುಕೊಂಡ ನಿರ್ಣಯಗಳ ಆಧಾರದಲ್ಲಿ ನಡೆಸಿದ ಕಾರ್ಯ-ಚಟುವಟಿಕೆಗಳು, ಹೋರಾಟಗಳ ಕುರಿತಂತೆ, ವಿಮರ್ಶೆ ಮಾಡಿಕೊಂಡು, ಇದರಿಂದ ಕಲಿತ ಹೊಸ-ಹೊಸ ಪಾಠಗಳನ್ನು ತನ್ನ ಸೈದ್ಧಾಂತಿಕ ಉದ್ದೇಶಗಳ ಹಿನ್ನೆಲೆಯಲ್ಲಿ ಮೈಗೂಡಿಸಿಕೊಳ್ಳಲು ಈ ಸಮ್ಮೇಳನವು ಹೆಚ್ಚು ಆದ್ಯತೆ ಒದಗಿಸಿತು.

ಡಿಎಸ್ಎಂಎಂ ತನ್ನ ಸೈದ್ಧಾಂತಿಕ ಮುನ್ನೋಟದ ಹಾದಿಯ ಕಡೆ ಹೆಜ್ಜೆಯಿಡಲು ಈ 2ನೇ ಸಮ್ಮೇಳನವು ಸುಮಾರು 20 ಕ್ಕೂ ಹೆಚ್ಚು ನಿರ್ಣಯಗಳನ್ನು ಅಂಗೀಕರಿಸಿತು.

ಉದ್ಘಾಟನಾ ಸಮಾರಂಭ :

ಸಮ್ಮೇಳನವನ್ನು ಸಂವಿಧಾನದ ಶಿಲ್ಪಿ ಡಾ। ಬಿ.ಆರ್. ಅಂಬೇಡ್ಕರ್‌ರವರ ಮೊಮ್ಮಗ ಡಾ। ಪ್ರಕಾಶ್ ಅಂಬೇಡ್ಕರ್ ರವರು ಉದ್ಘಾಟಿಸಿದ್ದು ಮಹತ್ವಪೂರ್ಣವಾಗಿತ್ತು. ಅಂಬೇಡ್ಕರ್ ರವರ ವಂಶಜರು ಬದುಕಿರುವಾಗಲೇ, ಅವರನ್ನು ಕೋಮುವಾದಿಗಳು ಹೈಜಾಕ್ (ಅಪಹರಿಸಿ) ಮಾಡುತ್ತಿರುವ ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ, ಭಾರತ ದೇಶದಲ್ಲಿ ದಲಿತರಿಗೆ ಒಂದು ಸ್ವಾಭಿಮಾನದ ಬದುಕನ್ನು ಪಡೆಯುವಲ್ಲಿ ಡಾ। ಅಂಬೇಡ್ಕರ್ ರವರ ಪಾತ್ರವನ್ನು ಯಾರೂ ಅಲ್ಲೆಗೆಳೆಯಲಾರರು. ಸಂವಿಧಾನವು ದಲಿತರಿಗೆ ಕೊಟ್ಟ ರಾಜಕೀಯ ಸಮಾನತೆಯನ್ನು ಮತದಾನಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಆದರೆ ಆರ್ಥಿಕ ಸಮಾನತೆಯ ಮೂಲಭೂತವಾಗಿರುವ ಭೂಮಿ ಹಂಚಿಕೆಯ ವಿಚಾರದಲ್ಲಿ 70 ವರ್ಷಗಳಿಂದ ವಂಚಿಸಲಾಗುತ್ತಿದೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಕಾಶ್ ಅಂಬೇಡ್ಕರ್ ನೆನಪಿಸಿದರು. ನಮ್ಮ ದೇಶದ ಮಾರ್ಕ್ಸ್‌ವಾದಿಗಳು ಹಾಗೂ ದಲಿತ ಚಳುವಳಿಗಳು ಸೇರಿ ಹೋರಾಟ ಮಾಡಬೇಕೆಂಬ ತಮ್ಮ ಹಂಬಲದ ಬಗ್ಗೆ ವಿವರಿಸುತ್ತಾ, ಡಿಎಸ್ಎಂಎಂ ನ ಕಾರ್ಯವನ್ನು ತುಂಬು ಹೃದಯದಿಂದ ಅಭಿನಂದಿಸಿದರು. ತಮ್ಮ ಭಾಷಣದ ಉದ್ದಕ್ಕೂ ಆರ್‌ಎಸ್ಎಸ್ ಹಾಗೂ ಸಂಘ ಪರಿವಾರದ ಗುಂಪುಗಳಿಂದ ಕಳೆದ 2014 ರಿಂದೀಚೆಗೆ ದಲಿತರು ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಗುಜರಾತಿನ ಉನಾ ಪ್ರಕರಣದಿಂದ ಮೊದಲುಗೊಂಡು, ಮುಂಬೈ ನಗರದಲ್ಲಿ ಅಂಬೇಡ್ಕರ್ ರವರ ಭವನ ನಾಶಗೊಳಿಸಿದ್ದು, ದಾದ್ರಿ ಪ್ರಕರಣ, ರೋಹಿತ್ ವೆಮುಲಾ ಪ್ರಕರಣ ಹೀಗೆ ಇವೆಲ್ಲದಕ್ಕೂ ಬಿಜೆಪಿಯ ಪ್ರತಿಗಾಮಿ ಕೋಮುವಾದವೇ ಕಾರಣವೆಂದು ಬಲವಾಗಿ ಪ್ರತಿಪಾದಿಸಿದರು.

'ಸಂವಿಧಾನ'ವೋ ಅಥವಾ 'ಮನುವಾದ'ವೋ?

ಪ್ರಸಕ್ತ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯು, ಆರ್‌ಎಸ್ಎಸ್ ನ ಅಜೆಂಡಾಗಳನ್ನು ಜಾರಿಗೊಳಿಸಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿರುವುದರ ಬಗ್ಗೆ ಉದಾಹರಣೆಗಳ ಮೂಲಕ ಪ್ರಕಾಶ್ ಅಂಬೇಡ್ಕರ್ ರವರು ತಮ್ಮ ಉದ್ಘಾಟನಾ ಬಾಷಣದಲ್ಲಿ ತಿಳಿಸಿಕೊಟ್ಟರು.

ಆರ್‌ಎಸ್ಎಸ್ ಗೆ ಸಂವಿಧಾನ ಬೇಕಾಗಿಲ್ಲ, ಬದಲಿಗೆ ಮನುವಾದ ಅದರ ನಿಜವಾದ ಜೀವಾಳ. ಮನುವಾದ'ದ ಹೆಸರಿನಲ್ಲಿ ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ನಾಶಗೊಳಿಸುವ ಸಂಚು ನಡೆಸುತ್ತಿದೆ. ಇದರ ಬಗ್ಗೆ ಎಚ್ಚರದಿಂದರಬೇಕೆಂದರು. ರಾಷ್ಟ್ರದ ಸಾಂಸ್ಕೃತಿಕ ಚಟುವಟಿಕೆಗಳು ಮನುಸ್ಮೃತಿಯಂತೆ ನಡೆಯಬೇಕೆಂಬ, "ಹಿಂದೂ ರಾಷ್ಟ್ರದ" ಹಂಬಲದೊಂದಿಗೆ ತನ್ನ ಆಡಳಿತದಲ್ಲಿ ಆರ್‌ಎಸ್ಎಸ್ ನವರನ್ನೆ ತುಂಬುತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಅಂಬೇಡ್ಕರ್ ರವರ ಸಂವಿಧಾನದ ಆಶಯಗಳನ್ನು ನಾಶಮಾಡುವುದೇ ಇದರ ಮೂಲ ಉದ್ದೇಶವಾಗಿದೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಅತಿಥಿಯಾಗಿ ಆಗಮಿಸಿದ್ದ ವಿಡುತಲೈ ಚಿರುತೈಗಲ್ (ಬಿಡುಗಡೆ ಚಿರುತೆಗಳು) ನ ಅಧ್ಯಕ್ಷರಾದ 'ತೋಲರ್‌ಗಳ್ ತಿರುಮವಲ್ಲವಂ' ರವರು ಮಾತನಾಡುತ್ತಾ, ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್‌ವಾದದಲ್ಲಿ ಸಮಾನತೆ, ಆರ್ಥಿಕತೆಯ ವಿಚಾರದಲ್ಲಿ ಸಾಮ್ಯತೆಯಿರುವುದರಿಂದ ಈ ಎರಡು ಚಳುವಳಿಗಳು ಐಕ್ಯತೆಯೊಂದಿಗೆ ಹೋರಾಟ ನಡೆಸಿದರೆ, ರಾಜಕೀಯ ಅಧಿಕಾರ ಹಿಡಿಯಲು ಕಷ್ಟವಿಲ್ಲ. ಆ ನಿಟ್ಟಿನಲ್ಲಿ ಆಲೋಚಿಸಬೇಕೆಂದರು. ಡಿಎಸ್ಎಂಎಂ ನ ಈ ಸಮ್ಮೇಳನ ಚಿಂತಿಸಬೇಕೆಂದರು. ಬಡತನ ನಿರ್ಮೂಲನೆ ನಿಮ್ಮಿಂದ ಮಾತ್ರ ಸಾಧ್ಯವೆಂದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ, ಡಿಎಸ್ಎಂಎಂ ನ ರಾಷ್ಟೀಯ ಸಂಚಾಲಕರಾದ ಕೆ. ರಾಧಾಕೃಷ್ಣನ್ ಮಾತನಾಡಿ, ಕಳೆದ ಮೂರು ವರುಷಗಳಲ್ಲಿನ ಡಿಎಸ್ಎಂಎಂ ನ ನಿರ್ದೇಶನಗಳ ಆಧಾರದಲ್ಲಿ ವಿವಿಧ ರಾಜ್ಯಗಳು ನಡೆಸಿರುವ ಹೋರಾಟಗಳು ಪ್ರಮುಖವಾಗಿ ತಮಿಳುನಾಡು, ಆಂಧ್ರ, ತೆಲಂಗಾಣ, ಕರ್ನಾಟಕ ರಾಜ್ಯಗಳಲ್ಲಿ ದೇವಸ್ತಾನ ಪ್ರವೇಶ, ಭೂಮಿಯ ಪ್ರಶ್ನೆ ಕುರಿತಂತೆ ನಡೆಸಿರುವ ಹೋರಾಟಗಳು ಆಯಾ ಪ್ರದೇಶದ ದಲಿತ ಸಮುದಾಯದವರನ್ನೂ ನಮ್ಮ ಡಿಎಸ್ಎಂಎಂ ನ ಕಡೆ ಆಕರ್ಷಿಸುವಲ್ಲಿ ಯಶಸ್ವಿಯಾಗಿರುವ ಬಗ್ಗೆ ತಿಳಿಸಿದರು. ಸ್ವಾಗತ ಸಮಿತಿಯ ಪರವಾಗಿ ಸಾಮ್ಯೂಲ್ ರಾಜ್ ರವರು ಆರಂಭದಲ್ಲಿ ಸ್ವಾಗತಿಸಿದರು. ಸ್ವಾಮಿನಾಥನ್ ವಂದಿಸಿದರು.

ಕಾರ್ಯ ವಿಮರ್ಶೆಯ ಮತ್ತು ರಾಜ್ಯಗಳಲ್ಲಿನ ಚಟುವಟಿಕೆಗಳ ವರದಿ ಮಂಡನೆ

ಎರಡನೆ ದಿನ, ಡಿಎಸ್ಎಂಎಂನ ಸಂಚಾಲಕರಾದ ಕೆ. ರಾಧಾಕೃಷ್ಣನ್ ರವರು ವರದಿಯನ್ನು ಮಂಡಿಸಿದರು. ವರದಿಎರಡು ಬಾಗಗಳಾಗಿ ತಯಾರಾಗಿತ್ತು.

ಮೊದಲನೆ ಭಾಗದಲ್ಲಿ ಮೂರು ವರ್ಷಗಳ 'ಕಾರ್ಯ ವರದಿ ಅಥವಾ ಕೆಲಸದ ವರದಿಯಾಗಿತ್ತು. ಎರಡನೆ ಭಾಗ ರಾಜ್ಯಗಳು ನಡೆಸಿದ್ದ ಪ್ರಮುಖ ಹೋರಾಟಗಳು ಹಾಗೂ ಚಟುವಟಿಕೆಗಳು, ಇದರ ಮೇಲೆ 26 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಪ್ರತಿನಿಧಿಗಳ ಪರವಾಗಿ ಎನ್. ನಾಗರಾಜ ರವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಕೆಲಸದ ವಿಮರ್ಶೆಯ ವರದಿಯ ಮೇಲಿನ ಚರ್ಚೆಯಲ್ಲಿ ಮೂಡಿ ಬಂದ ಪ್ರಮುಖ ಅಂಶಗಳಲ್ಲಿ ತಮಿಳುನಾಡು ಅಸ್ಪೃಶ್ಯತಾ ನಿವಾರಣಾ ವೇದಿಕೆ, ಆಂಧ್ರ ಮತ್ತು ತೆಲಂಗಾಣದ ಕುಲ ವಿಲಕ್ಷಣ ಪೋರಾಟಂ ಸಮಿತಿ, ಕರ್ನಾಟಕದ ದಲಿತ ಹಕ್ಕುಗಳ ಸಮಿತಿಯ ಹೋರಾಟಗಳು ಪ್ರಮುಖವಾಗಿ ಪ್ರತಿನಿಧಿಗಳ ಗಮನ ಸೆಳೆದವು. ಅದೇ ರೀತಿ, ಉತ್ತರ ಭಾರತದ ದೆಹಲಿ, ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಜಮ್ಮು ಮತ್ತು ಕಾಶ್ಮೀರ, ಉತ್ತರಕಾಂಡ, ಛತ್ತೀಸ್‌ಗರ್, ಮಧ್ಯಪ್ರದೇಶಗಳಲ್ಲಿ ಡಿಎಸ್ಎಂಎಂ ನ ರಾಜ್ಯ ಸಮಿತಿಗಳು ಆರಂಭಗೊಂಡಿರುವುದು ಮೆಚ್ಚುಗೆಗೆ ಪಾತ್ರವಾಯಿತು.

ಕೇರಳ, ತ್ರಿಪುರ ಹಾಗೂ ಪಶ್ಚಿಮ ಬಂಗಾಳದಲ್ಲಿ ಹಾಗೂ ಹಿಮಾಚಲ ಪ್ರದೇಶಗಳಲ್ಲಿನ ಚಟುವಟಿಕೆಗಳು ದಲಿತರ ಮಧ್ಯೆ ಎಡಪಕ್ಷಗಳ ಮೇಲೆ ಪ್ರಮುಖವಾಗಿ ಸಿಪಿಐ(ಎಂ) ಪಕ್ಷದ ಮೇಲಿನ ಆರೋಪಗಳನ್ನೂ ಬುಡಮೇಲು ಮಾಡುತ್ತಿರುವುದು ಚರ್ಚೆಯಲ್ಲಿ ಮೂಡಿ ಬಂದವು.

ಕೇರಳ ರಾಜ್ಯದಲ್ಲಿ 'ಇತ್ತೀಚೆಗೆ ದೇವಸ್ಥಾನಗಳಿಗೆ ದಲಿತ ಅರ್ಚಕರನ್ನೂ ನೇಮಕ ಮಾಡಿದ್ದು ಎಲ್ಲರ ಮೆಚ್ಚಿಗೆಗೆ ಪಾತ್ರವಾಯಿತು. ಮಾತ್ರವಲ್ಲದೆ, ಜಾತಿ ವಿನಾಶದ ಡಿಎಸ್ಎಂಎಂ ನ ಮೂಲ ಉದ್ದೇಶದ ದಿಕ್ಕಿನಡೆ ದಿಟ್ಟ ಹೆಜ್ಜೆಯಾಗಿದೆ. ಸಂವಿಧಾನದಲ್ಲಿನ 'ಮೀಸಲಾತಿ'ಯ ನಿಜವಾದ ಅರ್ಥವನ್ನು ಪಿಣರಾಯಿ ವಿಜಯನ್ ಆಡಳಿತ ಎತ್ತಿ ಹಿಡಿದಿದೆ. ಇದು ಇತರೆ ರಾಜ್ಯಗಳಿಗೆ ಮಾದರಿಯಾಗಲಿ ಎಂಬ ಆಶಯವು ಭಾಗವಹಿಸಿದ್ದ ಪ್ರತ್ರಿನಿಧಿಗಳಲ್ಲಿ ಮೂಡಿ ಬಂದಿತ್ತು.

ಚರ್ಚೆಗೆ ಸು. ಶ್ರೀನಿವಾಸ್‌ರಾವ್ ಉತ್ತರಿಸಿದ ನಂತರ ಅಂಗೀಕರಿಸಲ್ಪಟಿತ್ತು. ಈ ಮಧ್ಯೆ ಸೌಹಾರ್ದ ಸಂಘಟನೆಗಳಾದ, ಬಿಎಸ್ಎನ್ಎಲ್, ವಿಮೆ, ಬ್ಯಾಂಕ್ ಹಾಗೂ ಆದಿವಾಸಿ ಸಮನ್ವಯ ಸಮಿತಿಯಿಂದ ಎಸ್. ವೈ. ಗುರುಶಾಂತ್ ಶುಭಕೋರಿ ಮಾತನಾಡಿದರು.

ಡಿಎಸ್ಎಂಎಂ ನ ಕೇಂದ್ರದ ಪರವಾಗಿ ಬಿ.ವಿ. ರಾಘವುಲು ಮಾತನಾಡಿ, ಹಲವು ಅಂಶಗಳಿಗೆ ಸ್ಪಷ್ಟನೆ ನೀಡಿದರು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯ ಅಗತ್ಯತೆ, ಬಡ್ತಿಯಲ್ಲಿ ಮೀಸಲಾತಿ, ಅಂತರಜಾತಿಯ ವಿವಾಹ ಹಾಗೂ ಭೂಮಿಯ ಪ್ರಶ್ನೆಯ ಕುರಿತಂತೆ ಮಾತನಾಡಿದರು.

ಪುಟ 10 ಕ್ಕೆ

ಪದಾಧಿಕಾರಿಗಳು

ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಆಯ್ಕೆ



ಇದುವರೆವಿಗೂ ಕೇಂದ್ರದ ಮಟ್ಟದಲ್ಲಿ 'ಸಂಚಾಲನ ಸಮಿತಿ' ಕಾರ್ಯ ನಿರ್ವಹಿಸುತ್ತಿತು. ಈ ಸಮ್ಮೇಳನವು ಪದಾಧಿಕಾರಿಗಳು ಹಾಗೂ ಕೇಂದ್ರೀಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು.

22 ರಾಜ್ಯಗಳನ್ನು ಒಳಗೊಂಡ, 52 ಸದಸ್ಯರ ಕೇಂದ್ರೀಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಿತು. ಕರ್ನಾಟಕದಿಂದ ಗೋಪಾಲಕೃಷ್ಣ ಅರಳಹಳ್ಳಿ ಹಾಗೂ ಎನ್. ನಾಗರಾಜ್ ಆಯ್ಕೆಗೊಂಡರು.

13 ಸದಸ್ಯರ ಪದಾಧಿಕಾರಿಗಳು ಒಮ್ಮತದಿಂದ ಆಯ್ಕೆಗೊಂಡರು

ಅಧ್ಯಕ್ಷರು : ಕೆ. ರಾಧಾಕೃಷ್ಣ, ಕೇರಳ. ಪ್ರಧಾನ ಕಾರ್ಯದರ್ಶಿ : ರಾಮಚಂದ್ರಡೋಮ್, ಪ. ಬಂಗಾಳ. ಖಜಾಂಚಿ : ಜಿ. ಮಮತ, ದೆಹಲಿ.

ಗೋಪಾಲಕೃಷ್ಣ ಅರಳಹಳ್ಳಿಯವರು ಒಬ್ಬ ರಾಷ್ಟ್ರೀಯ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಇತರ ಉಪಾಧ್ಯಕ್ಷರೆಂದರೆ ಸುಭಾಷಿಣಿ ಅಲಿ, ಸುಧನ್ ದಾಸ್, ಶೈಲೆಂದ್ರ ಕಾಂಬ್ಳೆ ಮತ್ತು ರಾಂಕುಮಾರ್ ಬೇಹ್ವಾಲ್‌ಪುರಿಯ ವಿ. ಶ್ರೀನಿವಾಸರಾವ್, ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸ್ಯಾಮುವೆಲ್ ರಾಜ್, ಸ್ಕೈಲಾಬ್ ಬಾಬು, ಆಂದ್ರ ಮಲ್ಯಾದ್ರಿ ಮತ್ತು 'ನಾಥುಪ್ರಸಾದ್ ಕಾರ್ಯದರ್ಶಿಗಳಾಗಿ ಆಯ್ಕೆಗೊಂಡ ಇತರರು.

ಕಾಂ. ಬಿ.ವಿ. ರಾಘವುಲು ರವರು ಕೇಂದ್ರೀಯ ಕಾರ್ಯಕಾರಿ ಸದಸ್ಯರಾಗಿ ಆಯ್ಕೆಯಾದರು.

ಉತ್ತರ ಕನ್ನಡದ ಕೋಮುವಾದಿ ರಾಜಕೀಯ ಮತ್ತು ಅನಂತನ ಅವತಾರಗಳು



ಚಾಕು, ಚೂರಿ ಇರಿತ, ಗಲಾಟೆ, ದೊಂಬಿ, ಶಾಂತಿ ಭಂಗ, ಪ್ರಚೋದನ ಕಾರಿ ಭಾಷಣ, ಕೋಮು ಗಲಭೆಗೆ ಸ್ಕೆಚ್ ಇವು ಪ್ರಮುಖವಾಗಿ ಇವರ ಮೇಲಿರುವ ಆರೋಪಗಳು. ಎಲ್ಲವೂ ಅನ್ಯ ಧರ್ಮೀಯರ ಮೇಲೆ ಎಗರಿ ಬಿದ್ದ ಕೇಸುಗಳೇ. ಹಾಗಾಗಿ 90 ರ ದಶಕದಲ್ಲಿ ಅನೇಕ ತಿಂಗಳು ತಲೆ ಮರೆಸಿಕೊಂಡ ಈ ಅಪರಾಧಿಯು.. ..ಜಿಲ್ಲೆಗೆ ಕಾಲಿಡದಂತೆ ಕೋರ್ಟು ಕೂಡ ಆದೇಶಿಸಿತ್ತು. ಅಂದು ಜಿಲ್ಲೆಯಲ್ಲಿ ನಡೆದ ಹಲವು ದರೋಡೆ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡ ಬಹುತೇಕರು ಇವರ ಶಿಷ್ಯರೇ ಆಗಿದ್ದರು. ಆಗ ಇದನ್ನು "ಹಾಯ್ ಬೆಂಗಳೂರು" ಪತ್ರಿಕೆ ವರದಿ ಮಾಡಿತ್ತು. ಚಿತ್ತರಂಜನ್ ಕೊಲೆ ಪ್ರಕರಣದಲ್ಲಿಯೂ ಭಟ್ಕಳದಲ್ಲಿ ಇವರ ಬಗ್ಗೆ ಪೋಸ್ಟರ್ ಗಳನ್ನು ಹಾಕಿರುವ ಬಗ್ಗೆ ಸುದ್ದಿ ಓದಿದ್ದು ನೆನಪಿದೆ. "ಆದರೆ ಈ ಎಲ್ಲ ಪ್ರಕರಣ ತನಗೆ ಮೆಡಲ್ ಇದ್ದಂತೆ" ಎಂದು ಹುಂಬತನದ ಉತ್ತರ ಇವರದ್ದು. ಇವರ ಕಾರಣದಿಂದಾಗಿಯೇ ಕಾರವಾರದ ಅಂಜುದೀವ್, ಚಂದಾವರ, ಯಲ್ಲಾಪುರ, ಶಿರಸಿ, ಭಟ್ಕಳಗಳು ಭಯದ ಬೇಗುದಿಯಲ್ಲಿರುವಂತಾಗಿದೆ.

ಯಮುನಾ ಗಾಂವ್ಕರ್

ಉತ್ತರ ಕನ್ನಡ ಜಿಲ್ಲೆ ಸುಸಂಸ್ಕೃತರ ಜಿಲ್ಲೆ ಎಂದು ಹೆಸರು ಪಡೆದದ್ದು ಈ ನೆಲದ ಮಣ್ಣಿನಲ್ಲಿ ಬೆರೆತ ಸೌಹಾರ್ದ ಪರಂಪರೆಯಿಂದ. ಉತ್ತರ ಕನ್ನಡ ಎಂದರೆ ಹಲವು ವಿಸ್ಮಯಗಳು.... ಕಾಡು, ಕಡಲು, ಬಯಲು ಸೀಮೆ, ಮಲೆನಾಡು, ನದಿ, ಜಲಪಾತಗಳ ಪ್ರಾಕೃತಿಕ ಸೌಹಾರ್ದ ಸಂಭ್ರಮದ ಸಾಲು ಸಾಲು... ಕವಿ ರವೀಂದ್ರನಾಥ ಟಾಗೋರರಿಗೆ ನೊಬೆಲ್ ಖ್ಯಾತಿ ತಂದ ಕೃತಿ ರಚನೆಗೆ ಕಾರಣವಾದ ಜಿಲ್ಲೆ "ದಕ್ಷಿಣದ ಕಾಶ್ಮೀರ". ಭೋರ್ಗರೆಯುವ ಕಡಲು, ಬಗೆಬಗೆಯ ಬಣ್ಣದ ಮೀನುಗಳು, ಸಮೃದ್ಧ ಕಾಡು, ಕಾಡೊಳಗೆ ವನ್ಯಜೀವಿ ಕುಟುಂಬ, ಮನಸೆಳೆವ ಜಲಪಾತ, ಬೆವರಿಳಿಸಿ ಬೆಳೆವ ಭತ್ತ, ಅಡಿಕೆ, ತೆಂಗು, ಶೇಂಗಾ, ಕಲ್ಲಂಗಡಿ, ಕಬ್ಬು, ಜೋಳ, ಏಲಕ್ಕಿ, ಕಾಳು ಮೆಣಸು ಇತ್ಯಾದಿ.... ಕಾಡು ಕಡಲಿನ ಮಧ್ಯೆ ಅಲ್ಲಲ್ಲಿ ಆಟಿಕೆಯಂತೆ ಚೆಲ್ಲಾಪಿಲ್ಲಿ ಎಸೆದಿರುವ ಜನ ವಸತಿ ಪ್ರದೇಶಗಳ ಹಂಚಿಕೆ ಸಂಕಟವೂ ಹೌದು; ಸಂಭ್ರಮವೂ ಹೌದು.

ಮೀನುಗಾರರು, ಅಗಸರು, ಆಗೇರರು, ಮುಕ್ರಿಗಳು, ಕುಣಬಿಗರು, ಗೌಳಿಗರು, ಗೊಂಡರು, ಸಿದ್ದಿಗಳು, ಹಳ್ಳೇರರು, ದಲಿತರು, ಮೇದಾರರು, ಕೋಮಾರಪಂಥ, ಕೊಂಕಣಮರಾಠಾ, ಬ್ರಾಹ್ಮಣರು ಹೀಗೆ ಬಹುಜಾತಿ, ಕ್ರಿಶ್ಚಿಯನ್, ಮುಸ್ಲಿಂ, ಜೈನ್, ಬುದ್ಧರು, ಲಿಂಗಾಯತ ಹೀಗೆ ಬಹು ಧರ್ಮದವರ ಜಿಲ್ಲೆ. ಗುಮಟೆಪಾಂಗ್, ನಿಗ್ರೋ ಶ್ರಮಜೀವಿಯ ಡಮಾಮಿ, ಢೋಲ್, ಎಚ್ಚರಿಸುವ ಡೊಳ್ಳು ಕುಣಿತ, ಎಲ್ಲರ ಬೆಸೆಯುವ ಕೋಲಾಟ, ಕುಣಬಿಗರ ಪುಗಡಿ, ಉತ್ತರದ ಸಂಸ್ಕೃತಿಯ ದಾಂಡೇರಾಸ್, ಗೌಳಿಗರ ಡಾನ್ಸ್, ಹೋಳಿ, ಮೊಹರಂ, ಬಕ್ರೀದ್, ಕ್ರಿಸ್ ಮಸ್, ದೀಪಾವಳಿ, ಚೌತಿ ಹೀಗೆ ಹಬ್ಬ ಮತ್ತು ಕುಣಿತ ಮೇಳೈಸಿದ ಬಹು ಸಾಂಸ್ಕೃತಿಕತೆಗಳ ಜಿಲ್ಲೆ.

ಹಳೆಗನ್ನಡದ ಕವಿ ಪಂಪನ ಊರು ಮತ್ತು ಭಟ್ಟಾಕಳಂಕನ ಭಟ್ಕಳಕ್ಕೆ ಕಳಂಕ ತರುವ ಕೆಲಸ ಒಂದು ಹಿತಾಸಕ್ತಿಯಿಂದ ನಡೆಯುತ್ತಿದೆ. ಯಕ್ಷಗಾನ ಕವಿ ಸಾಂತಪ್ಪಯ್ಯ, ಭತ್ತಲೇಶ್ವರ ರಾಮಾಯಣ ಕಾವ್ಯ ಬರೆದ ಕವಿಯಿಂದ ಹಿಡಿದು ಆಧುನಿಕ ಘಟ್ಟದ ಸೂರಿ ವೆಂಕಟ್ರಮಣಶಾಸ್ತ್ರಿ, ಗೌರೀಶ ಕಾಯ್ಕಿಣಿ, ಸ. ಪ. ಗಾಂವ್ಕರ್, ಚಿತ್ತಾಲ ಸಹೋದರ ದ್ವಯರು, ದಿನಕರ ದೇಸಾಯಿ, ಗಿರಿ ಪಿಕಳೆ, ಜಿ.ಆರ್. ಪಾಂಡೇಶ್ವರರು, ಬಿ.ಎಚ್.ಶ್ರೀ, ಸು.ರಂ.ಎಕ್ಕುಂಡಿ, ಆರ್.ವಿ.ಭಂಡಾರಿ, ಜಿ.ಎಸ್. ಅವಧಾನಿ ಮುಂತಾದ ಮಹನೀಯರು ಕಟ್ಟಿ ಬೆಳೆಸಿದ ಸೌಹಾರ್ದ ಪರಂಪರೆ ಒಂದು ಗಟ್ಟಿಯಾದ ಸಹಬಾಳ್ವೆಯ ಸಾಂಸ್ಕೃತಿಕ ಮನಸ್ಸನ್ನು ಸಿದ್ಧಪಡಿಸಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಜಾತಿ ಧರ್ಮ ಬೇಧವಿಲ್ಲದೇ ಹೋರಾಡುತ್ತಲೇ ಭೂಮಿ ಹಕ್ಕಿಗೆ ಕೆಂಬಾವುಟ ಹಿಡಿದು ಬೀದಿಗಿಳಿದ ಜಿಲ್ಲೆ. ದಕ್ಷಿಣದ ಬಾರ್ಡೋಲಿ. ಆದರೆ ಸೌಹಾರ್ದದ ಜಿಲ್ಲೆಯ ಹಸಿರು ಕಿತ್ತು ಮರುಭೂಮಿ ಮಾಡುವ ಸಂಘಪರಿವಾರದ ಮೇಲಾಟದ ಕಣವಾಗುತ್ತಿರುವುದು ತೀರಾ ದುಃಖದ ಸಂಗತಿ. ರಾಜಕೀಯವಾಗಿ ತೊಂಬತ್ತರ ದಶಕದ ತನಕವೂ ಸೌಹಾರ್ದದ ಕಣಜ. ಇಂಥ ಊರಿಗೆ "ಕೊಳ್ಳಿ ದೆವ್ವ"ದಂತೆ ವಕ್ಕರಿಸಿದ್ದು ಛಿದ್ರಕಾರಿ ಹಿಂದುತ್ವ..

ಇಲ್ಲಿ ಸಂಘಪರಿವಾರವು ಬಿಜೆಪಿಯೊಂದಿಗೆ ರಾಜಕೀಯ ಮೇಲಾಟದಲ್ಲಿ ಸೇರಿಕೊಂಡು ಜಿಲ್ಲೆಯ ಹಸಿರನ್ನು ಕಿತ್ತು ಮರುಭೂಮಿ ಮಾಡಲು ಹೊರಟಿದೆಯೇ? ಕೆಲವು ದಶಕಗಳ ಹಿಂದೆ ಜಿಲ್ಲೆಯಲ್ಲಿ ಆರ್.ಎಸ್.ಎಸ್ ತನ್ನ ಕಾರ್ಯಕರ್ತರನ್ನು ವೇತನ ನೀಡಿ ನೇಮಿಸಿಕೊಂಡು, ಎಲ್ಲಾ ಗ್ರಾಮಗಳಲ್ಲಿ ವಾರಾನ್ನಕ್ಕೆ ಉಳಿಸಿ, ಆ ಮನೆಯ ಸುತ್ತ ಆಟೋಟ ಮಾಡಿಸಿ, ಸಂಸ್ಕೃತ ಸಂಭಾಷಣೆ, ಭಗವದ್ಗೀತೆ ಬಾಯಿಪಾಠ, ಲಕ್ಷಗೀತಾ ಯಜ್ಞ, ಪುರಾಣ ಪಠಣ ಮಾಡಿಸಿತು. ಅದರ ಮಧ್ಯೆಯೇ ಹಿಂದುತ್ವದ ದ್ವೇಷದ ಸಿದ್ಧಾಂತವನ್ನು ಪಸರಿಸಿತು. ಯಾವುದೇ ಪಕ್ಷಗಳಲ್ಲಿ ತನ್ನ ಕಾರ್ಯಕರ್ತರು ಇರುವಂತೆ ದೂರಗಾಮಿ ರಾಜಕೀಯ ಕಾರ್ಯ ಸಾಧಿಸಿತು. ಎಂಬತ್ತರ ದಶಕದಲ್ಲಿ ಬಿಜೆಪಿಯ ಸ್ಥಾಪನೆಯಾಗುತ್ತಲೇ, ಕರಾವಳಿಯ ಗುಂಟ ಮೊದಲು ವೈದ್ಯರನ್ನು ಚಿತ್ತರಂಜನ್ ರಿಂದ ಕಾರವಾರದ ತುದಿಯಲ್ಲಿ ಪಿಕಳೆಯವರ ವರೆಗೆ– ತನ್ನ ತೆಕ್ಕೆಗೆ ತೆಗೆದುಕೊಂಡಿತು. ನಂತರದ ದಿನಗಳಲ್ಲಿ ಬೇರೆಪಕ್ಷದಲ್ಲಿ ತಾವು ಈಗಾಗಲೇ ಪಳಗಿಸಿದ, ಧನವಂತರನ್ನು ಅಥವಾ ಕೆಲವು ಜಾತಿಗಳ ಮುಖಂಡರನ್ನು, ಇತ್ತೀಚೆಗೆ ವಕೀಲರನ್ನು, ನಿವೃತ್ತ ಅಧಿಕಾರಿಗಳನ್ನು, ಮೀನುಗಾರ ಸಮುದಾಯದ ಮುಖಂಡರನ್ನು, ಪ್ರಬಲ ಮತದಾರ ಬ್ಯಾಂಕ್ ನಾಮಧಾರಿ ಸಮುದಾಯದ ನಾಯಕರನ್ನು ಹೀಗೆ ಬೇರೆ ಬೇರೆ ಸಮುದಾಯ/ಜಾತಿಗಳ ಸಮಾವೇಶವನ್ನು ನಡೆಸಿ ಅವರನ್ನು ತನ್ನತ್ತ ಸೆಳೆಯುತ್ತಿದೆ. ಇದಕ್ಕೆ ಪ್ರಬಲ ಸವಾಲು ಹಾಕಬೇಕಿದ್ದ ಕಾಂಗ್ರೆಸ್ ನಿಷ್ಕ್ರಿಯ ರಾಜ–ಕಾರಣ, ಬಣಗಳ ಒಳಜಗಳದಲ್ಲಿ ತೊಡಗಿಕೊಂಡು ಕರಗಿಹೋಗುತ್ತಿದೆ.

ಭೂಮಿ ಹೋರಾಟದಲ್ಲಿ ಭೂಮಿ ಪಡೆದವರ ಮಕ್ಕಳು ತಮ್ಮ ಸ್ವಾಭಿಮಾನದ ಇತಿಹಾಸ ಅರಿಯದೇ ಅಂದಿನ ಭೂಮಾಲಕ ಪದ್ಧತಿಯ ವಕ್ತಾರರ ಜೊತೆಗೆ ಸೇರಿದ್ದಾರೆ. ಅಂದು ಸಾಮಾಜಿಕವಾಗಿ ತಮ್ಮನ್ನು ದಮನ ಮಾಡಿ, ಊರ ಹೊರಗಿಟ್ಟವರ ಜೊತೆಗೆ ಇಂದು ಉದ್ದದ ತಿಲಕವಿಟ್ಟು ಕೇಸರಿ ಬಾವುಟಕ್ಕೆ ಕೆಲವರು ಸೇರಿದ್ದಾರೆ. ಇಂಥ ದ್ವೇಷದ ಸಂಸ್ಕೃತಿಯ ಸಂಘಕ್ಕೆ ಜಿಲ್ಲೆಯಲ್ಲಿ ಎಪ್ಪತ್ತು ವರ್ಷಗಳ ಇತಿಹಾಸವಿದ್ದರೂ ಹಿಂದೆಂದಿಗಿಂತಲೂ ಹೆಚ್ಚು ಪ್ರತಿಗಾಮಿಯಾದ ನಾಯಕತ್ವ ಈಗ ಸಿಕ್ಕಿದೆ. ಅವರೇ ಅನಂತ ಕುಮಾರ್ ಹೆಗಡೆ, ಕೇಂದ್ರ ಮಂತ್រಿಗಳು.

"ಕೈಕಡಿ–ಕಾಲ್ ಕಡಿ, ಬೆಂಕಿ ಹಾಕು"

ಗಲಭೆಕೋರ ಅನಂತನ ರಾಜಕೀಯ ಹಿನ್ನೆಲೆ:

ಈಗ ನಲವತ್ತೊಂಬತ್ತಕ್ಕೆ ಕಾಲಿಡುತ್ತಿರುವ ಅನಂತಕುಮಾರ್ ರಾಜಕಾರಣ ಪ್ರವೇಶವಾಗಿದ್ದೇ ಹಿಂದುತ್ವದ ಸಂಘಟನೆಗಳ ಮೂಲಕ. ಪಿಯುಸಿ ತನಕ ಓದಿರುವ ಇವರು ಕೋರಿಯನ್ ಮಾರ್ಷಲ್ ಆರ್ಟ್ಸ್‌ನ ಟೈಕಾಂಡೋ ಪಟುವೂ ಹೌದು. 1994 ರಲ್ಲಿ ಈದ್ಗಾದಲ್ಲಿ ನಡೆದ ಧ್ವಜ ಹಾರಿಸುವ ಹೋರಾಟದಲ್ಲಿ ಭಾಗವಹಿಸಿ ರಾಜಕೀಯ ಮುನ್ನೆಲೆಗೆ ಬಂದು ಚಿತ್ತರಂಜನ್ ಹತ್ಯೆಯ ಅನುಕಂಪನ್ನು ಜಿಲ್ಲೆಯಾದ್ಯಂತ ದ್ವೇಷಕ್ಕೆ ತಿರುಗಿಸಿ 1996 ರ 11 ನೇ ಲೋಕಸಭಾ ಚುನಾವಣೆಯಲ್ಲಿ ಗೆದ್ದರು. ಆಗ ಬಿಜೆಪಿಯ ಸಿದ್ಧಾಂತ ಒಪ್ಪಿ ಮತಹಾಕಿದವರು ಕಡಿಮೆ ಎಂದೇ ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಬಾಬರಿ ಮಸೀದಿ ಧ್ವಂಸಕ್ಕೆ ಜಿಲ್ಲೆಯ ಕರಸೇವಕರು ತೆರಳಲು ಭೂಮಿಕೆ ಸಿದ್ಧಪಡಿಸಿದ ಯುವ ನಾಯಕರಲ್ಲಿ ಇವರೂ ಒಬ್ಬರು. ಆದರೂ ಆಗ ಜಿಲ್ಲೆಯಲ್ಲಿ ತುಂಬಾ ಶಾಂತಿ ಸೌಹಾರ್ದ ನೆಲೆಸಿತ್ತು. ಇವರ ಬೇಳೆ ಬೇಯಲಿಲ್ಲ. ಹಾಗಾಗಿ ನಂತರದ ದಿನಗಳಲ್ಲಿ ಬಿಜೆಪಿಗರು ಭಟ್ಕಳವನ್ನೇ ಜಿಲ್ಲೆಯ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡರು. ಜಿಲ್ಲೆಯಾದ್ಯಂತ ತಮ್ಮ ರಾಜಕಾರಣಕ್ಕೆ ಬಳಸಿ ಆ ಮೂಲಕ ಸತತ 5 ಬಾರಿ ಸಂಸದರಾದರು ವಿನಃ ಅಭಿವೃದ್ಧಿಯ ಕಾರಣಕ್ಕೆ ಅಲ್ಲ.

ಅಂದಿನ ಜಿಲ್ಲೆಯ ಪರಿಸ್ಥಿತಿ ಹೇಗಿತ್ತು?

ಅಂದು ಅನಂತ ದತ್ತಾತ್ರೇಯ ಹೆಗಡೆ ಎಂಬ ರೂಪವಂತ ಯುವಕ ಮನಸ್ಸಿನ ತುಂಬಾ ಅನ್ಯಧರ್ಮಗಳ ವಿರುದ್ಧ ನಂಜು ತುಂಬಿಕೊಂಡು ಲೋಕಸಭಾ ಚುನಾವಣೆಗೆ ಸಿದ್ಧವಾದ. ಆಗ ಉತ್ತರ ಕನ್ನಡದಲ್ಲಿ ಪರಿಸರ ಹೋರಾಟ ಜೋರಾಗಿತ್ತು, ಭಟ್ಕಳ ಗಲಭೆ ಹುಟ್ಟಿಹಾಕಲಾಗಿತ್ತು. ಕೈಗಾ ಅಣುವಿದ್ಯುತ್ ಕಟ್ಟಡದ ಗುಮ್ಮಟ ಕುಸಿದಿತ್ತು. ಜಿಲ್ಲೆಯ ಜನ ಮೂಲಸೌಕರ್ಯಗಳಾದ ರಸ್ತೆ, ಸೇತುವೆ, ವಿದ್ಯುತ್, ಉದ್ಯೋಗ, ಶಿಕ್ಷಣಕ್ಕಾಗಿ ಹಾತೊರೆಯುತಿದ್ದರು. ಹೊನ್ನಾವರದ ಊರೂರು ಸಂಪರ್ಕಿಸುವ ಶರಾವತಿ ನದಿಗೆ ಸೇತುವೆಗೆ ಹೋರಾಟ ನಡೀತಿತ್ತು. ಕಾಳಿ ಜಲ ವಿದ್ಯುತ್ ಯೋಜನೆಗೆ ಭೂಮಿ ಕಳಕೊಂಡ ಜೋಯಿಡಾ, ಯಲ್ಲಾಪುರ ಗ್ರಾಮೀಣ ಬಾಗದ ರೈತ ಸಂತ್ರಸ್ತರ ಪರಿಹಾರ, ಪುನರ್ವಸತಿ, ಪರ್ಯಾಯ ವ್ಯವಸ್ಥೆಗೆ ಹೋರಾಟ ಮುಗಿಲು ಮುಟ್ಟಿತ್ತು. ಕೊಂಕಣ ರೈಲು ಕನಸು ನನಸಾಗುತ್ತಿದ್ದಾಗಲೇ ಅದಕ್ಕಾಗಿ ಭೂಮಿ ನೀಡಿದ ಕುಟುಂಬದ ಅಳಲು ಜೋರಿತ್ತು. ಸೀಬರ್ಡ ನೇವಲ್ ಬೇಸ್ ಪ್ರಾರಂಭವಾಗಿ ಮೀನುಗಾರರು ತಮ್ಮ ಸಾಂಪ್ರದಾಯಿಕ ಉದ್ಯೋಗದಿಂದ ವಂಚಿತರಾಗುತ್ತಿದ್ದರು. ಭೂ ರಹಿತ ಅರಣ್ಯ ಅತಿಕ್ರಮಣದಾರರು ತಮ್ಮ ಹಕ್ಕುಗಳಿಗೆ ಚಳುವಳಿಯ ಹಾದಿ ಹಿಡಿದಿದ್ದರು. ಪರಿಸರವಾದಿಗಳ ಕೂಗು ಇನ್ನೊಂದು ವೇದಿಕೆಯನ್ನು ಸಿದ್ಧಪಡಿಸಿತ್ತು. ಪ್ರಧಾನ ಸಮಸ್ಯೆಗಳ ಪರಿಹಾರಕ್ಕೆ ಧ್ವನಿಯಾಗದ ಬಿಜೆಪಿ– ಆರ್.ಎಸ್.ಎಸ್– ವಿಶ್ವ ಹಿಂದೂ ಪರಿಷತ್ತು ಈ ಹೋರಾಟಗಳ ದಿಕ್ಕನ್ನೇ ತಪ್ಪಿಸಿ ತಮ್ಮ ರಾಜಕೀಯ ಅಜೆಂಡಾ ಜಾರಿಗೊಳಿಸಲು ತಲ್ಲೀನರಾದರು. ಗಲಭೆಗಳ ಭಾಷಣಕ್ಕೆ ನಂಬರ್ ವನ್ ಮತ್ತು ಈಡೇರದ ಆಶ್ವಾಸನೆಗಳ ಸರದಾರ, ಅನಭಿವೃದ್ಧಿಯ ಉತ್ತರಕುಮಾರ "ಅನಂತ" ಸಂಸದರಾದರು.

ಈ ಮೇಲಿನ ಚಳುವಳಿಯ ಮುಖ್ಯ ಬೇಡಿಕೆ ಈಡೇರಿಸುವಲ್ಲಿ ನಮ್ಮ ಜಿಲ್ಲೆಯ ಅಂದಿನ ಕಾಂಗ್ರೆಸ್ ಎಂ.ಪಿ ದೇವರಾಯ ನಾಯ್ಕರಾಗಲೀ, ಅದಕ್ಕೂ ಮುಂಚೆ ಮುಖ್ಯಮಂತ್ರಿಗಳಾಗಿದ್ದ ಜಿಲ್ಲೆಯವರೇ ಆದ ಜನತಾದಳದ ರಾಮಕೃಷ್ಣ ಹೆಗಡೆಯವರೇ ಆಗಲಿ, ಜಿಲ್ಲೆಯ ದತ್ತು ಪುತ್ರರೆಂದೇ ಕರೆಯಿಸಿಕೊಂಡ ಕಾಂಗ್ರೆಸ್ ನ ಬಂಗಾರಪ್ಪನವರೇ ಆಗಲಿ ಸ್ಪಷ್ಟ ರಾಜಕೀಯ ಸೈದ್ಧಾಂತಿಕ ಕಣ್ಣೋಟದಿಂದ ಬಗೆಹರಿಸುವಲ್ಲಿ ವಿಫಲರಾದರು. ಕಾಂಗ್ರೆ ಮೇಲಿನ ದ್ವೇಷ ಮತ್ತು ಜನತೆಗೆ ಪರ್ಯಾಯ ರಾಜಕಾರಣ ಇಲ್ಲದೇ ಇರುವುದರಿಂದ, ಇದೆಲ್ಲದರ ಲಾಭವನ್ನು ಅಭಿವೃದ್ಧಿ ಪರ, ಮೂಲ ಸೌಕರ್ಯದ ಹೋರಾಟದ ಇತಿಹಾಸವೇ ಇಲ್ಲದ ಬಿಜೆಪಿ ಪರಿವಾರದವರು ಪಡೆಯಲು ಸುರಳೀತ ಮಾರ್ಗ ಸಿಕ್ಕಂತಾಯಿತು. ಅದರ ಪೂರ್ಣ ಲಾಭ ಅನಂತಕುಮಾರ್ ಗೆ ಸಿಕ್ಕಿತು. ಆಗಷ್ಟೇ ಈದ್ಗಾ, ಬಾಬ್ರಿ ಮಸೀದಿ ಪ್ರಕರಣ, ಚಿತ್ತರಂಜನ್ ಹತ್ಯೆ ಮತ್ತು ಆರ್.ಎಸ್.ಎಸ್ ನ ಕೋಮು ಪ್ರಚೋದಕ ಪ್ರಚಾರ ತಂತ್ರದಿಂದ ಫಲನೀಡಲು ಪ್ರಾರಂಭವಾಗಿತ್ತು. ಜಿಲ್ಲೆಯಲ್ಲಿ ಮೂರು ಶಾಸಕರು ಬಿಜೆಪಿಗೆ ಹೊಂದಲು ಸಾಧ್ಯವಾಗಿತ್ತು. ಅದಕ್ಕಾಗಿ, ಅದಾಗಲೇ ಹತ್ತಾರು ಕ್ರಿಮಿನಲ್ ಕೇಸ್ ಎದುರಿಸುತ್ತಿದ್ದ ಯಾವುದೇ ಕೋಮುಗಲಭೆಯಲ್ಲಿ ಸದಾ ಕ್ರಿಯಾಶೀಲವಾಗಿ ಇರುತ್ತಿದ್ದ ಜಿಲ್ಲೆಯ ಯುವಜನರನ್ನು ದ್ವೇಷದ ಭಾಷಣದ ಆಧಾರದಲ್ಲಿ ಎತ್ತಿಕಟ್ಟುವ ಕೌಶಲ್ಯಯುತ ಚಾಕಚಕ್ಯತೆಯ, ವಿಶೇಷವಾಗಿ ಜೈಲಿನಲ್ಲಿರಬೇಕಾದ ವ್ಯಕ್ತಿ ಸಂಸದರಾಗಿ ಆಯ್ಕೆಯಾಗಿದ್ದು ಶಾಂತಿಪ್ರಿಯ ಜಿಲ್ಲೆಯ ದುರಂತ. ಅದಾಗಿ ಇಪ್ಪತ್ತು ವರ್ಷಗಳ ಬಳಿಕ ಕೌಶಲ್ಯಾಭಿವೃದ್ಧಿ ಮಂತ್ರಿಗಳಾಗಿರುವುದು ಇನ್ನೊಂದು ದುರಂತವೇ ಸರಿ.

ಪುಟ 11 ಕ್ಕೆ





2ನೇ ಡಿಎಸ್ಎಂಎಂ ರಾಷ್ಟ್ರೀಯ ಸಮ್ಮೇಳನ ಪುಟ 8 ರಿಂದ

ಸುಮಾರು 20 ಕ್ಕೂ ಹೆಚ್ಚು ನಿರ್ಣಯಗಳನ್ನು ಅಂಗೀಕರಿಸಲಾಯಿತು

1.ದಲಿತರ ಭೂಮಿಯನ್ನು ಗುಜರಾತ್, ಹರಿಯಾಣ, ಉತ್ತರ ಪ್ರದೇಶ್, ರಾಜಸ್ಥಾನ, ಛತ್ತೀಸಗರ್ – ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಸ್ವಾಧೀನ ಪಡಿಸಿಕೊಂಡು ಅನ್ಯಾಯವೆಸಗಿರುವ ಬಗ್ಗೆ ಹಾಗೂ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ತಂದಿರುವ ಕ್ರೂರ-ಕಠಿಣ ಭೂಸ್ವಾಧೀನ ಸುಗ್ರೀವಾಜ್ಞೆಯನ್ನು ಹಿಂಪಡೆಯಬೇಕೆಂಬ ಪ್ರಮುಖ ನಿರ್ಣಯ.

2.ನವ-ಉದಾರವಾದದ ದುಷ್ಪರಿಣಾಮದಿಂದ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ ಮತ್ತು ಇದರ ವಿರುದ್ಧ ಹೆಚ್ಚುತ್ತಿರುವ ಹೋರಾಟಗಳ ಬಗ್ಗೆ.

3.ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳಿಂದ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ಹಿಮ್ಮೆಟಿಸುವ – ಹೋರಾಟ ಕುರಿತಂತೆ.

4.ಅಸ್ಪೃಶ್ಯತೆ ಹಾಗೂ ಜಾತಿ-ತಾರತಮ್ಯದ ವಿರುದ್ಧ ಸರ್ಕಾರದ ವತಿಯಿಂದಲೇ 'ಒಂದು ಯೋಜನಾ ಬದ್ಧವಾದ' ಚಾಲನೆಗಾಗಿ ಒತ್ತಾಯಿಸುವ ನಿರ್ಣಯ.

5.ದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಸೂಕ್ತ ಕಾನೂನು ಪರಿಪಾಲನೆಗಾಗಿ ಒತ್ತಾಯಿಸಿ.

6.ಪರಿಶಿಷ್ಟ ಜಾತಿ – ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯಿದೆಯನ್ನು ಬಲಪಡಿಸುವ ಕುರಿತಂತೆ.

7.ಬಡ್ತಿಯಲ್ಲಿ ಮೀಸಲಾತಿ ಹಾಗೂ ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಅಗತ್ಯತೆ ಕುರಿತಂತೆ.

8.ದೇವದಾಸಿ ಮಹಿಳೆಯರ ಕುಟುಂಬಗಳಿಗೆ – ಪುರ್ನವಸತಿ ಕಲ್ಪಿಸುವ ಕುರಿತಂತೆ.

9.ಸಫಾಯಿ ಕರ್ಮಚಾರಿಗಳಿಗೆ – ಹಕ್ಕುಗಳನ್ನು ಒತ್ತಾಯಿಸಿ.

10.ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಖಂಡಿಸಿ, ಚಲನ ಚಿತ್ರ ಕಲಾವಿದರಾದ ಪ್ರಕಾಶ್ ರಾಯ್ ಮತ್ತು ಕಮಲ್ ಹಾಸನ್ ರವರ ಮೇಲೆ ಇತ್ತೀಚಿಗೆ ಕೊಲೆಯ ಬೆದರಿಕೆ ಖಂಡಿಸಿ.

11.ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿ/ಎಸ್‌ಪಿ) ಹಾಗೂ ಟಿ.ಎಸ್.ಪಿ ಕಾಯಿದೆಯನ್ನು ಕೇಂದ್ರದಲ್ಲಿ ಅನುಷ್ಠಾನಕ್ಕೆ ತರಬೇಕೆಂಬ ಒತ್ತಾಯ.

ಹೀಗೆ ಪ್ರಮುಖವಾದ 20 ಕ್ಕೂ ಹೆಚ್ಚು ನಿರ್ಣಯಗಳನ್ನು ಮಂಡಿಸಿ, ಹಲವು ಸೂಕ್ತ ತಿದ್ದುಪಡಿಗಳೊಂದಿಗೆ ಸಮ್ಮೇಳನವು ಅಂಗೀಕರಿಸಿತು. ಕರ್ನಾಟಕದ ಪ್ರತಿನಿಧಿಗಳ ಪರವಾಗಿ (1) ಬಡ್ತಿಯಲ್ಲಿ ಮೀಸಲಾತಿ, (2) ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಹಾಗೂ (3) ದೇವದಾಸಿ ಮಹಿಳೆಯರ ಕುಟುಂಬಗಳಿಗೆ ಪುನರ್ ವಸತಿ ಒದಗಿಸುವ ಮೂರು ನಿರ್ಣಯಗಳನ್ನು ಮಂಡಿಸಲಾಯಿತು.

ಬಹಿರಂಗ ಸಭೆ

ಕೊನೆಯ ದಿನ ಸುಮಾರು 6 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಮಧುರೈ ನಗರದ ಸಾಮೂಹಿಕ ಸಂಘಟನೆಗಳು, ಸಾಮಾನ್ಯ ಜನ ಸಾಮಾನ್ಯರು ಹೆಚ್ಚಾಗಿ ಭಾಗವಹಿಸಿದ್ದ ಈ ಮೆರವಣಿಗೆ ತುಂಬ ಅರ್ಥ ಪೂರ್ಣ ಸಂದೇಶವನ್ನು ರವಾನಿಸುವಲ್ಲಿ ಪ್ರಮುಖವಾಗಿತ್ತು. ಈ ದೇಶದ ದಲಿತರು ಅನುಭವಿಸುತ್ತಿರುವ

ಜಾತಿದಮನ ಹಾಗೂ ಅಸ್ಪೃಶ್ಯತಾ ಆಚರಣೆಗಳನ್ನು ತೊಡೆದು ಹಾಕುವಲ್ಲಿ ಮಧುರೈ ನಗರದ ಸಾಮಾನ್ಯ ಜನ ಸಮುದಾಯವು ನಿಮ್ಮೊಂದಿಗೆ ನಾವು ಇದ್ದೇವೆ, ಜೊತೆಗೂಡಿ ಈ ಅಮಾನವೀಯ ಆಚರಣೆಗಳನ್ನು ನಿರ್ಮೂಲನೆ ಮಾಡೋಣ ಎಂಬ ಪ್ರಬಲವಾದ ಸಂದೇಶವನ್ನು ದೇಶದ ಪಾಳೇಯಗಾರಿ ಮೌಲ್ಯಗಳನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿರುವ, ಆರ್‌ಎಸ್‌ಎಸ್ ಹಾಗೂ ಸಂಘಪರಿವಾರದವರಿಗೆ ಹಾಗೂ ಪ್ರಬಲ ಕೋಮಿನ ಸಮುದಾಯಗಳಿಗೆ ಈ ಮೆರವಣಿಗೆ ಎಚ್ಚರಿಕೆಯ ಗಂಟೆಯನ್ನು ರವಾನಿಸಿತು. ಮಧುರೈನ ಸಾಮೂಹಿಕ ಹಾಗೂ ವರ್ಗ ಸಂಘಟನೆಗಳಿಗೆ ಅಭಿನಂದನೆಗಳನ್ನು ಸಲ್ಲಿಸಲೇ ಬೇಕು.

ಮೆರವಣಿಗೆಯ ನಂತರ ಬಹಿರಂಗ ಸಭೆಯನ್ನು ಉದ್ದೇಶಿಸಿ, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಾತನಾಡಿದರು.

ನಾವೆಲ್ಲ ಹೆಮ್ಮೆ ಪಡುವಂತ ಗಣ್ಯರು ಡಾ। ಅಂಬೇಡ್ಕರ್ ರವರು, ಅವರೊಬ್ಬ ರಾಷ್ಟ್ರನಾಯಕರಾಗಿದ್ದರು, ಅವರ ಮೊಮ್ಮಗ ಡಾ। ಪ್ರಕಾಶ್ ಅಂಬೇಡ್ಕರ್ ರವರು ಡಿಎಸ್ಎಂಎಂ ನ ಈ ಸಮ್ಮೇಳನ ಉದ್ಘಾಟಿಸಿದ್ದು ಅರ್ಥಪೂರ್ಣವಾಗಿದೆ. ಸಂವಿಧಾನದ ಆಶಯಗಳು, ಅದರಲ್ಲಿರುವ ಮೀಸಲಾತಿ ಸವಲತ್ತುಗಳು ಇಂದು, ಪ್ರಸಕ್ತ ನರೇಂದ್ರಮೋದಿ ಸರ್ಕಾರ ನಾಶಗೊಳಿಸಲು ಪ್ರಯತ್ನಿಸುತ್ತಿದೆ. ಆ ನಿಟ್ಟಿನಲ್ಲಿ ದಲಿತರು ಒಂದಾಗಿ ದೊಡ್ಡ ಚಳುವಳಿಗೆ ಧುಮುಕಲು ಇದು ಸಕಾಲವಾಗಿದೆ. ಡಿಎಸ್ಎಂಎಂ ಆ ಕೆಲಸ ಮಾಡಬೇಕಾದ ದೊಡ್ಡ ಸವಾಲನ್ನು ಹೊಂದಿದೆ ಎಂದರು.

ಕೇರಳದಲ್ಲಿ ಹಾಗೂ ತ್ರಿಪುರ ರಾಜ್ಯಗಳಲ್ಲಿನ ಸಿಪಿಐ(ಎಂ) ನೇತೃತ್ವದ ಎಡ ಪಕ್ಷಗಳ ಸರ್ಕಾರಗಳು ದಲಿತರಿಗೆ – ಸಂವಿಧಾನ ಬದ್ಧವಾಗಿರುವ ಎಲ್ಲಾ ಸವಲತ್ತುಗಳನ್ನು ಪ್ರಮುಖವಾಗಿ ಭೂಮಿ ಹಂಚಿಕೆ, ವಸತಿ ಹಾಗೂ ಉದ್ಯೋಗಗಳಲ್ಲಿ ಮೀಸಲಾತಿ ಒದಗಿಸುವ ನಿಟ್ಟಿನಲ್ಲಿ ಎಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಕೇರಳದಲ್ಲಿ ದೇವಸ್ಥಾನಗಳಲ್ಲಿ ದಲಿತ ಅರ್ಚಕರನ್ನು ನೇಮಿಸಿರುವುದು ಸಂವಿಧಾನದ ಆಶಯವಾಗಿದೆ ಎಂದರು.

ಪ್ರಸ್ತುತ ದೇಶದ ರಾಜಕೀಯವು ತುಂಬ ಅಪಾಯಕಾರಿ ಹಂತವನ್ನು ತಲುಪುತ್ತಿದೆ. ಬಿಜೆಪಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ನಿಯಂತ್ರಣ ಹೊಂದಿದೆ. ಆರ್‌ಎಸ್‌ಎಸ್ ನೀತಿಗಳನ್ನು ಜಾರಿ ಮಾಡುವ ಕೆಲಸವೇ ಕೇಂದ್ರದ ಬಿಜೆಪಿಯದ್ದು. ಆರ್‌ಎಸ್‌ಎಸ್ ನೀತಿಗಳು ದೇಶದ ಹಿತಾಸಕ್ತಿಗೆ ವಿರುದ್ಧವಾಗಿದೆ. ಅದು ಸಂವಿಧಾನವನ್ನು ಎಂದಿಗೂ ಒಪ್ಪುವುದಿಲ್ಲ, ಬದಲಿಗೆ ಮನುಸ್ಮೃತಿಯೆ ಅದರ ಮೂಲ ತತ್ವವಾಗಿದೆ. ಆದ್ದರಿಂದ – ಪ್ರಜಾಪ್ರಭುತ್ವ, ಜಾತ್ಯಾತೀತೆಯನ್ನು ಕಗ್ಗೊಲೆ ಮಾಡುತ್ತದೆ. ಕೇರಳದಲ್ಲಿ ಅದರ ಆಟ ನಡೆಯಲು ಎಂದಿಗೂ ಬಿಡುವುದಿಲ್ಲ ಎಂದರು.

ನಾರಾಯಣಗುರು, ಪೆರಿಯಾರ್, ಅಂಬೇಡ್ಕರ್ ರವರು ದೇಶದಲ್ಲಿ ಬೇರೂರಿರುವ ಪಾಳೇಯಗಾರಿ ಮೌಲ್ಯಗಳನ್ನು ನಿರ್ಮೂಲನೆ ಮಾಡಲು ಹೊರಟ ಸಾಮಾಜಿಕ ಚಳುವಳಿಗಳ ಪ್ರಮುಖರು. ಅವರ ಈ ಹೋರಾಟವನ್ನು ಮುಮದುವರಿಸುವ ನಿಟ್ಟಿನಲ್ಲಿ ಕೆಂಪು-ನೀಲಿ ಒಂದಾಗಬೇಕು. ಈ ನಿಟ್ಟಿನಲ್ಲಿ ಡಿಎಸ್ಎಂಎಂ ನ ಈ ಸಮ್ಮೇಳನವು ಮಹತ್ವಪೂರ್ಣ ನಿರ್ಣಯಗಳನ್ನೂ ತೆಗೆದುಕೊಂಡಿದೆ ಎಂಬ ಭರವಸೆ ನನಗಿದೆ ಎಂದು ತಮ್ಮ ಭಾಷಣ ಮುಗಿಸಿದರು.

ಒಟ್ಟಾರೆಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದ ನನ್ನನ್ನು ಒಳಗೊಂಡಂತೆ, ಕರ್ನಾಟಕದಿಂದ ಭಾಗವಹಿಸಿದ್ದ 32 ಪ್ರತಿನಿಧಿಗಳಲ್ಲಿ ಹೊಸ ಉತ್ಸಾಹ ತುಂಬುವಲ್ಲಿ ಡಿಎಸ್ಎಂಎಂ ನ 2 ನೇ ಅಖಿಲ ಭಾರತ ಸಮ್ಮೇಳನವು ಯಶಸ್ವಿಯಾಗಿದೆ. ●



ಉತ್ತರದಲ್ಲಿ ದುಸ್ಥಿತಿ-ಅಸಹಿಷ್ಣುತೆ! ಏಕೆ?!..... ಪುಟ 6 ರಿಂದ

ಬಗ್ಗೆ ಮಾತನಾಡಲಾಗುತ್ತಿದೆ. ಅದು ಕೇವಲ ಮಾತಿನಲ್ಲಿದೆಯೆ ವಿನಾ ಕೃತಿಯಲ್ಲಿಲ್ಲ. ಆದರೆ ದಕ್ಷಿಣ ಭಾರತದ ರಾಜ್ಯಗಳ ಅಭಿವೃದ್ಧಿ ಮಾದರಿಯೇನಿದೆ ಅದು ಕೃತಿಯಲ್ಲಿದೆ. ಜನರು ಅದನ್ನು ಅನುಭವಿಸುತ್ತಿದ್ದಾರೆ. ಇದು ವಸ್ತುಸ್ಥಿತಿ. ಆದರೂ ಎಡಪಂಥೀಯ ಪ್ರಣಾಳಿಕೆ ಆಧಾರದಲ್ಲಿ ಸಿದ್ಧವಾಗಿರುವ ಕೇರಳ ಅಭಿವೃದ್ಧಿ ಮಾದರಿಯನ್ನು ಹೀಯಾಳಿಸಲಾಗುತ್ತಿದೆ. ಅಲ್ಲಿನ ಜನರ ಜೀವನವನ್ನು, ಆರ್ಥಿಕ ಬೆಳವಣಿಗೆಯನ್ನು ಹದಗೆಡಿಸುವ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ಗುಜರಾತ್ ಮತ್ತು ಕೇರಳ ರಾಜ್ಯಗಳ ಅಭಿವೃದ್ಧಿಯ ಸಾಪೇಕ್ಷ ಸ್ಥಾನವನ್ನು ತೋರಿಸಲಾಗಿದೆ. ಅಲ್ಪಸಂಖ್ಯಾತರ ಮೇಲೆ ಇಲ್ಲದ ಸಲ್ಲದ ಆರೋಪ ಹೊರಿಸುವ ಕೋಮುವಾದಿಗಳು ಕೇರಳದಲ್ಲಿನ ಜನಸಂಖ್ಯಾ ಸಂರಚನೆ ಮತ್ತು ಅದರ ಅಭಿವೃದ್ಧಿ ಸ್ವರೂಪದಿಂದ ಪಾಠ ಕಲಿಯಬೇಕು. ಅಲ್ಪಸಂಖ್ಯಾತರು ಯಾವತ್ತೂ ಅಭಿವೃದ್ಧಿಗೆ ಅಡ್ಡಿಯಾಗುವುದಿಲ್ಲ. ಏಕೆಂದ-ರೆ ಅವರಿಗೆ ದುಡಿಮೆಯೇ ಬದುಕು. ಕೇರಳದ ಒಟ್ಟು ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಶೇ.45.20. ಗುಜರಾತಿನಲ್ಲಿ ಅವರ ಪ್ರಮಾಣ ಶೇ.11.29. ಕೇರಳದಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಅಧಿಕವಾಗಿದೆ ಮತ್ತು ಅದರ ಅಭಿವೃದ್ಧಿಮಟ್ಟವೂ ಗುಜರಾತಿಗಿಂತ ಉನ್ನತವಾಗಿದೆ. ಹಾಗೂ ಅಲ್ಲಿನ ಕೋಮು ಸೌಹಾರ್ದತೆಯು ಅನುಕರಣೀಯವಾಗಿದೆ. ಗುಜರಾತ್ ರಾಜ್ಯವು 2011ರಲ್ಲಿಯೂ ಜನಸಂಖ್ಯೆಯ ತೀವ್ರ ಏರಿಕೆ ಸಮಸ್ಯೆಯನ್ನು ಎದುರಿಸುತ್ತಿದೆ. ಆದರೆ ಕೇರಳ ರಾಜ್ಯವು ಎರಡು ದಶಕಗಳ ಹಿಂದೆಯೇ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದೆ. ಜನಸಂಖ್ಯೆಯ ತೀವ್ರ ಬೆಳವಣಿಗೆಗೆ ಅಲ್ಪಸಂಖ್ಯಾತರು ಕಾರಣ ಅನ್ನುವ ಜನರು ಕೇರಳದ ಅನುಭವದಿಂದ ಪಾಠ ಕಲಿಯಬೇಕು. ಒಟ್ಟು ಜನಸಂಖ್ಯೆಯಲ್ಲಿ ಶೇ45.20ರಷ್ಟು ಅಲ್ಪಸಂಖ್ಯಾತರಿರುವ ಕೇರಳದಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ 2001-2011ರಲ್ಲಿ ವಾರ್ಷಿಕ ಶೇ.0.49. ಆದರೆ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಶೇ11.29 ಅಲ್ಪಸಂಖ್ಯಾತರಿರುವ ಗುಜರಾತಿನಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ವಾರ್ಷಿಕ 2001-2011ರಲ್ಲಿ ಶೇ2.27. ಜನಸಂಖ್ಯೆಯ ಬೆಳವಣಿಗೆಗೆ ಅಲ್ಪಸಂಖ್ಯಾತರು-ಬಹುಸಂಖ್ಯಾತರು ಅನ್ನುವ ತಾರತಮ್ಯ-ಭಿನ್ನತೆ ಮಾಡುವುದು ಅರ್ಥರಹಿತ.

ಎಲ್ಲ ಹನ್ನೆರಡು ಅಭಿವೃದ್ಧಿ ಸೂಚಿಗಳಲ್ಲಿಯೂ ಕೇರಳ ರಾಜ್ಯವು ಗುಜರಾತಿಗಿಂತ ಬಹಳಷ್ಟು ಎತ್ತರದಲ್ಲಿದೆ-ಉತ್ತಮವಾಗಿದೆ. ಇಷ್ಟು ಹೇಳಿಬಿಟ್ಟರೆ ಸಾಕಾಗುವುದಿಲ್ಲ. ಎಡಪಂಥೀಯ ಚಿಂತನೆಯನ್ನು ವಿರೋಧಿಸಿ ಕೇರಳದಲ್ಲಿ ಜನಸುರಕ್ಷಾಯಾತ್ರೆಯನ್ನು ನಡೆಸಲಾಯಿತು. ನಿಜಕ್ಕೂ ಜನರಕ್ಷಾಯಾತ್ರೆ ಎಲ್ಲಿ ನಡೆಯಬೇಕಾಗಿತ್ತು? ಕೇರಳದಲ್ಲಿ ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಮಹಿಳೆಯರ ಸಂಖ್ಯೆ 12.43 ಲಕ್ಷ. ಗುಜರಾತಿನಲ್ಲಿ ಅಕ್ಷರ ಸಂಸ್ಕೃತಿಯಿಂದ ವಂಚಿತರಾದ 76.68 ಲಕ್ಷ ಮಹಿಳೆಯರಿದ್ದಾರೆ(ಅನಕ್ಷರಸ್ಥರು) . ಕೇರಳದಲ್ಲಿ ಲಿಂಗ ತಾರತಮ್ಯದ ಕಾರಣವಾಗಿ ಕಾಣೆಯಾದ ಮಹಿಳೆಯರಿಲ್ಲ. ಅಲ್ಲಿ ಲಿಂಗ ಅನುಪಾತ ಮಹಿಳೆಯರಿಗೆ ಪರವಾಗಿದೆ. ಆದರೆ ಗುಜರಾತಿನಲ್ಲಿ ಲಿಂಗ ಅನುಪಾತ 920. ಅಲ್ಲಿ 2011ರಲ್ಲಿ 25.42 ಲಕ್ಷ ಮಹಿಳೆಯರು ಲಿಂಗ ತಾರತಮ್ಯಕ್ಕೆ ಬಲಿಯಾಗಿ ಕಾಣೆ-ಯಾಗಿದ್ದಾರೆ. ರಾಜ್ಯದ ಒಟ್ಟು ಮಹಿಳೆಯರ ಸಂಖ್ಯೆಯಲ್ಲಿ ಕಾಣೆಯಾದ ಮಹಿಳೆಯರ ಪ್ರಮಾಣ ಕೇರಳದಲ್ಲಿ ಶೂನ್ಯವಾಗಿದ್ದರೆ ಗುಜರಾತಿನಲ್ಲಿ ಅವರ ಪ್ರಮಾಣ ಶೇ.8.78. ಅಪೌಷ್ಟಿಕತೆಯನ್ನು ಎದುರಿಸುತ್ತಿರುವ ಮಹಿಳೆಯರ ಮತ್ತು ಮಕ್ಕಳ ಪ್ರಮಾಣ 2015-16ರಲ್ಲಿ ಗುಜರಾತಿನಲ್ಲಿ ಕೇರಳಕ್ಕಿಂತ ಅಧಿಕವಾಗಿದೆ.ಕೇರಳ ರಾಜ್ಯದಲ್ಲಿ ಜನರ ಜೀವನಾಯುಷ್ಯವು ಗುಜರಾತಿನಲ್ಲಿ ಇರುವುದಕ್ಕಿಂತ ಉತ್ತಮವಾಗಿದೆ. ಹುಟ್ಟಿದ ಪ್ರತಿ ಸಾವಿರ ಮಕ್ಕಳಲ್ಲಿ ವಾರ್ಷಿಕ 12 ಮಕ್ಕಳು ಮಾತ್ರ ಕೇರಳದಲ್ಲಿ ಅಸು ನೀಗಿದರೆ ಗುಜರಾತಿನಲ್ಲಿ ಪ್ರತಿ ಸಾವಿರ ಜನನಕ್ಕೆ ವಾರ್ಷಿಕ 33 ಮಕ್ಕಳು ಅಸು ನೀಗುತ್ತಿವೆ. ಜೀವನಾಯುಷ್ಯವು ಸಮೃದ್ಧ ಜೀವನದ ಸೂಚಿಯಾಗಿದೆ. ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯಾಗಬೇಕಾಗಿರುವುದು ಗುಜರಾತಿನಲ್ಲಿಯೇ ವಿನಾ ಕೇರಳದಲ್ಲಿ ಅಲ್ಲ. ಜನರಕ್ಷಾಯಾತ್ರೆಯಲ್ಲಿ ಭಾಗವಹಿಸಿದ್ದ ಉತ್ತರ ಪ್ರದೇಶದ ಮುಖ್ಯಮಂತ್ರಿ ಅವರು ಕೇರಳವು ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಎತ್ತರವನ್ನು ಗಮನಿಸಬೇಕು. ಕೇಂದ್ರದ 2016-17ರ ಆರ್ಥಿಕ ಸಮೀಕ್ಷೆ:ಸಂ.2ರಲ್ಲಿನ ಮಾಹಿತಿಯಂತೆ 2008 ರಲ್ಲಿ ಕೇರಳದ ಆರೋಗ್ಯ ಸೂಚ್ಯಂಕ 0.817. ಆದರೆ ಉತ್ತರ ಪ್ರದೇಶದ್ದು 0.175. ಅಲ್ಲಿ ಆರೋಗ್ಯದ ಸ್ಥಿತಿಯು ಅತ್ಯಂತ ಹೀನಾಯವಾಗಿದೆ. ತನ್ನ ರಾಜ್ಯದ ತೀವ್ರ ಆರೋಗ್ಯ ಸಮಸ್ಯೆಗಳನ್ನು ನಿರ್ವಹಿಸುವುದನ್ನು ಬಿಟ್ಟು ಅವರು ಜನಸುರಕ್ಷಾ ಯಾತ್ರೆಯಲ್ಲಿ ಭಾಗವಹಿಸಿರುವುದು ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡವರಿಗೆ ಸಲ್ಲುವ ಸಂಗತಿಯಲ್ಲ. ಉತ್ತರ ಪ್ರದೇಶದಲ್ಲಿ ಲಿಂಗ ಅನುಪಾತ 912 ಮತ್ತು ಮಕ್ಕಳ ಲಿಂಗ ಅನುಪಾತ 902. ಇಲ್ಲಿ ಹೆಣ್ಣು ಮಕ್ಕಳು ಹುಟ್ಟುವುದೆ ದುರ್ಲಭ ಅನ್ನುವಂತಾಗಿದೆ.ಪ್ರತಿ ಸಾವಿರ ಪುರುಷರ ಎದುರಿಗೆ ಕಾಣೆಯಾದ ಮಹಿಳೆಯರ ಸಂಖ್ಯೆ 88. ಲಿಂಗ ಸಮಾನತೆಯನ್ನು ವ್ರತದಂತೆ ಸಾಧಿಸಿಕೊಂಡು ಬಂದಿರುವ ಕೇರಳವು ಉತ್ತರ ಪ್ರದೇಶದ ಮುಖ್ಯಮಂತ್ರಿ ಅವರಿಂದ ಕಲಿಯುವುದೇನಿಲ್ಲ. ಉತ್ತರ ಪ್ರದೇಶವು ಯಾವ ಅಭಿವೃದ್ಧಿ ಸೂಚಿಯಲ್ಲಿಯೂ ದಕ್ಷಿಣ ಭಾರತದ ರಾಜ್ಯಗಳನ್ನು ಮೀರಿಸುವ ಸ್ಥಿತಿಯಲ್ಲಿಲ್ಲ.

ಅಸಹಿಷ್ಣುತೆ ರಾಜಕಾರಣ

ದಕ್ಷಿಣ ಭಾರತದ ನಾಲ್ಕು ರಾಜ್ಯಗಳು ಮತಾಂಧತೆಗೆ, ಅಸಹಿಷ್ಣುತೆಗೆ, ಕೋಮುದ್ವೇಷಕ್ಕೆ, ವಿಚ್ಛಿದ್ರಕಾರಿ ಶಕ್ತಿಗಳಿಗೆ ಅವಕಾಶ ನೀಡಿಲ್ಲ. ಇಲ್ಲಿನ ರಾಜಕಾರಣದಲ್ಲಿಯಾವತ್ತೂ ಅಭಿವೃದ್ಧಿಯು ಸರ್ಕಾರಗಳ ಮತ್ತು ಸಮಾಜದ ಪ್ರಮುಖ ಗುರಿಯಾಗಿದೆ. ವ್ಯಾಪಾರ-ಧಾರ್ಮಿಕತೆ-ರಾಜಕಾರಣಗಳ ನಡುವೆ ಭಿನ್ನತೆಯು ಇಂದು ಅಳಿಸಿ ಹೋಗಿದೆ. ಈ ಮೂರನ್ನು ಮಿಶ್ರ ಮಾಡಿಕೊಂಡು ಕಾರ್ಪೊರೇಟ್ ಸಂತರಾಗುವವರ ಸಂಖ್ಯೆ ಇಂದು ದೇಶದಲ್ಲಿ ಅಧಿಕವಾಗಿದೆ. ಇಲ್ಲಿ ಧರ್ಮ, ವಾಣಿಜ್ಯ ಮತ್ತು ರಾಜಕಾರಣ ಬೇರೆ ಬೇರೆಯೇ ಅಲ್ಲ. ಆದರೆ ದಕ್ಷಿಣ ಭಾರತವು ಇಂತಹ ಅಪವಿತ್ರ ಮೈತ್ರಿಯ ಪ್ರವೃತ್ತಿಯನ್ನು ಯಾವತ್ತೂ ಪೋಷಿಸಲಿಲ್ಲ. ರಾಷ್ಟ್ರಕವಿ ಕುವೆಂಪು ನುಡಿದಂತೆ ದಕ್ಷಿಣ ಭಾರತ ಅನ್ನುವುದು ಸರ್ವಜನಾಂಗದ ಶಾಂತಿಯ ತೋಟವಾಗಿದೆ. ಈ 'ಸರ್ವ ಜನಾಂಗದ ಶಾಂತಿಯ ತೋಟ'ದ ವಾತಾವರಣವನ್ನು ಕೋಮು ಶಕ್ತಿಗಳು ವಿಕೃತಿಗೊಳಿಸಲು ಪ್ರಯತ್ನಿಸುತ್ತಿವೆ. ಜನಸುರಕ್ಷಾಯಾತ್ರೆ ಅನ್ನುವುದು ಅಂತಹ ಒಂದು ಕ್ರಮ. ಹಸುಗೂಸುಗಳು ದವಾಖಾನೆಗಳಲ್ಲಿ ಅಪೌಷ್ಟಿಕತೆಯಿಂದ, ಅನಿಮಿಯದಿಂದ, ಹಸಿವಿನಿಂದ ಅಸು ನೀಗುತ್ತಿದ್ದರೆ ಉತ್ತರ ಭಾರತದ ರಾಜಕಾರಣಕ್ಕೆ ಮಂಗಳಾರತಿ, ಮಹೋತ್ಸವಗಳು, ಉಗ್ರ ಭಾಷಣಗಳು ಮುಖ್ಯವಾಗಿ ಬಿಟ್ಟಿವೆ.ಹಿಂಸಾ ರಾಜಕಾರಣದಲ್ಲಿ ಕೇರಳದ ಎಡ ಪಕ್ಷಗಳು ನಿರತವಾಗಿದ್ದಿದ್ದರೆ ಅದು ಇಂದು ಅಕ್ಷರ, ಆರೋಗ್ಯ, ಆಹಾರ, ಆಶ್ರಯಗಳಿಗೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಔನ್ನತ್ಯವನ್ನು ಸಾಧಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಎಲ್ಲಿಯವರೆಗೆ ಉತ್ತರ ಭಾರತದ ರಾಜ್ಯಗಳು ಅಸಹಿಷ್ಣುತೆಯನ್ನು ಬಿಡುವುದಿಲ್ಲವೋ, ಕೋಮುದ್ವೇಷವನ್ನು ನಿಲ್ಲಿಸುವುದಿಲ್ಲವೋ, ಅಭಿವೃದ್ಧಿಗೆ ಪ್ರತಿಯಾಗಿ ಜನರ ಭಾವನೆಗಳನ್ನು ಕೆರಳಿಸುವುದರಲ್ಲಿ ನಿರತವಾಗಿರುತ್ತವೋ ಅಲ್ಲಿಯವರೆಗೆ ಅಲ್ಲಿ ಜನರ ಬದುಕು ಸಮೃದ್ಧವಾಗುವುದಿಲ್ಲ. ಗುಜರಾತ್ ರಾಜ್ಯವು ಅಳವಡಿಸಿಕೊಂಡಿರುವ ಅಭಿವೃದ್ಧಿ ಮಾದರಿಯ ಮೂಲಕ ಕೇರಳದಲ್ಲಿ ಜನರು ಸಾಧಿಸಿಕೊಂಡಿರುವ ಬದುಕಿನ ಸಮೃದ್ಧತೆಯನ್ನು ಗುಜರಾತ್ ಸಾಧಿಸಿಕೊಳ್ಳಲು ಅದಕ್ಕೆ ಕನಿಷ್ಠ ಎರಡು-ಮೂರು ದಶಕಗಳು ಬೇಕಾಗುತ್ತವೆ. ಅಲ್ಲಿನ ವರಮಾನ ಇಮ್ಮಡಿಯಾಗಬಹುದು. ಉದ್ದಿಮೆಗಳ ಲಾಭ ನೂರ್ಮಡಿಯಾಗಬಹುದು. ಆದರೆ ಜನರ ಬದುಕು ವರಮಾನದಿಂದ, ಉದ್ಯಮಪತಿಗಳು ಗಳಿಸುವ ಲಾಭದಿಂದ, ಅಲ್ಪಸಂಖ್ಯಾತರ ವಿರುದ್ಧ ವಿಷ ಕಾರುವುದರಿಂದ ಉತ್ತಮವಾಗುವುದಿಲ್ಲ. ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳನ್ನು ಆಧರಿಸಿದ ಅಭಿವೃದ್ಧಿ ಮಾದರಿ ಮಾತ್ರ ನಮ್ಮ ಜನರ ಬದುಕನ್ನು ಉತ್ತಮಪಡಿಸಬಲ್ಲದು. ●

ಉತ್ತರ ಕನ್ನಡದ ಕೋಮುವಾದಿ ರಾಜಕೀಯ ಮತ್ತು ಅನಂತನ ಅವತಾರಗಳು.............

ಪುಟ 9 ರಿಂದ

ಉತ್ತರ ಕನ್ನಡದಲ್ಲಿ "ಅಯೋಧ್ಯಾಕಾಂಡ" ಸೃಷ್ಟಿಗೆ ಶತಾಯಗತಾಯ ಪ್ರಯತ್ನಿಸಿದ ವಿಶ್ವಹಿಂದೂ ಪರಿಷತ್ತು. ಭಟ್ಕಳ ನೂರಾರು ಬಾರಿ ಕರ್ಫ್ಯೂ ಕಾಣುವಂತಾಯಿತು, ಉದ್ಯಮಿಗಳು ಊರು ಬಿಟ್ಟರು, ಹೆಣಗಳು ಬಿದ್ದವು, ಭೀಕರ ಗಾಯಗಳು, ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿ ನಷ್ಟವಾಯಿತು, ಪ್ರಾರ್ಥನಾ ಮಂದಿರಗಳು ಧ್ವಂಸವಾದವು. ಬಡವರ ತುತ್ತು ಚೆಲ್ಲಿ ಹೋಯಿತು. ಗಲಭೆ ಸೃಷ್ಟಿಸಿದವರು ಹಾಯಾಗಿ ಉಳಿದರು, ಬಡ ಹಿಂದುಳಿದ ಅಮಾಯಕರು ದೊಂಬಿಗೆ ಬಲಿಯಾದರು. ಲೂಟಿ ಮಾಡಿದರು, ಹಿಂದೂ ಕೋಮಿನವರಿಗೆ ಬುರ್ಖಾಹಾಕಿಸಿ ನಾಮಧಾರಿಗಳ ಮೇಲೆ ಹಲ್ಲೆ ಮಾಡಲಾಯಿತು, ಬಸ್ಸಿನಿಂದ ಮುಸ್ಲಿಂರನ್ನು ಎಳೆದಾಡಿ, ಆಭರಣ ಲೂಟಿ ಮಾಡಿ, ರಾಮರಾಮ ಹೇಳು ಎಂದು ಬಲವಂತ ಪಡಿಸಲಾಯಿತು. ವ್ಯವಸ್ಥಿತ ಹಲ್ಲೆ, ಪೂರ್ವನಿಯೋಜಿತ ಗಲಭೆಗಳನ್ನು ಸೃಷ್ಟಿಸುವಲ್ಲಿ ಆರ್.ಎಸ್.ಎಸ್ ನಿಸ್ಸೀಮ. ಅದಕ್ಕೇ ಪ್ರತಿಕ್ರಿಯೆಯಾಗಿ ಮುಸ್ಲಿಂ ಮೂಲಭೂತವಾದಿಗಳು ದಾಳಿಗಳಿಗೆ ಮುಂದಾದರು. ರಾಜಕೀಯ ಉದ್ದೇಶವಿಲ್ಲದೇ ಬಿಜೆಪಿ ಪರಿವಾರ ಇಂಥ ಗಲಭೆ ಸೃಷ್ಟಿಸಿಲ್ಲ. ಅಂದಿನ ಸಿ.ಎಂ ಬಂಗಾರಪ್ಪನವರ ಬಣದಲ್ಲಿ ಶಾಸಕರಾದ ಆರ್.ಎನ್. ನಾಯ್ಕ, ನಂತರ ಶಾಸಕರಾದ ಜೆ.ಡಿ ನಾಯ್ಕ ಕೂಡ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದರು.!

ಅದರ ಭೂಮಿಕೆಯನ್ನು ಹೇಗೆ ಸಿದ್ಧಪಡಿಸಲಾಗಿತ್ತು? ಹಿಂದು, ಅಂದು, ಇಂದು ಮುಂದು ಎಂದು ಹೇಳಿ ಮನೆಗೊಂದು ಕೇಸರಿ ಬಾವುಟ ಯೋಜನೆ, ಬ್ರಾಹ್ಮಣರೇತರರಿಗೆ ಉದ್ದ ತಿಲಕವಿಟ್ಟು ದೀಕ್ಷೆ, ಸಾಮೂಹಿಕ ಭೋಜನ, ಅಯೋಧ್ಯೆಯ ಘಟನೆ ಕುರಿತು ಸುಳ್ಳು ಸುದ್ದಿ ಹಬ್ಬಿಸುವುದು, ಶಸ್ತ್ರಾಸ್ತ್ರಗಳ ಸಂಗ್ರಹ (ಎರಡೂ ಬಣದಿಂದ) ಮಾಡಿಟ್ಟುಕೊಳ್ಳುವುದು ನಡೆಯಿತು. ಬಾಬ್ರಿ ಮಸೀದಿ ಬಿದ್ದಾಗ ಜಿಲ್ಲೆಯಲ್ಲಿ ಯಾವ ಹಿಂಸೆ ಮಾಡಿಸಲು ಆಗಿಲ್ಲವೊ ಅದನ್ನೆಲ್ಲ ಈಗ ಮಾಡಿಸಿದರು. ಸೌಹಾರ್ದ ಪರಂಪರೆಯ ತಿಳಿ ನೀರಿಗೆ ಕಲ್ಲೆಸೆದು ಷಡ್ಯಂತ್ರ ರೂಪಿಸಿದರು.

"ಅತಿ ಕಡಿಮೆ ಹಾಜರಾತಿಯ ಅನಂತ"

1996 ರಿಂದ 1998 ರವರೆಗೆ ಅಂದಿನ ಅನುದಾನ 4 ಕೋಟಿ ಜಿಲ್ಲೆಗೆ ಬರಬೇಕಿತ್ತು. ಆದರೆ ಇವರ ನಿಷ್ಕ್ರಿಯ ಅಭಿವೃದ್ಧಿ ದೃಷ್ಟಿಯಿಂದಾಗಿ ಆ ವರ್ಷಗಳಲ್ಲಿ ಆ ಹಣ ಉಪಯೋಗಕ್ಕೆ ಬಳಸಲೇ ಇಲ್ಲ. ಪಾಕಿಸ್ತಾನ್ ವಿರುದ್ಧ, ಮುಸ್ಲಿಂ–ಕ್ರಿಶ್ಚಿಯನ್ ವಿರುದ್ಧ ಮತ್ತು ಜಿಲ್ಲೆಯ ಶಾಂತಿ ಕದಡುವದು ಹೇಗೆ ಎಂದು ಸ್ಕೆಚ್ ಹಾಕಿಕೊಳ್ಳುವುದರಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಹಣ ತರಲು ಪುರಸೊತ್ತು ಆಗಿಲ್ಲ. 90 ರ ದಶಕಕ್ಕಿಂತ ಮೊದಲು ಸಂಸದರ ಅನುದಾನವಿರಲಿಲ್ಲ, ಪಿ.ವಿ. ನರಸಿಂಹರಾವ್ 1 ಕೋಟಿ ಅನುದಾನಕ್ಕೆ ನಂತರ ವಾಜಪೇಯಿ ಪ್ರಧಾನಿ ಆದಾಗ ವಾರ್ಷಿಕ 2 ಕೋಟಿ ಅನುದಾನದ ಘೋಷಣೆಯಾಯಿತು. ಆದರೆ ಅನಂತ ಕುಮಾರ ತನ್ನ ಸಂಸ್ಥೆಯ ಉದ್ಧಾರಕ್ಕೆ ತನ್ನ ಪಕ್ಷದ ಅಜೆಂಡಾ ಜಾರಿಗೆ ಮತ್ತು ತನ್ನ ವೈಯಕ್ತಿಕ ಚಹರೆಯನ್ನು ಉತ್ತಮ ಪಡಿಸಿಕೊಳ್ಳಲು ನಿರತರಾದರು ವಿನಃ ಜಿಲ್ಲೆಯ ಅಭಿವೃದ್ಧಿ ಕಡೆಗೆ ಲಕ್ಷವನ್ನೇ ಹಾಕಿಲ್ಲ.

ಈ ಸಂಸದರು ಇಷ್ಟು ವರ್ಷಗಳಲ್ಲಿ ಸಂಸತ್ತಿನ ಕಲಾಪಗಳಲ್ಲಿ ಎಷ್ಟು ಬಾಗವಹಿಸಿದ್ದಾರೆ? ಯಾವೆಲ್ಲ ಪ್ರಶ್ನೆಗಳನ್ನು ಕೇಳಿದ್ದಾರೆ? ಜಿಲ್ಲೆಯ ಅರಣ್ಯವಾಸಿ, ಬುಡಕಟ್ಟುಗಳ ಕುರಿತು ಇವರ ನಿಲುವೇನು? ಇಲ್ಲಿಯ ನಿರಾಶ್ರಿತರು ಹಸಿವೆಯಿಂದ ಬಳಲಿದಾಗ ಸಾಂತ್ವನ ಹೇಳಿದ್ದರೇ? ಭೂಮಿ ಪ್ರಶ್ನೆಯ ಇತ್ಯರ್ಥಕ್ಕೆ ಹಾಗೂ ಕಾನೂನು ಜನಪರ ತಿದ್ದುಪಡಿಗೆ ಏನಾದರೂ ಪ್ರಯತ್ನ ಮಾಡಿದ್ದರಾ? ಯಾವೆಲ್ಲ ಗಮನಸೆಳೆಯುವ ಪ್ರಶ್ನೆ ಎತ್ತಿದ್ದರು? ಸುತರಾಂ ಇಲ್ಲ. ಇವರು ವಿವಿಧ ಸಮಿತಿಗಳಲ್ಲಿ ಇಷ್ಟು ವರ್ಷ ಇದ್ದರು. ಆದರೆ ಜನರಿಗೆ ಗೊತ್ತಿಲ್ಲ. ಉದಾ: ವಿದೇಶಾಂಗ ವ್ಯವಹಾರ, ಕೃಷಿ, ಗೃಹ, ರಕ್ಷಣಾ, ಸಂಸದೀಯ ವ್ಯವಹಾರ ಸಮಿತಿಯಲ್ಲಿದ್ದರು. ಈಗ ವಿದೇಶಾಂಗ ವ್ಯವಹಾರ ಸಮಿತಿಯಲ್ಲಿದ್ದರು. ಸ್ಪೈಸ್ (ಸಾಂಬಾರ) ಮಂಡಳಿಯ ನಿರ್ದೇಶಕರಾಗಿದ್ದಾರೆ. ಇದು ಸ್ವಲ್ಪ ಗೊತ್ತಿದೆ. ಏಕೆಂದರೆ ಜಿಲ್ಲೆಯಲ್ಲಿ ಅನ್ನ ನೀಡುವ ಬೆಳೆ ಬಿಟ್ಟು, ವಾಣಿಜ್ಯ ಬೆಳೆ ಕೋಕಾ, ವೆನಿಲ್ಲಾ, ಅಗರ್ ಉಡ್ ಬೆಳೆಗೆ ಆದ್ಯತೆ ನೀಡಿದರು.!! ಆದರೆ ಸಂಸತ್ತಿನ ಕಲಾಪಗಳಲ್ಲಿ ಅತಿ ಕಡಿಮೆ ಬಾಗವಹಿಸಿದ ಖ್ಯಾತಿ ಆದರೆ ಫುಲ್ ಪೇಮೆಂಟ್ ಪಡೆದ ಖ್ಯಾತಿಯೂ ಇವರದ್ದೇ!!.

ಸಾಧನೆಯ ಪಟ್ಟಿ:

ಸಾಮರಸ್ಯ ಕೆಡಿಸಲು ಕೆಲಸ ಮಾಡುವವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಚಾಕು, ಚೂರಿ ಇರಿತ, ಗಲಾಟೆ, ದೊಂಬಿ, ಶಾಂತಿ ಭಂಗ, ಪ್ರಚೋದನ ಕಾರಿ ಭಾಷಣ, ಕೋಮು ಗಲಭೆಗೆ ಸ್ಕೆಚ್ ಇವು ಪ್ರಮುಖವಾಗಿ ಇವರ ಮೇಲಿರುವ ಆರೋಪಗಳು. ಎಲ್ಲವೂ ಅನ್ಯ ಧರ್ಮೀಯರ ಮೇಲೆ ಎಗರಿ ಬಿದ್ದ ಕೇಸುಗಳೇ. ಹಾಗಾಗಿ 90 ರ ದಶಕದಲ್ಲಿ ಅನೇಕ ತಿಂಗಳು ತಲೆ ಮರೆಸಿಕೊಂಡ ಈ ಅಪರಾಧಿಯು ಸಂಸದ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಎಂದು ತಿಳಿದ ಕೂಡಲೇ ಅಂದು ಹೆಚ್ಚು ಚಾಲ್ತಿಯಲ್ಲಿದ್ದ ಶಿರಸಿ ಮೂಲದ ಸ್ಥಳೀಯ ಪತ್ರಿಕೆ "ಮುನ್ನಡೆ" ಹೀಗೆ ಬರೆದಿತ್ತು–"ಇದೀಗ ನೂ–ರೆಂಟು ಕ್ರಿಮಿನಲ್ ಆಪಾದನೆಗಳಲ್ಲಿ ಭಾಗಿಯಾಗಿ ತಲೆ ಮರೆಸಿಕೊಂಡಿದ್ದ ಅನಂತ ಕುಮಾರ ಎಂಬ ಮನುಷ್ಯನಲ್ಲದ ಕ್ರೂರಿಗೆ ಲೋಕಸಭೆಗೆ ಸ್ಪರ್ಧಿಸಲು ಅವಕಾಶ ನೀಡಿ ಚಾರಿತ್ರ್ಯವಂತರ ಪಕ್ಷ ಎಂಬುದರ ಸಮಾಧಿ .... ತಣ್ಣಗಿನ ಈ ಜಿಲೆಯಲ್ಲಿ ಕೋಮುದಳ್ಳುರಿ ಎಬ್ಬಿಸಿದ ಹತ್ತಾರು ಪ್ರಕರಣಗಳು ಇವರ ಮೇಲಿದೆ" ಎಂದು. ಈ ವ್ಯಕ್ತಿಗೆ ಜಿಲ್ಲೆಗೆ ಕಾಲಿಡದಂತೆ ಕೋರ್ಟು ಕೂಡ ಆದೇಶಿಸಿತ್ತು. ಅಂದು ಜಿಲ್ಲೆಯಲ್ಲಿ ನಡೆದ ಹಲವು ದರೋಡೆ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡ ಬಹುತೇಕರು ಇವರ ಶಿಷ್ಯರೇ ಆಗಿದ್ದರು. ಆಗ ಇದನ್ನು "ಹಾಯ್ ಬೆಂಗಳೂರು" ಪತ್ರಿಕೆ ವರದಿ ಮಾಡಿತ್ತು. ಚಿತ್ತರಂಜನ್ ಕೊಲೆ ಪ್ರಕರಣದಲ್ಲಿಯೂ ಭಟ್ಕಳದಲ್ಲಿ ಇವರ ಬಗ್ಗೆ ಪೋಷ್ಟರ್ ಗಳನ್ನು ಹಾಕಿರುವ ಬಗ್ಗೆ ಸುದ್ದಿ ಓದಿದ್ದು ನೆನಪಿದೆ. "ಆದರೆ ಈ ಎಲ್ಲ ಪ್ರಕರಣ ತನಗೆ ಮೆಡಲ್ ಇದ್ದಂತೆ" ಎಂದು ಹುಂಬತನದ ಉತ್ತರ ಇವರದ್ದು. ಇವರ ಕಾರಣದಿಂದಾಗಿಯೇ ಕಾರವಾರದ ಅಂಜುದೀವ್, ಚಂದಾವರ, ಯಲ್ಲಾಪುರ, ಶಿರಸಿ, ಭಟ್ಕಳಗಳು ಭಯದ ಬೇಗುದಿಯಲ್ಲಿರುವಂತಾಗಿದೆ.

ಹೀಗೆ ತಣ್ಣಗಿದ್ದ ಶಾಂತಿಯ ಜಿಲ್ಲೆಯ ಕಾಡಿದ್ದು ಇವರ ಬಹುದೊಡ್ಡ ಸಾಧನೆ. ಇಷ್ಟೆಲ್ಲ ಆದ ಮೇಲೂ ಇವರು ಹೇಳುವುದು"ಅಕ್ಷರ ಮಾರಾಟ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವವರ ದೃಷ್ಟಿಯಲ್ಲಿ ನಾನು ಆರೋಪಿ" ಎಂದು ತನ್ನ ಕ್ರಿಮಿನಲ್ ತನವನ್ನು ಸಮರ್ಥಿಸಿಕೊಳ್ಳುತ್ತಾರೆ ಮಂತ್ರಿಯಾದ ಮೇಲೂ.

ಸೀಬರ್ಡ ನೌಕಾನೆಲೆ ತಾನು ಮಾಡಿಸಿದ್ದು ಎಂದರು, ಆದರೆ ಇದರ ಕಾರಣಕರ್ತರು ಬೇರೆಯೇ. ಆದರೆ ನಿರಾಶ್ರಿತರ ಗೋಳು ತಡೆಗಟ್ಟಬಹುದಾಗಿತ್ತು ಅದೂ ಆಗಿಲ್ಲ ಇವರಿಂದ.

ಅಂಕೋಲಾ ಹುಬ್ಬಳ್ಳಿ ರೈಲು ತಂದೆ ಎಂದು ರೈಲು ಬಿಟ್ಟಿದ್ದೇ ಬಂತು, ಪ್ರಚಾರಕ್ಕಾಗಿ ಕಲ್ಲು ಹಾಕಿಸಿದ್ದೇ ಸಾಧನೆ. ಪರಿಸರವಾದಿಗಳ ಅಡ್ಡಗಾಲಿನಿಂದ ಅದ–'ರ್ಕಕ್ಕೆ ನಿಂತಿದೆ ಎಂದು ಹೇಳುವ ಇವರು ಕೂಡ ಪರಿಸರವಾದದಿಂದಲೇ ಬಂದವರು ಮತ್ತು ಇವರಲ್ಲಿ ಬಹುತೇಕರು ಆರ್.ಎಸ್.ಎಸ್ ನವರೇ. ತಿಳಿ ಹೇಳಬಹುದಲ್ಲ?

1998–99 ರಲ್ಲಿ ಜಿಲ್ಲೆಯ ನಿರುದ್ಯೋಗಿಗಳ ಸಂ–ಖ್ಯೆ 56,760 ಉದ್ಯೋಗ ವಿನಿಮಯ ಕಛೇರಿಯಲ್ಲಿ ದಾಖಲು ಮಾಡಿಕೊಂಡವರು. ಈಗ ಅದು 2 ಲಕ್ಷಕ್ಕೂ ಹೆಚ್ಚು. ಐದು ಅವಧಿ ಸಂಸದರಾದ ಇವರು ಯಾರಿಗೆ ಉದ್ಯೋಗ ಕೊಡಿಸಿದರು? ಅದಕ್ಕಾಗಿ ಯಾವೆಲ್ಲ ಹೋರಾಟ ಮಾಡಿದರು? ಯಾವೆಲ್ಲ ಯೋಜನೆ ತರಬೇಕೆಂದು ಕೇಂದ್ರಕ್ಕೆ ಒತ್ತಾಯಿಸಿದರು?

ಕೌಶಲ್ಯ ಮಂತ್ರಿಗಳು ಸುಳ್ಳು ಹೇಳುವುದರಲ್ಲಿ ಕೌಶಲ್ಯ ಬೆಳೆಸಿಕೊಂಡಿದ್ದಾರೆ ಎಂಬುದಂತೂ ಸತ್ಯ. ಸುಭಾಸ್ ಚಂದ್ರ ಬೋಸರ ಸಾವಿನ ವಿಚಾರದಲ್ಲಿ ಸುಳ್ಳು ಹರಿಬಿಟ್ಟರು. ನಂತರ ಯಾರೋ ಕ್ಲ್ಯಾರಿಫಿಕೇಶನ್ ಕೊಡುವ ಸಂದರ್ಭ ಬಂತು. ಈಗ ಟಿಪ್ಪು ಜಯಂತಿ ಕಾರ್ಯಕ್ರಮ ಕುರಿತು ಭಾರೀ ಗೌಜು ಗದ್ದಲ ಸೃಷ್ಟಿಯ ನಾಯಕತ್ವ ವಹಿಸಿದ್ದಾರೆ. ಕರ್ನಾಟಕದ ಮುಖ್ಯಮಂತ್ರಿಗೆ ಧಮಕಿ ಹಾಕಿದ್ದಾರೆ.

ಇತಿಹಾಸ, ಧರ್ಮ, ಸಂಪ್ರದಾಯ, ಸಂಸ್ಕೃತಿ ರಾಷ್ಟ್ರೀಯತೆಯ ಬಗ್ಗೆ ಕಲ್ಪನೆ ಇಲ್ಲದವರು ನನ್ನನ್ನು ಆರೋಪಿ ಎನ್ನುತ್ತಾರೆ. ಎನ್ನುತ್ತಾ ತಾನು ಹಿಂದುತ್ವವಾದಿಯಲ್ಲ ರಾಷ್ಟ್ರೀಯವಾದಿ ಎಂದು ಹೇಳಿಕೆ ಕೊಟ್ಟರು. ಮತ್ತೊಂದು ದಿನ ರಾಷ್ಟ್ರೀಯವಾದ ಮತ್ತು ಹಿಂದುತ್ವ ಎರಡೂ ಒಂದೇ, ಅದನ್ನು ಭಿನ್ನವಾಗಿ ನೋಡುವವರು ಮೂರ್ಖರು ಎಂದು ಹೇಳಿ ತನ್ನ ತಾನೇ ಮೂರ್ಖನನ್ನಾಗಿಸಿಕೊಂಡರು!.

ಇವರು ಮತಾಂಧರೇ ಯಾಕೆಂದರೆ, ಇಸ್ಲಾಂ ಇರೋ ತನಕ ಭಯೋತ್ಪದನೆ ನಿಯಂತ್ರಣ ಸಾಧ್ಯವಿಲ್ಲ ಎಂದು ಹೇಳಿ ಒಂದು ಧರ್ಮದ ನಿರ್ನಾಮಕ್ಕೆ ಹೊರಡುವವರಿವರು. ಭಯೋತ್ಪಾದನೆಯನ್ನು ಸಾರಾಸಗಟು ಒಂದು ಧರ್ಮದ ತಲೆಗೆ ಅಂಟಿಸುವ ಇವರನ್ನು ಏನೆಂದು ಕರೆಯಬೇಕು?

ಕೌಶಲ್ಯ ಅಭಿವೃದ್ಧಿ ಮಂತ್ರಿಯಾಗಿ ಗಿಮಿಕ್?:

ಸೆಪ್ಟೆಂಬರ್ 3 ರಂದು ಕೇಂದ್ರ ಕೌಶಲ್ಯಾಭಿವೃದ್ಧಿ ರಾಜ್ಯ ಸಚಿವರಾದ ಮೇಲೆ "ನನ್ನದು ಉದ್ಯೋಗ ಸೃಷ್ಟಿಸುವ ಖಾತೆ, ವರ್ಷಕ್ಕೆ 1.96 ಕೋಟಿ ಉದ್ಯೋಗ ಜನರಿಗೆ ನೀಡುವ ಖಾತೆ, ಅದೊಂದು ಸವಾಲು, ಇನ್ನು 25 ವರ್ಷಗಳಲ್ಲಿ ಭಾರತದ 67 % ಜನರ ಜೀವನ ಶೈಲಿ ಬದಲಾಗಲಿದೆ" ಎಂದರು. ಅಂದರೆ ಮುಂದಿನ 25 ವರ್ಷಗಳ ಕಾಲ ಜನ ಪೂರ್ಣ ಉದ್ಯೋಗ–ಕ್ಕೆ ಕಾಯಬೇಕು, ಇವರೇ ಆರಿಸಿಬರಲಿದ್ದಾರೆ!. ಕೌಶಲ್ಯಾಭಿವೃದ್ಧಿಗೆ ವಿಶ್ವವಿದ್ಯಾಲಯ ಸ್ಥಾಪಿಸಲಿದ್ದಾರಂತೆ, ಇಂಡಿಯನ್ ಸ್ಕಿಲ್ ಡೆವೆಲಪ್ ಮೆಂಟ್ ಸರ್ವಿಸಸ್ (ಐ.ಎಸ್.ಡಿ.ಎಸ್) ಜಾರಿಗೊಳಿಸಲು ತೀರ್ಮಾನಿಸಿದ್ದಾರಂತೆ. ಅನಕ್ಷರಸ್ಥರಿಗೂ ಕೌಶಲ್ಯ ಪದವಿ ನೀಡಲಾಗುವುದೆಂದು ಆಸೆ ಹುಟ್ಟಿಸಿದ್ದಾರೆ.

ಮಾನವೀಯತೆಯ ಸ್ಯಾಂಪಲ್: ಮತಧರ್ಮ ದ್ವೇಷಿಗಳಿಂದ ಯಾವ ರೀತಿಯ ಮಾನವೀಯತೆ ನಿರೀಕ್ಷೆ? ಸಂಸದ ಮಂತ್ರಿ ಆಗುವ ಪೂರ್ವವೂ ಅದೇ ಜಾತಕ. ರಾತ್ರಿ ಹೊತ್ತು ಶಿರಸಿಯ ಕರ್ತವ್ಯ ನಿರತ ವೈದ್ಯರ ಮೇಲೆ ಹಲ್ಲೆ ಮಾಡಿದ್ದು ದೇಶವೇ ನೋಡಿದೆ. ಮೊನ್ನೆಮೊನ್ನೆ ಮಂತ್ರಿಗಳಾದ ಮೇಲೆ ಧಾರವಾಡದ ಅಂಗವಿಕಲರ ಶಾಲೆಗೆ ಬರುತ್ತೇನೆಂದು ಹೇಳಿ ಸತಾಯಿಸಿ ಕೊನೆಗೂ ಹೋಗಲೇ ಇಲ್ಲವಂತೆ, ಆ ಎಲ್ಲಾ ಅಂಗವಿಕಲ ಮಕ್ಕಳು ಕಾದು ಕಾದು ಸುಸ್ತಾದರಂತೆ.

ಇನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಸುದ್ದಿಯ ಕುರಿತು: "ನಾನಿನ್ನು ಲೋಕಸಭೆಗೆ ಸ್ಪರ್ಧಿಸುವುದಿಲ್ಲ" ಎಂದು ಆಗಾಗ ಹೇಳುತ್ತಿದ್ದಾರೆ. ಇವರು ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅಪರಾವತಾರದಂತೆ! ಅದಕ್ಕೇಂದೇ ಆರ್.ಎಸ್.ಎಸ್ ವ್ಯವಸ್ಥಿತವಾಗಿ ಇವರನ್ನು ಬೆಳೆಸಿದೆ. ಸಜ್ಜನರ ಪಕ್ಷ, ಸುಸಂಸ್ಕೃತರ ನಾಯಕತ್ವ, ಭಿನವಾದ ಪಕ್ಷ ಎಂದು ಹೇಳಿಕೊಂಡು ತನ್ನೊಳಗೆ ಕ್ರಿಮಿನಲ್ ತನವನ್ನು ಮುಚ್ಚಿಟ್ಟುಕೊಳ್ಳುತ್ತಿದೆ, ವಿವಿಧ ಹಗರಣದಲ್ಲಿ ಭಾಗಿಯಾಗಿ ಜೈಲು ಸೇರುವವರಿಗೆ ರಕ್ಷಣೆ ಕೊಟ್ಟು ಕಾಯುವ ಕಾವಲುಗಾರ ಪಕ್ಷವಾಗಿದೆ. ಲೈಂಗಿಕ ಹಗರಣದಲ್ಲಿ ಭಾಗಿಯಾದವರಿಗೆ ಸಂಸ್ಕೃತಿ ರಕ್ಷಣೆ–ಯ ಪಟ್ಟಕೊಡುತ್ತಾರೆ. ಮಕ್ಕಳ ಮತ್ತು ಮಹಿಳೆಯರ ಮಾರಾಟ ಜಾಲದಲ್ಲಿದ್ದವರಿಗೆ ರಾಷ್ಟ್ರೀಯ ನಾಯಕತ್ವ ಕೊಡುತ್ತಾರೆ. ತಮ್ಮ ವಿಚಾರ ಒಪ್ಪದವರನ್ನು ಈ ಲೋಕ ಬಿಟ್ಟು ಕಳಿಸ್ತಾರೆ. ಕಮ್ಯುನಿಷ್ಟರನ್ನು ಕೊಚ್ಚಿ ಕೊಲೆ ಮಾಡುತ್ತಾರೆ. ಅಂಥವರೇ ದೇಶಭಕ್ತರಾಗಿರುವ ಇವರ ಪಕ್ಷದಲ್ಲಿ ಕ್ರಿಮಿನಲ್ ಹಿಂದುತ್ವದ ಹಿನ್ನೆಲೆಯ ಮತಾಂಧರೊಬ್ಬರು ಮುಖ್ಯಮಂತ್ರಿ ಅಭ್ಯರ್ಥಿ ಆದರೆ ಆಶ್ಚರ್ಯವೇನಿದೆ? ಪ್ರತಿಬಾರಿ ಚುನಾವಣೆಗೆ ನಿಂತಾಗಲೂ "ತನಗೆ ಅಲ್ಪಸಂಖ್ಯಾತರ ಓಟ್ ಬೇಡ" ಅಭಿವೃದ್ಧಿಗಿಂತ ಮತಧರ್ಮವೇ ಮೇಲು, ಎನ್ನುವ ಕಟ್ಟರ್ ಆರ್.ಎಸ್.ಎಸ್ ನವರನ್ನು ಈ ಹುದ್ದೆಗೆ ತರಬಹುದು. ಪೋಲಿಸರು ಯಾವತ್ತಿಗೂ ನಿಯತ್ತಿನ ನಾಯಿಗಳು, ಎಂದು ಜರೆಯುತ್ತಾ, ನನ್ನ ವಿರುದ್ಧ ಕೇಸ್ ಹಾಕಿ ಏನ್ ಹರ್‍ಕೊಂಡ್ರಿ ಎಂದು ಕಾನೂನು ಕೈಗೆತ್ತಿಕೊಳ್ಳುವ ಬಹುತೇಕ ಅಸಂವಿಧಾನಿಕ ಅಸಂಸದೀಯ ಪದಪ್ರಯೋಗ ಕುಶಲನಿಗೆ ಮುಖ್ಯಮಂತ್ರಿ ಅಭ್ಯರ್ಥಿತನ ಸುಲಭವಾಗಿ ದಕ್ಕಬಹುದು, ಅದೇ ಅರ್ಹತೆಯೂ ಆಗಬಹುದು. ಪ್ರಜಾವಾಣಿಯಲ್ಲಿ ಇತ್ತೀಚೆಗೆ ಈ ಕುರಿತು ಸುದ್ದಿ ಬಂದಾಗ ನಿಜಕ್ಕೂ ಆತಂಕವಾಯಿತು. ಈಗಂತೂ ಜಿಲ್ಲೆಯ 6 ಕ್ಷೇತ್ರ ಮತ್ತು ಬೆಳಗಾವಿಗೆ ಸೇರಿದ ಕೆನರಾ ಕ್ಷೇತ್ರದ 2 ಶಾಸಕ ಸ್ಥಾನ ತಾವೇ ಗೆಲ್ಲುತ್ತೇವೆಂಬ ಅಹಂಕಾರದಲ್ಲಿದ್ದಾರೆ.

ಟಿಪ್ಪು ಜಯಂತಿಗೆ ಧಮಕಿ

ಜಿಲ್ಲೆಯ ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಥಮ ಹುತಾತ್ಮ ಟಿಪ್ಪುವನ್ನು ಅವಮಾನಿಸಿ ಧರ್ಮಾಂಧನೆಂದು ಹೇಳಿ ಸಮಾರಂಭಕ್ಕೆ ಧಮಕಿ ಹಾಕಿರುವುದು ಮತ್ತು ಶಾಂತಿ ಸೌಹಾರ್ದತೆಯನ್ನು ಕೆಡವಲು ತನ್ನ ಉದ್ರೇಕಕಾರಿ ಮಾತಿನ ಮೂಲಕ ಸಂವಿಧಾನ ಉಲ್ಲಂಘಿಸಿದ್ದಾರೆ. ತನ್ನ ಸಚಿವ ಸ್ಥಾನದ ಗಂಭೀರತೆಯನ್ನು ಮರೆತು ಓರ್ವ ಧಾರ್ಮಿಕ ವಕ್ತಾರರಂತೆ ಮಾತನಾಡಿದ್ದಾರೆ. ಜೊತೆಗೆ ರಾಜ್ಯದ ಬಿಜೆಪಿ ನಾಯಕರು ಸರದಿಯಂತೆ ಉದ್ರೇಕಕಾರಿ ಹೇಳಿಕೆ ಕೊಟ್ಟು ಜನತೆಯ ಸೌಹಾರ್ದತೆಯನ್ನು ಮುರಿಯುವ ಪ್ರಯತ್ನ ಮಾಡುತ್ತಿದ್ದಾರೆ. ಟಿಪ್ಪು ಜಯಂತಿಗೆ ಧಿಕ್ಕಾರ ಕೂಗುವ ನಮ್ಮ ಉತ್ತರ ಕನ್ನಡ ಜಿಲ್ಲೆಯ ಕೇಂದ್ರ ಮಂತ್ರಿ ಅನಂತಕುಮಾರ್ ಹೆಗಡೆಯವರು ಬಳಸಿದ ಧಮಕಿ ಹಾಕುವ ಮಾತು "ತಾಕತ್ತಿದ್ದರೆ" ಎನ್ನುವ ಶಬ್ದದಿಂದಲೇ ತಿಳಿಯುತ್ತದೆ ಇವರಿಗೆ ಇನ್ನೊಂದು ವಿಚಾರವನ್ನಾಗಲಿ ಭಾರತದ ಬಹುಸಂಸ್ಕೃತಿಯ ಆಚರಣೆಗಳನ್ನಾಗಲಿ ಸಹಿಸುವ ಗೌರವಿಸುವ ಮನೋಭಾವ ಇಲ್ಲದ ಧರ್ಮಾಂಧ ಪ್ರತಿಕ್ರಿಯೆ ಎಂಬುದು ಸಾಬೀತು ಆಗುತ್ತದೆ. ●

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಕೊಪ್ಪಳ : ನವೆಂಬರ್ 11–12, ಕೊಪ್ಪಳ.
ಬೀದರ್ : ನವೆಂವರ್ 18–19 ಹುಮನ್ನಾಬಾದ್.
ಶಿವಮೊಗ್ಗ : ನವೆಂಬರ್ 19, ಭದ್ರಾವತಿ.
ಬೆಂಗಳೂರು ಉತ್ತರ : ನವೆಂಬರ್ 24–25, ಬೆಂಗಳೂರು.
ಧಾರವಾಡ : ನವೆಂಬರ್ 25–26, ಗಜೇಂದ್ರಗಢ
ಕೊಡಗು : ನವೆಂಬರ್ 26–27, ಸಿದ್ಧಾಪುರ.
ಬಿಜಾಪುರ : ಡಿಸೆಂಬರ್ 2–3 ಬಿಜಾಪುರ.
ಬೆಂಗಳೂರು ಗ್ರಾಮಾಂತರ : ಡಿಸೆಂಬರ್ 3, ನೆಲಮಂಗಲ.
ಗುಲ್ಬರ್ಗಾ: ಡಿಸೆಂಬರ್ 3–5, ಕಮಲಾಪುರ.
ಬಳ್ಳಾರಿ: ಡಿಸೆಂಬರ್ 9–10, ಕಂಪ್ಲಿ.
ತುಮಕೂರು : ಡಿಸೆಂಬರ್ 9–10 ತುಮಕೂರು.
ಹಾಸನ : ಡಿಸೆಂಬರ್ 9–10, ಸಕಲೇಶಪುರ.
ಚಿಕ್ಕಬಳ್ಳಾಪುರ : ಡಿಸೆಂಬರ್ 13–14, ಗುಡಿಬಂಡೆ.
ಬೆಂಗಳೂರು ದಕ್ಷಿಣ : ಡಿಸೆಂಬರ್ 15–17, ಬೆಂಗಳೂರು.
ಮೈಸೂರು : ಡಿಸೆಂಬರ್ 16–17, ಹುಣಸೂರು
ದಕ್ಷಿಣ ಕನ್ನಡ : ಡಿಸೆಂಬರ್ 17–18, ಮಂಗಳೂರು.
ಉತ್ತರ ಕನ್ನಡ : ಡಿಸೆಂಬರ್ 17–18, ದಾಂಡೇಲಿ.
ಕೋಲಾರ : ಡಿಸೆಂಬರ್ 22–23, ಕೋಲಾರ.
ರಾಯಚೂರು : ಡಿಸೆಂಬರ್ 23–24, ರಾಯಚೂರು.
ದಾವಣಗೆರೆ : ಡಿಸೆಂಬರ್ 24–25, ದಾವಣಗೆರೆ.
ಉಡುಪಿ : ಡಿಸೆಂಬರ್ 24–26, ಬೈಂದೂರು.

ಇನ್ನೊಬ್ಬ ಸುಪುತ್ರನೂ,'ಉತ್ತಮ ಆಳ್ವಿಕೆ'ಯ ನಿಜ ಹೂರಣದ ಇನ್ನೊಂದು ಆಯಾಮವೂ

ಆಳುವ ಪಕ್ಷದ ಅಧ್ಯಕ್ಷರ ಸುಪುತ್ರನ ನಂತರ ಈಗ ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ)ರ ಸುಪುತ್ರನ ಶೌರ್ಯ ಚಟುವಟಿಕೆಗಳು. ವೆಬ್‌ಪತ್ರಿಕೆ 'ದಿ ವೈರ್' ಬೆಳಕಿಗೆ ತಂದಿರುವ ಈ ಅಂಶಗಳು ಅಚ್ಛೇ ದಿನ್‌ಗಳ 'ಉತ್ತಮ ಆಳ್ವಿಕೆ'ಯ ಮತ್ತೊಂದು ಮುಖವನ್ನು ಅನಾವರಣಗೊಳಿಸಿವೆ. ಇದರ ಸಾರಾಂಶವನ್ನು ಪೆರಿ ಮಹೇಶ್ವರ್ ಎಂಬವರು ತಮ್ಮ ಫೇಸ್‌ಬುಕ್‌ನಲ್ಲಿ ಈ ಹತ್ತು ಪ್ರಶ್ನೆಗಳ ಮೂಲಕ ಕೊಟ್ಟಿದ್ದಾರೆ–ಅದನ್ನು ತುಸು ಪರಿಷ್ಕರಿಸಿ ಹೀಗೆ ಹೇಳಬಹುದು:

* 'ತೀವ್ರಗಾಮಿ ಇಸ್ಲಾಂ' 'ಬಲವಂತದ ಮತಾಂತರ ಇತ್ಯಾದಿಗಳ ಬಗ್ಗೆ ವರದಿಗಳನ್ನು ತಯಾರಿಸಿದ ಇಂಡಿಯ ಫೌಂಡೇಶನ್ ಸೌದಿ ಅರೇಬಿಯಾದ ರಾಜಕುಟುಂಬದ ಸದಸ್ಯರೊಬ್ಬರು ಅಧ್ಯಕ್ಷರಾಗಿರುವ ಗ್ಲೋಬಲ್ ಫೈನಾನ್ಶಿಯಲ್ ಸರ್ವಿಸಸ್‌ನ ಭಾರತೀಯ ವ್ಯವಹಾರಗಳ ನಿರ್ವಹಣೆಯ ಮೂಲಕ ಭಾಗೀದಾರಿಕೆ ಹೊಂದಿದ್ದರೇನಂತೆ?
* ನಿರ್ದೇಶಕ ಮಂಡಳಿಯಲ್ಲಿ ನಾಲ್ಕು ಕೇಂದ್ರ ಮಂತ್ರಿಗಳು ಮತ್ತು ಆಳುವ ಪಕ್ಷದ ಶಕ್ತಿಶಾಲಿ ಕಾರ್ಯದರ್ಶಿ ಇದ್ದರೇನಂತೆ?
* ಇದು ನಡೆಸಿದ ಹಲವಾರು ವಿಚಾರ ಸಂಕಿರಣಗಳು ಭಾರತೀಯ ರಾಜ–ಕಾರಣ, ಆಡಳಿತ, ರಕ್ಷಣೆ, ಸೇನೆ, ಟೆಲಿಕಾಂ, ಹಡಗುಯಾನ, ಹೆದ್ದಾರಿಗಳು ಮಾತ್ರವಲ್ಲ, ಗೃಹ ಮಂತ್ರಾಲಯದ ಘಟಾನುಘಟಿಗಳೊಂದಿಗೆ ಮುಖಾಮುಖಿಯಾಗಿಸುವ ಆಶ್ವಾಸನೆ ಕೊಡುತ್ತಿದ್ದರೇನಂತೆ?
* ನಾಗರಿಕ ವಿಮಾನಯಾನ ಮಂತ್ರಿಗಳು ಒಬ್ಬ ನಿರ್ದೇಶಕರಾಗಿರುವ ಫೌಂಡೇಶನ್‌ನ ವಿಚಾರ ಸಂಕಿರಣವನ್ನು'ವಿಮಾನ ತಯಾರಿಕಾ ಕಂಪನಿ ಬೋಯಿಂಗ್ ಪ್ರಾಯೋಜಿಸಿದರೇನಂತೆ?
* ವಾಣಿಜ್ಯ ಮಂತ್ರಿಗಳು ನಿರ್ದೇಶಕರಾಗಿರುವ ಈ ಫೌಂಡೇಶನ್ ವಿದೇಶಿ ಬ್ಯಾಂಕ್ ಡಿಬಿಎಸ್ ಪ್ರಾಯೋಜಿಸುವ ವಿಚಾರ ಸಂಕಿರಣವನ್ನು ನಡೆಸಿದರೇನಂತೆ?
* ರಕ್ಷಣಾ ಮಂತ್ರಿಗಳು ಒಬ್ಬ ನಿರ್ದೇಶಕರಾಗಿರುವ ಒಂದು ಫೌಂಡೇಶನ್‌ಗೆ ಇಸ್ರೇಲಿ ಕಂಪನಿ ಮಗಲ್ ಪ್ರಾಯೋಜಕರಾಗಿದ್ದರೇನಂತೆ?
* ಬೋಯಿಂಗ್ ಕಂಪನಿ ಸಿಬಿಐ ತನಿಖೆಗೊಳಪಟ್ಟಿದೆ ನಿಜ, ಆದರೇನಂತೆ? ಅವರಿಂದ ನಾಗರಿಕ ವಿಮಾನಯಾನ ಮಂತ್ರಿಗಳು ನಿರ್ದೇಶಕರಾಗಿರುವ ಈ ಫೌಂಡೇಶನ್ ಪ್ರಾಯೋಜಕತ್ವ ಕೇಳಿದರೇನಂತೆ?
* ಈ ಫೌಂಡೇಶನ್ ನಮ್ಮ ಸರಕಾರದ ಧೋರಣೆಗಳನ್ನು ರೂಪಿಸುವ ಹಲವು ಅಂಶಗಳಲ್ಲಿ ಆಳುವ ಪಕ್ಷ ಮತ್ತು ಸರಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದರೇನಂತೆ?
* ಈ ಫೌಂಡೇಶನ್ನಿನ ಹಣಕಾಸು ವ್ಯವಹಾರಗಳು, ಆದಾಯದ ಮೂಲಗಳು ಅಪಾರದರ್ಶಕವಾಗಿದ್ದು ಹಿತಾಸಕ್ತಿಗಳ ತಾಕಲಾಟದ ವಾಸನೆ ಹೊಡಯುತ್ತಿದ್ದರೇನಂತೆ?
* ಈ ಫೌಂಡೇಶನ್ ವಿದೇಶಿ ವಂತಿಗೆಗಳನ್ನು ಪಡೆಯಲು ಎಫ್‌ಸಿಆರ್‌ಎ ಅನುಮತಿ ಪಡೆದಿದೆ ತಾನೇ? ಪಡೆದಿದ್ದರೂ ಕಳೆದ 4 ವರ್ಷಗಳಿಂದ ನಿಯಮಗಳ ಪ್ರಕಾರ ಸಲ್ಲಿಸಬೇಕಾದ ಎಫ್‌ಸಿಆರ್‌ಎ ರಿಟರ್ನ್‌ಗಳನ್ನು ಸಲ್ಲಿಸದಿದ್ದರೇನಂತೆ?

ಇಲ್ಲಿ ಮುಚ್ಚುಮರೆ, ಭ್ರಷ್ಟಾಚಾರ ಮತ್ತು ಚಮಚಾ ಬಂಡವಾಳಶಾಹಿಯ ವಾಸನೆ ಹೊಡೆಯುತ್ತಿದ್ದರೆ ಖಂಡಿತ ನೀವು ಪ್ರಧಾನಿಗಳ ಬಗ್ಗೆ ಅಸೂಯೆ ಹೊಂದಿರುವವರು ಎನ್ನ ಬಹುದಲ್ಲವೇ?

ಶೌರ್ಯ ದೊವಲ್ ಅವರು 'ದಿ ವೈರ್' ಪತ್ರಿಕೆ ಕೇಳಿರುವ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳು ಪರಿಸ್ಥಿತಿಯನ್ನು ಸ್ಪಷ್ಟೀಕರಿಸುವ ಬದಲು ಇನ್ನಷ್ಟು ಪಶ್ನೆಗಳನ್ನೆಬ್ಬಿಸಿವೆ, ಎಫ್‌ಸಿಆರ್‌ಎ ಸರ್ಟಿಫಿಕೇಟ್ ಪಡೆದಿದ್ದರೂ ಆ ಪ್ರಾಯೋಜಕರಾರೂ ಏನೂ ಹಣ ತೆತ್ತೇ ಇಲ್ಲ ಎಂಬುದನ್ನು ನಂಬಬೇಕೇ? –ಇದು ವೈರ್ ಪತ್ರಿಕೆಯ ಪ್ರಶ್ನೆ.

ಇಂತಹ ಉತ್ತರ ಸಿಗದ ಪ್ರಶ್ನೆಗಳು ಹಲವು. ಈ ನಾಲ್ಕು ಮಂತ್ರಿಗಳು ಮಂತ್ರಿಗಳಾಗುವ ಮೊದಲೇ ನಿರ್ದೇಶಕರಾಗಿದ್ದವರಂತೆ. ಹಾಗಿದ್ದರೆ ಮಂತ್ರಿಗಳಾದ ಮೇಲೂ ಮುಂದುವರೆಯುತ್ತಿದ್ದಾರೇಕೆ ಎಂಬ ಪ್ರಶ್ನೆಯೂ ಅದರಲ್ಲಿ ಸೇರಿದೆ. ಇನ್ನೂ ಹಲವು ಪ್ರಶ್ನೆಗಳಿವೆ. ಬಹುಶಃ, ಸೀತಾರಾಮ್ ಯೆಚುರಿಯವರು ಹೇಳಿರುವಂತೆ, ಒಂದು ಅಮೂಲಾಗ್ರ ತನಿಖೆಯೇ ರಕ್ಷಣಾ ವಲಯದ ಕಂಪನಿಗಳೂ ಸೇರಿದಂತೆ ವಿದೇಶಿ ಕಂಪನಿಗಳು, ಸೌದಿ ಕನೆಕ್ಷನ್, ಎನ್‌ಎಸ್‌ಎ ಪುತ್ರ, ಬಿಜೆಪಿ ಮುಖಂಡರು, 4 ಮಂತ್ರಿಗಳು ಇವೆಲ್ಲವುಗಳ ನಡುವಿನ ಸಂಬಂಧಗಳೇನು ಎಂದು ಬಯಲಿಗೆ ಬರಲು ಸಾಧ್ಯ. ಆದರೆ ನಯಾಭಾರತ್ ನಿರ್ಮಾಣಕ್ಕೆ ಹೊರಟಿರುವ ಪ್ರಧಾನಿಗಳು ಇಂತಹ ತನಿಖೆ ನಡೆಸುತ್ತಾರೆಯೇ ಎಂಬದು ಎಲ್ಲಕ್ಕೂ ದೊಡ್ಡ ಪ್ರಶ್ನೆ.

ನಯಾಭಾರತ್‌ನತ್ತ



ನಾಲ್ಕು ತಿಂಗಳಲ್ಲಿ 15 ಲಕ್ಷ ಉದ್ಯೋಗಗಳ ಕಡಿತ

2017ರ ಮೊದಲ ನಾಲ್ಕು ತಿಂಗಳಲ್ಲಿ ಉದ್ಯೋಗಗಳ ಸಂಖ್ಯೆಯಲ್ಲಿ 15 ಲಕ್ಷ ಕಡಿತವಾಗಿದೆ ಎಂದು ಭಾರತೀಯ ಆರ್ಥಿಕ ನಿಗಾ ಕೇಂದ್ರ (ಸಿಎಂಐಇ) ಲೆಕ್ಕ ಹಾಕಿದೆ. ಅದರ ಪ್ರಕಾರ ಸಪ್ಟಂಬರ್–ಡಿಸೆಂಬರ್‌ನಲ್ಲಿ 40.65 ಕೋಟಿ ಇದ್ದದ್ದು ಈ ಅವಧಿಯಲ್ಲಿ 40.5 ಕೋಟಿಗೆ ಇಳಿದಿದೆ. ಈ ಅವಧಿಯಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 97ಲಕ್ಷದಷ್ಟು ಹೆಚ್ಚಿತು.

ಅಂದರೆ ಉದ್ಯೋಗಗಳಲ್ಲಿ ಭಾಗವಹಿಸುತ್ತಿರುವವರ ಪ್ರಮಾಣ ಇಳಿಯುತ್ತಿದೆ, ಇದು ಹೊಸ ಹೂಡಿಕೆಗಳು ಇಳಿಮುಖವಾಗುತ್ತಿರುವ, ಆಮೂಲಕ ಆರ್ಥಿಕ ಗತಿ ನಿಧಾನಗೊಳ್ಳುತ್ತಿರುವವುದರ ಲಕ್ಷಣ ಎಂದು ಸಿಎಂಐಇ ಹೇಳಿದೆ.

ಈ ನಿಧಾನಗತಿ ಯುವ ಕಾರ್ಮಿಕರನ್ನೇ ಹೆಚ್ಚಾಗಿ ಬಾಧಿಸುತ್ತಿದೆ, ಈ ಅವಧಿಯಲ್ಲಿ ಉದ್ಯೋಗನಷ್ಟ ಯುವ ವರಸ್ಸಿನವರ ನಡುವೆಯೇ ಹೆಚ್ಚು ಎಂದೂ ಅದು ಹೇಳಿದೆ.

ಹೊಸ ಎಂಬಿಎ ಪದವೀಧರರಲ್ಲಿ 2016–17ರಲ್ಲಿ ಕೇವಲ 47% ಯುವಜನರಿಗೆ ಉದ್ಯೋಗ ದೊರೆತಿದೆ ಎಂದು ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ 4% ಇಳಿಕೆ–ಇದು ಕಳೆದ ಐದು ವರ್ಷಗಳಲ್ಲೇ ಅತಿ ಕೆಳಗಿನ ಮಟ್ಟ ಎನ್ನಲಾಗಿದೆ.

ಸ್ನಾತಕೋತ್ತರ ಬಿಸಿನೆಸ್ ಡಿಪ್ಲೊಮಾ ಪಡೆದವರಲ್ಲೂ ಉದ್ಯೋಗ ಪಡೆದವರ ಪ್ರಮಾಣದಲ್ಲಿ 12% ಇಳಿಕೆಯಾಗಿದೆ, 72%ದಿಂದ 60% ಕ್ಕೆ. ಇದು ಕೂಡ ಕಳೆದ ಐದು ವರ್ಷಗಳಲ್ಲಿ ಅತೀ ಕೆಳಗಿನ ಮಟ್ಟ.

ಇದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಡಿಯಲ್ಲಿ ಬರುವ ಸುಮಾರು 5000 ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಗಳ ಅಂಕಿ–ಅಂಶಗಳು. ಪ್ರತಿಷ್ಠಿತ ಐಐಎಂಗಳು ಈ ಮಂಡಳಿಯ ಅಡಿಗೆ ಬರುವುದಿಲ್ಲ.

ಮತ್ತೊಂದು ಜಾಗತಿಕ ಸೂಚ್ಯಂಕ–ಲಿಂಗ ಅಂತರದ ಪ್ರಮಾಣ 'ಚಾರಿತ್ರಿಕ ನೆಗೆತ'ದ ನಂತರ ಮತ್ತದೇ ಇಳಿಕೆಯ ಹೊಡೆತ

ನವಂಬರ್ 3ರಂದು ಇನ್ನೊಂದು ಜಾಗತಿಕ ಸಂಘಟನೆ 'ವಿಶ್ವ ಆರ್ಥಿಕ ವೇದಿಕೆ'(ಡಬ್ಲ್ಯುಇಎಫ್) ಈ ವರ್ಷದ ಲಿಂಗ ಅಂತರ ಸೂಚ್ಯಂಕವನ್ನು ಪ್ರಕಟಿಸಿದೆ. ಇದು ಮತ್ತೆ ಇಳಿಕೆಯ ಜಾಡನ್ನೇ ಮುಂದುವರೆಸಿದೆ. 144 ದೇಶಗಳಲ್ಲಿ ಭಾರತದ ಶ್ರೇಯಾಂಕ 108. ಕಳೆದ ವರ್ಷ ಇದು 87 ಇತ್ತು. ಅಂದರೆ 21 ಸ್ಥಾನಗಳ ಪತನ! 2006ರಲ್ಲಿ ಡಬ್ಲ್ಯುಇಎಫ್ ಈ ಸೂಚ್ಯಂಕವನ್ನು ಆರಂಭಿಸಿದಾಗ ಭಾರತ 98ನೇ ಸ್ಥಾನ ಪಡೆದಿತ್ತು. ಕ್ರಮೇಣ ಅದು ಉತ್ತಮಗೊಳ್ಳುತ್ತ ಬಂದಿತ್ತು. ಈಗ ಮತ್ತೆ ಕುಸಿದಿದೆ.

ಆದರೆ ಕಳೆದ ವಾರ ವಿಶ್ವ ಬ್ಯಾಂಕಿನಿಂದ ಮೊದಲಿಗಿಂತ ಎಷ್ಟೊ ಹೆಚ್ಚು ಉದ್ಯಮ ಸ್ನೇಹಿ 30 ಸ್ಥಾನಗಳ ನೆಗೆತ ಎಂಬ ಸರ್ಟಿಫಿಕೇಟ್‌ನಿಂದ ಹಿರಿಹಿರಿ ಹಿಗ್ಗುತ್ತಿರುವ ಮಂದಿಗೆ ಇದರಿಂದ ಕಳವಳವಾಗಿದೆಯೋ ಗೊತ್ತಿಲ್ಲ. ಎಂದಿನಂತೆ ಈ ಬಗ್ಗೆ ಮತ್ತೆ ವಾಚಾಳಿಗಳ ದಿವ್ಯಮೌನ. ಆರ್ಥಿಕ ಸಬಲೀಕರಣ ಮತ್ತು ಕಡಿಮೆ ಸಂಬಳಗಳು ಈ ಹೀನ ಶ್ರೇಯಾಂಕಕ್ಕೆ ಮುಖ್ಯ ಕಾರಣ ಎನ್ನಲಾಗಿದೆ. ಮಹಿಳೆಯ 'ಪಾರಂಪರಿಕ ಪಾತ್ರ'ದ ಬಗ್ಗೆ ಹೆಚ್ಚಿನ ಒತ್ತು ನೀಡುತ್ತಿರುವವರಿಗೆ ಇದರಿಂದೇನೂ ಆತಂಕವಾಗಲಿಕ್ಕಿಲ್ಲ ಕೂಡ.

ಇದಕ್ಕೆ ಮೊದಲು ಯುನೆಸ್ಕೋದ ಜಾಗತಿಕ ಶಿಕ್ಷಣ ಉಸ್ತುವಾರಿ ವರದಿ ಕೂಡ ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ, ಅದರಲ್ಲೂ ಉನ್ನತ ಶಿಕ್ಷಣದಲ್ಲಿ ಅಸಮಾನತೆ ಹೆಚ್ಚುತ್ತಿದೆ ಎಂದಿತ್ತು. 'ಶುದ್ಧ ಭಾರತೀಯ ಶಿಕ್ಷಣ'ದ ಬಗ್ಗೆ ಭಾರೀ ಗದ್ದಲವೆಬ್ಬಿಸುವ ಮಂದಿಗೂ ಇದರಿಂದ ಕಳವಳವಾದಂತಿಲ್ಲ.

ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್



'ಶುದ್ಧೀಕರಣ ಯಜ್ಞ' ಯಾನೆ 'ಅಚ್ಛೇ ದಿನ್' ವಾಶಿಂಗ್ ಮೆಶೀನ್

ಅಚ್ಛೇದಿನ್ ತರುವ ಹಾದಿಯಲ್ಲಿ ಕೈಗೊಂಡ "ಶುದ್ಧೀಕರಣ ಯಜ್ಞ"ದ ಮೊದಲ ವಾರ್ಷಿಕೋತ್ಸವವನ್ನು ಆಚರಿಸುವ ವೇಳೆಗೆ, ಈ ಹಿಂದೆ ಇವರಿಂದಲೇ 'ಕಳಂಕಿತ'ರೆಂದು ಬಿರುದಾಂಕಿತರಾಗಿದ್ದ ಬೇರೆ ಪಕ್ಷಗಳ ಹಲವು ಮುಖಂಡರು ಆಳುವ ಪಕ್ಷ ಸೇರಿದ್ದಾರೆ–ಬಹುಶಃ ಕಪ್ಪು ಹಣವನ್ನು ತೊಳೆದು ಶುಭ್ರಗೊಳಿಸುವುದರ ಭಾಗವಾಗಿಯೇ.

* ಇದರಲ್ಲಿ ತೀರಾ ಇತ್ತೀಚಿನವರೆಂದರೆ ಪಶ್ಚಿಮ ಬಂಗಾಲದ ಟಿಎಂಸಿ ಪಕ್ಷದ ಒಬ್ಬ ಪ್ರಮುಖ ಸ್ಥಾಪಕ ಮುಖಂಡರಾದ ಮುಕುಲ್ ರಾಯ್. ಜನವರಿ 2015 ರಲ್ಲಿ ಇವರಿಗೆ ಸಿಬಿಐ ಸಾರಧಾ ಚಿಟ್‌ಫಂಡ್ ಹಗರಣದಲ್ಲಿ ಸಮನ್ಸ್ ಕಳಿಸಿ ವಿಚಾರಣೆಗೊಳಪಡಿಸಿತ್ತು.

2014ರಲ್ಲಿ ನಾರದ ಕುಟುಕು ಕಾರ್ಯಾಚರಣೆಯಲ್ಲಿ ಲಂಚ ಸ್ವೀಕರಿಸುವ ವೀಡಿಯೋದಲ್ಲಿ ಕಾಣಿಸಿಕೊಂಡಿರುವ 12 ಟಿಎಂಸಿ ಮುಖಂಡರಲ್ಲಿ ಇವರು ಪ್ರಮುಖರು. ಈ ವಿಷಯದಲ್ಲಿ ಸಪ್ಟಂಬರ್ 2017ರಲ್ಲಿ ಇವರು ಸಿಬಿಐ ತನಿಖೆ ಎದರಿಸಬೇಕಾಯ್ತು. ಅಕ್ಟೋಬರ್ 30ರಂದು ಜಾರಿ ನಿರ್ದೇಶನಾಲಯದ ಸಮನ್ಸ್ ಕೂಡ ಬಂದಿದೆ. ಈ ನಡುವೆ ಇವರು ತಮ್ಮ ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ 'ಶುದ್ಧೀಕರಣ' ಹೊಂದಿದ್ದರು. ನವಂಬರ್ 3ರಂದು ಬಿಜೆಪಿ ಸೇರಿದರು.

* ಇದಕ್ಕೆ ಮೊದಲು, ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗೆ ಸಿದ್ಧತೆಯ ಪ್ರಕ್ರಿಯೆಯಲ್ಲಿ ಅಕ್ಟೋಬರ್ 15ರಂದು ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿಯಾಗಿದ್ದ ಅನಿಲ್ ಶರ್ಮ ಬಿಜೆಪಿ ಸೇರಿದರು. ಇವರು ಮೊದಲ ಟೆಲಿಕಾಂ ಹಗರಣದಲ್ಲಿ ವಿಚಾರಣೆಗೆ ಒಳಗಾಗಿರುವ ಮಾಜಿ ಕೇಂದ್ರ ಕಾಂಗ್ರೆಸ್ ಮಂತ್ರಿ ಪಂಡಿತ್ ಸುಖರಾಂ ಅವರ ಸುಪುತ್ರ, ಅವರ ಪ್ರಭಾವದ ಕ್ಷೇತ್ರದಿಂದಲೇ ಅವರು ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಇವರೂ ಮಂತ್ರಿಪದವಿ 'ತ್ಯಾಗ' ಮಾಡಿ ಶುದ್ಧೀಕರಣಗೊಂಡವರು ತಾನೇ?

* ಅಸ್ಸಾಂನ ಒಬ್ಬ ಪ್ರಮುಖ ಕಾಂಗ್ರೆಸ್ ಮುಖಂಡರೂ ಮಂತ್ರಿಗಳೂ ಆಗಿದ್ದ ಹೇಮಂತ ಬಿಸ್ವ ಸರ್ಮ ಆಗಸ್ಟ್ 2015ರಲ್ಲಿ ಬಿಜೆಪಿ ಸೇರಿದರು. ಈಗ ಅವರು ಅಸ್ಸಾಂನ ಮೊದಲ ಬಿಜೆಪಿ ಸರಕಾರದಲ್ಲಿ ಆರೋಗ್ಯಮಂತ್ರಿಗಳಾಗಿದ್ದಾರೆ. ಅವರು ಬಿಜೆಪಿ ಸೇರುವ ಒಂದು ತಿಂಗಳ ಹಿಂದೆಯಷ್ಟೇ 2010ರಲ್ಲಿ ಬೆಳಕಿಗೆ ಬಂದ ಗುವಾಹಾಟಿ ಜಲ ಹಗರಣದಲ್ಲಿ ಪ್ರಮುಖ ಶಂಕಿತರು ಎಂದು ಸ್ವತಃ ಬಿಜೆಪಿ ಆಪಾದಿಸಿತ್ತು. ಈಗ ಆ ಆಪಾದನೆ/ಹಗರಣ ಕತ್ತಲೆಗೆ ಸಂದಿರುವಂತಿದೆ. ಅಸ್ಸಾಂನಲ್ಲಿ ಮಾತ್ರವಲ್ಲ ಸಮಸ್ತ ಈಶಾನ್ಯ ಭಾರತದಲ್ಲಿ ಬಿಜೆಪಿಯ ಪ್ರಭಾವ ಹಬ್ಬಿಸಲು ನೆರವಾದುದೇ ಅವರ 'ಶುದ್ಧೀಕರಣ' ಮಂತ್ರ.

* ಅರುಣಾಚಲ ಪ್ರದೇಶದಲ್ಲಿ ಒಂದು ವರ್ಷದ ರಾಜಕೀಯ ಅಸ್ಥಿರತೆಯ ನಂತರ ಪೇಮ ಕುಂಡು 32 ಪಿಪಿಎ ಶಾಸಕರೊಂದಿಗೆ ಬಿಜೆಪಿ ಸೇರಿ ಡಿಸೆಂಬರ್ 2016ರಲ್ಲಿ ಪೂರ್ಣ ಪ್ರಮಾಣದ ಬಿಜೆಪಿ ಸರಕಾರ ಅಲ್ಲಿ ರಚನೆಗೊಳ್ಳಲು ನೆರವಾದರು. ಆಗ ಕುಂಡು "ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಪಿತೂರಿ'ಯ ಆಪಾದನೆಗಳನ್ನು ಎದುರಿಸುತ್ತಿದ್ದರು ಎಂಬುದು ನಂತರ ಆತ್ಮಹತ್ಯೆ ಮಾಡಿಕೊಂಡ ಮಾಜಿ ಮುಖ್ಯಮಂತ್ರಿ ಕಲಿಖೊ ಪುಲ್ ರವರ ಆತ್ಮಹತ್ಯಾ ಪತ್ರದಿಂದ ಗೊತ್ತಾಗಿದೆಯಂತೆ. ಈ ಪತ್ರದ ಬಗ್ಗೆ ತನಿಖೆ ನಡೆದಿಲ್ಲ.

* ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ನಾರಾಯಣ ರಾಣೆ ಶಿವಸೇನೆ ಮುಖಂಡರಾಗಿದ್ದು, ಆರು ತಿಂಗಳ ಕಾಲ ಮುಖ್ಯಮಂತ್ರಿಯೂ ಆಗಿದ್ದು, ನಂತರ 2005ರಲ್ಲಿ ಕಾಂಗ್ರೆಸ್ ಸೇರಿ 2017ರಲ್ಲಿ ಅದನ್ನೂ ಬಿಟ್ಟು ಎರಡು ತಿಂಗಳ ಹಿಂದೆ ತನ್ನದೇ ಎಂಎಸ್‌ಪಿ(ಮಹಾರಾಷ್ಟ್ರ ಸ್ವಾಭಿಮಾನ್ ಪಕ್ಷ) ಸ್ಥಾಪಿಸಿ ಈಗ ಬಿಜೆಪಿ ಸೇರಲಿದ್ದಾರೆ ಎಂಬ ಸುದ್ದಿ ದಟ್ಟವಾಗಿ ಹರಡಿದೆ. ಈ ನಡುವೆ ವಿವಿಧ ಮಂತ್ರಿ ಹುದ್ದೆಗಳಲ್ಲಿದ್ದು ವಿವಿಧ ಹಗರಣಗಳಲ್ಲಿ ಸಿಲುಕಿಕೊಂಡಿರುವವರು. ಕಪ್ಪು ಹಣವನ್ನು ಶುಭ್ರಗೊಳಿಸುವ, ಕೈಗಾರಿಕಾ ಇಲಾಖೆಯ ಜಮೀನು ಡಿನೋಟಿಫಿಕೇಶನ್‌ಗಳಲ್ಲಿ ಅಕ್ರಮದ ವಿಚಾರಣೆಗಳನ್ನು ಎದುರಿಸುತ್ತಿರುವವರು. ಅಚ್ಛೇದಿನ್ ವಾಶಿಂಗ್ ಮೆಶಿನ್‌ನಲ್ಲಿ ಇವೆಲ್ಲ ತೊಳೆದು ಹೋಗುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

* ಈಗ ಸಿಬಿಐ. ಮತ್ತು ಇ.ಡಿ. ತನಿಖೆಗಳನ್ನು ಎದುರಿಸುತ್ತಿರುವ ಕರ್ನಾಟಕದ ಕಾಂಗ್ರೆಸ್ ಮಂತ್ರಿಗಳಿಗೂ 'ಶುದ್ಧೀಕರಣ'ದ ಆಫರ್ ಹೋಗಿದೆ ಎನ್ನುವ ಪುಕಾರುಗಳಿವೆ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

ನೋಟು ರದ್ಧತಿಯ ಒಂದು ವರ್ಷದ ನಂತರದ ಚಿತ್ರ: ಮೋದಿ ಸರಕಾರದ ಧೋರಣೆಗಳ ಅಪಾರ ಅನಾಹುತ



ಒಂದೆಡೆ ನೋಟುರದ್ದತಿ ಪ್ರಕಟಿತ ಗುರಿಗಳನ್ನು ಸಾಧಿಸುವಲ್ಲಿ ಸಂಪೂರ್ಣ ವಿಫಲವಾದರೆ, ಇನ್ನೊಂದೆಡೆಯಲ್ಲಿ ದೇಶದ 85% ಜನಕ್ಕೆ ಉದ್ಯೋಗ ಕೊಡುತ್ತಿರುವ, ದೇಶದ 45% ಜಿಡಿಪಿಯನ್ನು ಉತ್ಪಾದಿಸುತ್ತಿರುವ ಪುಟ್ಟ ಉತ್ಪಾದನೆ ಮತ್ತು ಪುಟ್ಟ ವ್ಯಾಪಾರ(ಅನೌಪಚಾರಿಕ) ವಲಯಕ್ಕೆ ಭಾರೀ ಹೊಡೆತ ನೀಡಿದೆ. ಕೆಲವರು ಭಾವಿಸುವಂತೆ ಇದು ತಾತ್ಕಾಲಿಕ ವಿದ್ಯಮಾನವಲ್ಲ. ಈ 'ಅನೌಪಚಾರಿಕ' ವಲಯವನ್ನು ಒಂದೆಡೆಯ;ಲ್ಲಿ ಸರಕಾರ ಮತ್ತು ಬಂಡವಾಳ ಹಿಂಡುತ್ತಿದ್ದರೆ, ಇನ್ನೊಂದೆಡೆಯಲ್ಲಿ ಬಂಡವಾಳಶಾಹಿ ವಲಯದಲ್ಲಿ ಉದ್ಯೋಗಾವಕಾಶಗಳು ಕುಂಠಿತಗೊಳ್ಳುತ್ತಿರುವುದರಿಂದ ವಾಸ್ತವವಾಗಿ ಜನಸಮೂಹಗಳ ದಾರಿದ್ರ್ಯ ಅಪಾರವಾಗಿ ಹೆಚ್ಚುತ್ತಿಧೆ.... ಮೋದಿ ಸರಕಾರದ ಧೋರಣೆಗಳು ಮಾಡಿರುವ ಈ ಅಪಾರ ಅನಾಹುವನ್ನು ಈ ಹಿನ್ನೆಲೆಯಲ್ಲಿಟ್ಟು ನೋಡಬೇಕಾಗಿದೆ.

ಪ್ರೊ. ಪ್ರಭಾತ್ ಪಟ್ನಾಯಕ್

ನರೇಂದ್ರ ಮೋದಿಯವರು ನಾಲ್ಕು ಗಂಟೆಗಳ ನೋಟೀಸು ಕೊಟ್ಟು 86% ಕರೆನ್ಸಿಗಳನ್ನು ರದ್ದು ಮಾಡಿದ ಪ್ರಕಟಣೆ ನೀಡಿ ಒಂದು ವರ್ಷ ಸಂದಿದೆ. ಆದರೆ ಅದು ಸಾಧಿಸಬೇಕೆಂದಿದ್ದ ಯಾವ ಗುರಿಗಳನ್ನು ಕೂಡ ಸಾಧಿಸಿಲ್ಲ ಎಂಬುದರಿಂದ ಆಶ್ವರ್ಯವೇನೂ ಆಗಬೇಕಾಗಿಲ್ಲ. ಪ್ರಕಟಿತ ಗುರಿಗಳ ಬದಲಿಗೆ ಅದು ಸಾಧಿಸಿದ್ದೆಂದರೆ ಸಣ್ಣ ಪುಟ್ಟ ಉತ್ಪಾದನೆ ಮತ್ತು ಸಣ್ಣ ಪುಟ್ಟ ವ್ಯಾಪಾರಕ್ಕೆ, ಅಂದರೆ ಅಧಿಕೃತ ಪದಗಳಲ್ಲಿ ಹೇಳಬೇಕಾದರೆ, 'ಅನೌಪಚಾರಿಕ ವಲಯ'ಕ್ಕೆ ಭಾರೀ ಹೊಡೆತ ನೀಡಿದ್ದು.

ಕಪ್ಪು ಹಣದ ಮೇಲೆ ದಾಳಿ ಈ ನೋಟುರದ್ಧತಿಯ ಬಹು ಪ್ರಚಾರಿತ ಗುರಿ. ಅದು ಸುಳ್ಳಾಗಿದೆ.

3.5ಲಕ್ಷ ಕೋಟಿ ರೂ.ಗಳಷ್ಟು ಕಪ್ಪು ಹಣ ಚಲಾವಣೆಯಲ್ಲಿದೆ, ಇದು ಬ್ಯಾಂಕಿಗೆ ವಾಪಾಸು ಬರುವುದಿಲ್ಲ, ಅಷ್ಟರ ಮಟ್ಟಿಗೆ ರಿಝರ್ವ್ ಬ್ಯಾಂಕ್ ಭಾದ್ಯತೆ ಕಡಿಮೆಯಾಗುತ್ತದೆ, ಅದು ಸರಕಾರಕ್ಕೆ ಬಳಕೆಗೆ ಸಿಗುತ್ತದೆ ಎನ್ನಲಾಗಿತ್ತು.

ಆದರೆ ಈಗ ಕೇವಲ 15,000 ಕೋಟಿ ರೂ. ಮಾತ್ರ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿಲ್ಲ. ಇದರಲ್ಲಿಯೂ ಬಹುಪಾಲು ಕಪ್ಪು ಹಣ ಅಲ್ಲ. ಅಂದರೆ ಕಪ್ಪು ಹಣ ಮೊದಲಿನಂತೆಯೇ ಸಮೃದ್ಧವಾಗಿದೆ.


ಈ ವಾಸ್ತವವನ್ನು ಎದರಿಸಬೇಕಾಗಿ ಬಂದ ಅರುಣ್ ಜೇಟ್ಲಿ ಒಂದು ತಿಪ್ಪರಲಾಗ ಹಾಕಿ, ಸರಕಾರದ ಉದ್ದೇಶ ಹಳೆಯ ಕರೆನ್ಸಿಗಳನ್ನು ಹೊರಗೆಳೆಯುವುದೇ ಹೊರತು ಅವನ್ನು ರದ್ದು ಮಾಡುವುದಲ್ಲ ಎನ್ನುತ್ತಿದ್ದಾರೆ. ಈ ಕುಟಿಲ ತರ್ಕವೇನೇ ಇರಲಿ, ಈ ರೀತಿ ಹಳೆಯ ಕರೆನ್ಸಿಯನ್ನು 'ಹೊರಗೆಳೆಯುವುದು' ಯಾವ ರೀತಿಯಲ್ಲಿ ಕಪ್ಪು ಆರ್ಥಿಕತೆಯನ್ನು ತಟ್ಟುತ್ತದೆ ಎಂದು ವಿವರಿಸುವುದು ಅವರಿಗಾಗಿಲ್ಲ.

ಈಗ ಬ್ಯಾಂಕಿಗೆ ಅಪಾರ ಪ್ರಮಾಣದಲ್ಲಿ ಹರಿದು ಬಂದ ಹಣದ ಪ್ರಕರಣಗಳು ತನಿಖೆಗೊಳಗಾಗಿರುವುದೇ ನೋಟು ರದ್ಧತಿಯ ಮಹಾಸಾಧನೆ ಎಂದು ಅಧಿಕೃತ ವಕ್ತಾರರು ಹೇಳುತ್ತಿದ್ದಾರೆ. ಆದರೆ ಇವು ಕಪ್ಪು ಹಣಕ್ಕೆ ಸಂಬಂಧಪಟ್ಟವುಗಳೇ ಅಲ್ಲ.. ಕಪ್ಪು ಹಣದ ಮಂದಿ ಇಂತಹ ತನಿಖೆಗೆ ಸಿಲುಕದಂತೆ ನೋಡಿಕೊಳ್ಳುವಷ್ಟು ಕುತಂತ್ರಿಗಳು. ಅಲ್ಲದೆ. ಈ ತನಿಖೆಗಳಿಗೆ ಬಹಳಷ್ಟು ಸಮಯ ತಗಲುತ್ತದೆ. ಆದ್ದರಿಂದ ಅವನ್ನು ಕಪ್ಪು ಹಣದ ಮೇಲಿನ ದಾಳಿಯೆನ್ನಲು ಸಾಧ್ಯವಿಲ್ಲ.

ಸ್ವಲ್ಪ ಸಮಯ ಇನ್ನೊಂದು ಕಪಟ ದಾವೆ ಹೂಡಲಾಯಿತು. ಅದೆಂದರೆ ನೋಟುರದ್ಧತಿಯ ನಂತರ ತೆರಿಗೆ ಪಾವತಿದಾರರ ಸಂಖ್ಯೆ ಹೆಚ್ಚಿದೆ ಎಂದು. ಆದರೆ ತೆರಿಗೆದಾರರ ಸಂಖ್ಯೆ ಹೆಚ್ಚುವುದು ಹೊಸ ಸಂಗತಿಯೇನಲ್ಲ. ಅದು ಸಾಮಾನ್ಯ ಪರಿಸ್ಥಿತಿಗಳಲ್ಲೂ ಆಗುತ್ತಿರುತ್ತದೆ. ಆದರೆ ವಿಶೇಷವೆಂದರೆ ಈ ಹೆಚ್ಚಳ ದರ ನೋಟುರದ್ಧತಿಯ ನಂತರ ಇಳಿಯಿತು ಎಂದು ಕಂಡು ಬಂದಿದೆ.

ಎರಡನೇ ಪ್ರಚಾರಿತ ಗುರಿ ಖೋಟಾ ನೋಟುಗಳು ಇಲ್ಲದಂತೆ ಮಾಡುವುದು. ವಾಸ್ತವವಾಗಿ ಇದು ನೋಟುರದ್ಧತಿಗೆ ಒಂದು ಅಸಂಬದ್ಧ ಸಮರ್ಥನೆ. .ಆದರೆ ಅದೂ ದಕ್ಕಿಲ್ಲ.

ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ(ಐಎಸ್‍ಐ) ಖೋಟಾನೋಟುಗಳ ಸಂಖ್ಯೆ ಒಟ್ಟು ಕರೆನ್ಸಿಯಲ್ಲಿ ಕೇವಲ 0.025% ಎಂದು ಅಂದಾಜು ಮಾಡಿದೆ. ಇಂತಹ ಅಲ್ಪ ಪ್ರಮಾಣದ ಖೋಟಾನೋಟುಗಳನ್ನು ಇಲ್ಲದಂತೆ ಮಾಡಲು 86% ಕರೆನ್ಸಿಯನ್ನು ಅಮಾನ್ಯಗೊಳಿಸುವ ಹುಚ್ಚು ಕ್ರಮದ ಅಗತ್ಯವಿದೆಯೇ? ಅದೂ ತಕ್ಷಣವೇ,



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಆಮೂಲಕ ಜನಗಳಿಗೆ ಅಪಾರ ತೊಂದರೆಗಳನ್ನು ಉಂಟು ಮಾಡುವ ಮೂಲಕ! ಕೊನೆಗೂ ಐಎಸ್‍ಐ ಅಂದಾಜು ಮಾಡಿದ 0.025% ಖೋಟಾ ನೋಟುಗಳು ಕೂಡ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬರಲಿಲ್ಲ, ಅದರ 5% ದಷ್ಟು ಮಾತ್ರ ಬಂದಿದೆ.

ನಂತರ ಎಳೆದು ತಂದ ಮೂರನೇ ಗುರಿ ನಗದುರಹಿತ ವ್ಯವಹಾರಗಳು. ಇದೊಂದು ಅನ್ಯಾಯಪೂರ್ಣ ಗುರಿಯೆಂದೇ ಹೇಳಬೇಕು. ಏಕೆಂದರೆ, ನಗದು ವ್ಯವಹಾರಕ್ಕೆ ಖರ್ಚಿಲ್ಲ, ನಗದು ರಹಿತ ವ್ಯವಹಾರಕ್ಕೆ ವೆಚ್ಚ ತೆರಬೇಕಾಗುತ್ತದೆ. ಹೀಗಿರುವಾಗ ಜನಗಳನ್ನು ಅದರತ್ತ ತಳ್ಳುವುದು ಅವರ ಖರೀದಿ ಶಕ್ತಿಯನ್ನು ಬಲವಂತದಿಂದ ಇಂತಹ ವ್ಯವಹಾರಗಳನ್ನು ನಡೆಸುವ ಹಣಕಾಸು ಕಂಪನಿಗಳಿಗೆ ವರ್ಗಾಯಿಸುವ ಕೆಲಸವಾಗುತ್ತದೆ. ಆದರೆ ಇದು ಕೂಡ ಈಡೇರಿಲ್ಲ. ಹೊಸ ನೋಟುಗಳು ಚಲಾವಣೆಗೆ ಬರುವುದರೊಂದಿಗೆ ನಗದುರಹಿತ ವ್ಯವಹಾರಗಳು ಇಳಿಮುಖವಾಗಿ ಮತ್ತೆ ಮೊದಲಿನ ಮಟ್ಟಕ್ಕೆ ಬರುತ್ತಿದೆ.

ಹೀಗೆ ಒಂದೆಡೆ ನೋಟುರದ್ಧತಿ ಪ್ರಕಟಿತ ಗುರಿಗಳನ್ನು ಸಾಧಿಸುವಲ್ಲಿ ಸಂಪೂರ್ಣ ವಿಫಲವಾದರೆ, ಇನ್ನೊಂದೆಡೆಯಲ್ಲಿ ದೇಶದ 85% ಜನಕ್ಕೆ ಉದ್ಯೋಗ ಕೊಡುತ್ತಿರುವ, ದೇಶದ 45% ಜಿಡಿಪಿ ಯನ್ನು ಉತ್ಪಾದಿಸುತ್ತಿರುವ ಪುಟ್ಟ ಉತ್ಪಾದನೆ ಮತ್ತು ಪುಟ್ಟ ವ್ಯಾಪಾರ(ಅನೌಪಚಾರಿಕ) ವಲಯದ ಮೇಲೆ ಭಾರೀ ಹೊಡೆತ ನೀಡಿದೆ. 2016–17ರ ನಾಲ್ಕನೇ ತ್ರೈಮಾಸಿಕದ ಅಂಕಿ–ಅಂಶಗಳು ಬಂದಾಗ ನೋಟುರದ್ಧತಿ ಅಂತದ್ದೇನೂ ತೊಂದರೆ ಉಂಟು ಮಾಡಿಲ್ಲ ಎಂದು ವಾದಿಸಲಾಯಿತು. ಆದರೆ 2017–18ರ ಮೊದಲ ತ್ರೈಮಾಸಿಕದ ಅಂದಾಜುಗಳು ಬಂದಾಗ ಆರ್ಥಿಕ ಸಾಕಷ್ಟು ಮಂದಗತಿಗೆ ಇಳಿದಿರುವುದು ದೃಢಪಟ್ಟಿತು.

ಆದರೆ ಇಲ್ಲಿ ಜಿಡಿಪಿ ಅಂಕಿಅಂಶಗಳು ಸರಿಯಾದ ಮಾಪಕಗಳಲ್ಲ. ದೇಶದ ಅರ್ಧದಷ್ಟು ದುಡಿಮೆಗಾರರನ್ನು ದುಡಿಸಿಕೊಳ್ಳುವ ಕೃಷಿ ವಲಯ ಜಿಡಿಪಿಗೆ ನೀಡುವುದು 15% ಮಾತ್ರ. ಕೃಷಿ ಬೆಳವಣಿಗೆ ದರದಲ್ಲಿ 1% ಇಳಿಕೆಯಾದರೆ ಅದು ಕೃಷಿಯನ್ನು ಅವಲಂಬಿಸಿರುವ ಜನಗಳ ಸರಾಸರಿ ಆದಾಯದಲ್ಲಿ 1% ಇಳಿಕೆ ತರುತ್ತದೆ. ಆದರೆ ಇದರಿಂದ ಜಿಡಿಪಿ ಬೆಳವಣಿಗೆ ದರದಲ್ಲಿ ಕೇವಲ 0.15% ಇಳಿಕೆ ಮಾತ್ರ ಕಾಣುತ್ತದೆ. ಆದ್ದರಿಂದ **ಜಿಡಿಪಿ ಬೆಳವಣಿಗೆ ದರ ಜನಸಮೂಹಗಳ ಮೇಲೆ ಇಂತಹ ಕ್ರಮಗಳ ಪರಿಣಾಮದ ಒಂದು ತಪ್ಪು ಚಿತ್ರವನ್ನು ಕೊಡುತ್ತದೆ.**

ಇಲ್ಲಿ ಇನ್ನೊಂದು ಬಹಳ ಮಹತ್ವದ ಸಂಗತಿಯಿದೆ. ರೈತರ ಸಾಲಗ್ರಸ್ತತೆ ಹೆಚ್ಚಾಗುವುದರ ಪರಿಣಾಮ ಕೂಡ ಜಿಡಿಪಿ ಬೆಳವಣಿಗೆ ದರ ಇಳಿಯದಂತೆ ಮಾಡಬಹದು. ನೋಟುರದ್ಧತಿಯಿಂದ ಆಗಿರುವುದು ಇದೇ ಸಂಗತಿ. ರೈತರಿಗೆ ನೋಟುರದ್ಧತಿಯಿಂದ ಖರೀದಿ ಶಕ್ತಿ ಇಲ್ಲವಾಗಿ ಅವರು ಕೃಷಿ ಲಾಗುವಾಡುಗಳನ್ನು ಸಾಲಕ್ಕೆ ಪಡೆದರು. ಇದು ಅವರ ಆರ್ಥಿಕ ಸಾಮರ್ಥ್ಯವನ್ನು ಕುಂದಿಸಿತು. ದೇಶದ ಹಲವೆಡೆ ನಡೆಸಿದ ಕ್ಷೇತ್ರ ಅಧ್ಯಯನಗಳು ಇದನ್ನು ಸಾಬೀತು ಪಡಿಸಿವೆ.

ಇಂತಹ ಸಾಲಗ್ರಸ್ತತೆಯಿಂದಾಗಿ **ನೋಟುರದ್ಧತಿಯ ಕೆಲವು ಟೀಕಾಕಾರರು ಇದೊಂದು ತಾತ್ಕಾಲಿಕ ಪರಿಣಾಮ ಮಾತ್ರ ಹೊಸ ನೋಟುಗಳ ಚಲಾವಣಣೆ ಹೆಚ್ಚುತ್ತಿದ್ದಂತೆ ಈ ದುಷ್ಪರಿಣಾಮ ಕಾಣೆಯಾಗುತ್ತದೆ ಎಂಬ ತರ್ಕವನ್ನು ಮುಂದೊಡ್ಡಿದ್ದಾರೆ. ಆದರೆ ಇದು ತಪ್ಪು ತರ್ಕ.** ಇದು ರೈತರು ಮತ್ತು ಪುಟ್ಟ ಉತ್ಪಾದಕರ ಮೇಲೆ ಹೆಚ್ಚಿನ ಸಾಲದ ಹೊರೆಯನ್ನು ಬಿಟ್ಟು ಹೋಗುತ್ತದೆ, ಅದು ಅವರ ಅರ್ಥವ್ಯವಸ್ತೆಯನ್ನು ಇನ್ನಷ್ಟು ಶೋಚನೀಯಗೊಳಿಸುತ್ತದೆ.

ಈ ನೋಟುರದ್ಧತಿಯೊಂದಿಗೆ ಕೆಲವು ತಿಂಗಳ ನಂತರ ಬಂದ ಜಿಎಸ್‍ಟಿ ಪುಟ್ಟ ಉತ್ಪಾದಕರ ಮೇಲೆ ಹಿಂದೆಂದಿಗಿಂತಲೂ ಹೆಚ್ಚಿನ ತೆರಿಗೆ ಹೊರಿಸಿ ಪುಟ್ಟ ಉತ್ಪಾದನೆಯನ್ನು ಬುಡಮೇಲು ಮಾಡಿದೆ. ಈ ಎರಡು ಕ್ರಮಗಳು ಆದಿಮ ಬಂಡವಾಳ ಶೇಖರಣೆ–ಯ ಪ್ರಕ್ರಿಯೆಯನ್ನು ತರುವಲ್ಲಿ ಸರಕಾರದ ಕೈಗಳಲ್ಲಿ ಅಸ್ತ್ರಗಳಾಗಿ ಬಳಕೆಯಾಗಿವೆ.

ಆದಿಮ ಬಂಡವಾಳ ಶೇಖರಣೆ ನವ–ಉದಾರವಾದದ ಒಂದು ಪ್ರಮುಖ ಲಕ್ಷಣವೇ ಆಗಿದೆ. ಅದು ಈ ಹಿಂದಿನ ನಿಯಂತ್ರಣದ ವ್ಯವಸ್ಥೆಯಲ್ಲಿ ಪುಟ್ಟ ಉತ್ಪಾದನೆಗೆ ಸಿಕ್ಕಿದ್ದ ಅಲ್ಪ–ಸ್ವಲ್ಪ ರಕ್ಷಣೆಯನ್ನೂ ಹಿಂತೆಗೆದುಕೊಂಡಿದೆ.

ಆದರೆ ಮೋದಿ ಸರಕಾರ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮತ್ತು ಕಾರ್ಪೊರೇಟ್–ಹಣಕಾಸು ಕುಳಗಳಿಗೆ ನವ–ಉದಾರವಾದದ ಈ ಪ್ರಕ್ರಿಯೆಗೆ ಅವಕಾಶ ನೀಡುವುದರಿಂದಷ್ಟೇ ಸಂತೃಪ್ತವಾಗಿಲ್ಲ. ಅದು ತಾನೇ ಮುಂದಾಗಿ ಪ್ರಭುತ್ವಯಂತ್ರವನ್ನು ಬಳಸಿ ಉದ್ದೇಶಪೂರ್ವಕವಾಗಿಯೇ ಮತ್ತು ನಿಷ್ಕಾರಣವಾಗಿ ಸಣ್ಣ ಉತ್ಪಾದಕರನ್ನು ಹಿಂಡುವ ಕೆಲಸಕ್ಕೆ ಇಳಿದಿದೆ.

ಸಣ್ಣ ಪುಟ್ಟ ಉತ್ಪಾದನೆಯ ಮೇಲೆ ದೊಡ್ಡ ಬಂಡವಾಳಿಗರು ಆದಿಮ ಬಂಡವಾಳ ಸಂಚಯವನ್ನು ಹರಿಯ ಬಿಡುವುದು ಪ್ರಭುತ್ವವೇ ನೇರವಾಗಿ ಈ ಕೆಲಸಕ್ಕೆ ಇಳಿಯುವುದರ ನಡುವೆ ವ್ಯತ್ಯಾಸವಿದೆ. ಪ್ರಭುತ್ವದ ಈ ರೀತಿಯ ಹಿಂಡಿಕೆ ಬಂಡವಾಳ ವಲಯದ ಮೇಲೂ ಪರಿಣಾಮ ಬೀರುತ್ತದೆ. ಏಕೆಂದರೆ ಈ ಸಣ್ಣ ಉತ್ಪಾದಕರಿಗೂ ಅದು ತನ್ನ ಸರಕುಗಳನ್ನು ಮಾರಾಟ ಮಾಡುತ್ತದೆ. ಇದರಿಂದಾಗಿ ಸರಕಾರದ ಹಿಂಡಿಕೆ ಆರ್ಥಿಕ ವನ್ನು ಹಿಂಜರಿತದತ್ತ ಒಯ್ಯುತ್ತದೆ.


ನಾವೀಗ ಭಾರತದಲ್ಲಿ ಇದನ್ನು ಕಾಣುತ್ತಿದ್ದೇವೆ. ಒಂದೆಡೆಯಲ್ಲಿ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮ ಈಗ ಮೂರನೇ ಜಗತ್ತಿಗೂ ಹರಡುತ್ತಿರುವುದರೊಂದಿಗೇ, ಮೋದಿ ಸರಕಾರದ ನೋಟುರದ್ಧತಿ ಮತ್ತು ಜಿಎಸ್‍ಟಿಯಂತಹ ನಿರ್ದಯ ಕ್ರಮುಗಳಿಂದಾಗಿಯೂ ಭಾರತದ ಆರ್ಥ ವ್ಯವಸ್ಥೆ ನರಳುತ್ತಿದೆ.

ಸಣ್ಣ–ಪುಟ್ಟ ಉತ್ಪಾದನೆ ಮತ್ತು ವ್ಯಾಪಾರವನ್ನು ಈ ರೀತಿಯಲ್ಲಿ ಸರಕಾರವೇ ಹಿಂಡುತ್ತಿರುವುದರಿಂದ ಈ ವಲಯವನ್ನು ದಾರಿದ್ರ್ಯಕ್ಕೆಳಿಸಿ ಅಲ್ಲಿಂದ ಜನಗಳನ್ನು ಹೊರದೂಡುವಾಗಲೇ, ಬಂಡವಾಳಶಾಹಿ ವಲಯದಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿದ್ದರೆ, ಆಗ ಈ ಜನಗಳ ಸಂಕಟಗಳು ತಾತ್ಕಾಲಿಕ, ಒಂದು ಚಾರಿತ್ರಿಕ ಮುನ್ನಡೆಯ ಅಗತ್ಯ ಅಂಶ ಎನ್ನಬಹುದಾಗಿತ್ತು. ಆದರೆ ಈ ವಲಯದ ರೈತರಂತಹ ಸಣ್ಣ ಉತ್ಪಾದಕರು, ಸಣ್ಣ ವ್ಯಾಪಾರಿಗಳು ಮತ್ತು ಕೆಲಸಗಾರರನ್ನು ಒಂದೆಡೆಯ;ಲ್ಲಿ ಸರಕಾರ ಮತ್ತು ಬಂಡವಾಳ ಹಿಂಡುತ್ತಿದ್ದರೆ, ಇನ್ನೊಂದೆಡೆಯಲ್ಲಿ ಬಂಡವಾಳಶಾಹಿ ವಲಯದಲ್ಲಿ ಉದ್ಯೋಗಾವಕಾಶಗಳು ಕುಂಠಿತಗೊಳ್ಳುತ್ತಿರುವುದರಿಂದ ವಾಸ್ತವವಾಗಿ ಜನಸಮೂಹಗಳ ದಾರಿದ್ರ್ಯ ಅಪಾರವಾಗಿ ಹೆಚ್ಚುತ್ತಿದೆ ಮತ್ತು ಅವರ ಜೀವನ ಮಟ್ಟ ಕಳಪೆಯಾಗುತ್ತಿದೆ.

ಸರಕಾರದ ಲೇಬರ್ ಬ್ಯುರೊದ ಮಾಹಿತಿಗಳೇ 15 ವರ್ಷಗಳಿಗಿಂತ ಹೆಚ್ಚಿನ ವಯೋಗುಂಪಿನ ಉದ್ಯೋಗದ 'ಎಂದಿನ ಪ್ರಧಾನ ಸ್ಥಾನಮಾನ' ಎಂಬದು 2013–14 ಮತ್ತು 2015–16ರ ನಡುವೆ 37.4ಲಕ್ಷದಷ್ಟು ಇಳಿದಿದೆ. ಎಂದು ತೋರಿಸುತ್ತಿವೆ. ಮೋದಿ ಸರಕಾರದ ಧೋರಣೆಗಳು ಮಾಡಿರುವ ಅಪಾರ ಅನಾಹುವನ್ನು ಈ ಹಿನ್ನೆಲೆಯಲ್ಲಿಟ್ಟು ನೋಡಬೇಕಾಗಿದೆ.


ನೋಟು ರದ್ಧತಿಯ ಒಂದು ವರ್ಷದ ನಂತರದ ಚಿತ್ರ

ವ್ಯಂಗ್ಯಚಿತ್ರಕಾರರು ಕಂಡಂತೆ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್






ಕಪ್ಪು ಹಣ ಮತ್ತು ಭ್ರಷ್ಟಾಚಾರದ ವಿರುದ್ಧ ಜನತೆ ಒಂದು ದೊಡ್ಡ ಯುದ್ಧವನ್ನು ಗೆದ್ದಿದ್ದಾರೆ–ಪ್ರಧಾನ ಮಂತ್ರಿಗಳು

ವ್ಯಂಗ್ಯಚಿತ್ರ: ಬಿಬಿಸಿ ಹಿಂದಿ

ಜಮ್ಮು-ಕಾಶ್ಮೀರ: ಹೊಸ ಮುತುವರ್ಜಿ ಅರ್ಥಪೂರ್ಣ ಮತ್ತು ವಿಶ್ವಾಸಾರ್ಹವಾಗಬೇಕಾದರೆ ಪ್ರಧಾನಿಗಳು ವಿಧಿ 370 ಮತ್ತು 35ಎ ಬಗ್ಗೆ ಆಶ್ವಾಸನೆ ನೀಡಬೇಕು-ತರಿಗಾಮಿ



"ಕಾಶ್ಮೀರ ಒಂದು ದೊಡ್ಡ ಮಾನವ ದುರಂತವಾಗಿ ಬಿಟ್ಟಿದೆ ಎಂಬುದನ್ನು ಕೇಂದ್ರ ಸರಕಾರ ಉಪೇಕ್ಷಿಸುವಂತಿಲ್ಲ. ಅಧಿಕಾರ ವಲಯಗಳಿಲ್ಲಿರುವವರು ಜನತೆಯ ನೋವು, ಸಂಕಟಗಳ ಬಗ್ಗೆ ನಿರ್ಲಕ್ಷ್ಯದಿಂದಿದ್ದಾರೆ ಎಂಬುದು ಕಾಶ್ಮೀರಿಗಳ ಮನವನ್ನು ಹೊಕ್ಕಿ ಕೂತಿದೆ. ಈ ಆಳವಾಗಿ ಬೇರೂರಿರುವ ಭಾವನೆಯನ್ನು ಹೋಗಲಾಡಿಸಬೇಕು" ಎಂದು ಜಮ್ಮು-ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡರೂ, ದೀರ್ಘಕಾಲದಿಂದ ಶಾಸಕರೂ ಆಗಿರುವ ಮಹಮ್ಮದ್ ಯೂಸುಫ್ ತರಿಗಾಮಿ ಕೇಂದ್ರ ಸರಕಾರ ಇತ್ತೀಚೆಗೆ ಮತ್ತೊಂದು ದೀರ್ಘ ನಿಷ್ಕ್ರಿಯೆಯ ನಂತರ ಜಮ್ಮು-ಕಾಶ್ಮೀರ ಕುರಿತಂತೆ ಸಂವಾದ ನಡೆಸಲು ನೇಮಿಸಿರುವ ಐಬಿ(ಬೇಹುಗಾರಿಕಾ ಕಚೇರಿ) ಮುಖ್ಯಸ್ಥರಾಗಿದ್ದ ದಿನೇಶ್ವರ್ ಶರ್ಮರವರನ್ನು ಭೇಟಿ ಮಾಡಿದ ನಂತರ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತಾಡುತ್ತ ಹೇಳಿದರು.



ತರಿಗಾಮಿಯವರೊಡನೆ ರಾಜ್ಯದ ಇನ್ನಿಬ್ಬರು ಸಿಪಿಐ(ಎಂ) ಮುಖಂಡರಾದ ಹಕೀಮ್ ಮಹಮ್ಮದ್ ಯಾಸಿನ್ ಮತ್ತು ಗುಲಾಮ್ ಹಸನ್ ಮಿರ್ ದಿನೇಶ್ವರ್ ಶರ್ಮರವರನ್ನು ಭೇಟಿಯಾಗಿ ಈ ಹೊಸ ಸಂವಾದದ ಬಗ್ಗೆ ಸರಕಾರ ಗಂಭೀರ ಮುತುವರ್ಜಿ ವಹಿಸಿದೆ ಎಂದು ಸಾಬೀತು ಮಾಡಲು ತಕ್ಷಣವೇ ವಿಶ್ವಾಸ ಕುದುರಿಸುವ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಕಾಶ್ಮೀರ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಒಮದು ಕ್ಲಿಷ್ಟ ಪ್ರಶ್ನೆ. ಇದು ಇಡೀ ಜಮ್ಮು ಮತ್ತು ಕಾಶ್ಮೀರದ ಜನತೆಗೆ, ಅದರಲ್ಲೂ ಕಾಶ್ಮೀರ ಕಣಿವೆಯ ನಿವಾಸಿಗಳಿಗೆ ಹೇಳಿತೀರದ ಸಂಕಷ್ಟಗಳನ್ನು, ನೋವುಗಳನ್ನು ತಂದಿಕ್ಕಿದೆ. ಇದಕ್ಕೊಂದು ಶಾಶ್ವತ ಪರಿಹಾರ ಬೇಕಿದೆ. ಅದು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ವಿಶ್ವಾಸಾರ್ಹ, ಅರ್ಥಪೂರ್ಣವಾದ ಸಂವಾದದಿಂದ ಮಾತ್ರವೇ ಸಾಧ್ಯ ಎಂಬ ನಿಲುವನ್ನು ಸಿಪಿಐ(ಎಂ) ತಂಡ ಪುನರುಚ್ಚರಿಸಿತು.

ದುರದೃಷ್ಟವಶಾತ್ ಈ ಸೂಕ್ಷ್ಮ ಪ್ರಶ್ನೆಯನ್ನು ಪರಿಶೀಲಿಸುವ ಗಂಭೀರ ಪ್ರಯತ್ನಗಳನ್ನು ಇದುವರೆಗೂ ಮಾಡಿಲ್ಲ. ಈಗಲೂ ಭಾರತ ಸರಕಾರ ಈ ಹೊಸ ಪ್ರಯತ್ನ ಆರಂಭಿಸಿರುವಾಗಲೂ ಕೂಡ ವಿವಿಧ ಅಧಿಕಾರ ಕೇಂದ್ರಗಳಿಂದ ತದ್ವಿರುದ್ಧ ದನಿಗಳು ಕೇಳಬರುತ್ತಿವೆ. ಇವು ಆಗಲೇ ಇರುವ ಗೊಂದಲಗಳನ್ನು, ಭ್ರಮನಿರಸನಗಳನ್ನು ಹೆಚ್ಚಿಸುತ್ತಿವೆ ಎಂದು ತರಿಗಾಮಿ ಹೇಳಿದರು.

ಈಗ ಕಾಣುತ್ತಿರುವ ಅಭೂತಪೂರ್ವ ಅಸಂತೃಪ್ತಿ ಒಂದು ಬೃಹತ್ ಮತ್ತು ಆಳವಾದ ಪರಕೀಯ ಭಾವದ ನೇರ ಫಲಿತಾಂಶ ಎಂದು ಬೇರೆ ಹೇಳಬೇಕಾಗಿಲ್ಲ. ಈ ಪರಕೀಯ ಭಾವವನ್ನು ಗಣನೆಗೆ ತಗೊಳ್ಳದಿದ್ದರೆ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ, ಜನಸಾಮಾನ್ಯರ ಸಂಕಟಗಳು ಮತ್ತಷ್ಟು ಹೆಚ್ಚುತ್ತವೆ ಎಂದು ಸಿಪಿಐ(ಎಂ) ಮುಖಂಡರು ಎಚ್ಚರಿಸಿದರು.

ಕಾಶ್ಮೀರದಲ್ಲಿನ ಜಟಿಲತೆ ಒಂದು ರಾಜಕೀಯ ಪ್ರಶ್ನೆ, ಅದಕ್ಕೆ ರಾಜಕೀಯ ಪರಿಹಾರವೇ ಬೇಕಾಗಿದೆ-ಯೇ ವಿನಹ ಬಲವಂತ ಅಥವ ಬಲಪ್ರಯೋಗದ ಆಯ್ಕೆ ಸಾಧ್ಯವಿಲ್ಲ ಎಂಬುದು ನಮ್ಮ ನಂಬಿಕೆ, ಮತ್ತು ಇದು ಕೇವಲ ನಂಬಿಕೆಯಲ್ಲ, ಚರಿತ್ರೆಯ ಪಾಟ ಕೂಡ ಎಂದು ಸಿಪಿಐ(ಎಂ) ಮುಖಂಡರು ಒತ್ತಿ ಹೇಳಿದರು. ರಾಜ್ಯದಲ್ಲಿ ಮತ್ತು ಹೊರಗೆ ಸಮಾಜದ ವಿವಿಧ ವಿಭಾಗಗಳಿಂದ ಎದ್ದುಬರುತ್ತಿರುವ ದನಿಗಳು ಮತ್ತೆ-ಮತ್ತೆ ಒಂದು ಅರ್ಥಪೂರ್ಣ, ತಾಳಿಕೆಯ ಸಂವಾದದ ಪ್ರಕ್ರಿಯೆ ನಡೆಯಬೇಕು ಎಂದು ಆಗ್ರಹಿಸುತ್ತಲೇ ಬಂದಿವೆ. ಈಗ ಭಾರತ ಸರಕಾರ ತನ್ನ ಪರವಾಗಿ ಒಬ್ಬ ಸಂವಾದಕಾರರನ್ನು ನೇಮಿಸಿರುವಾಗ ಇದು ಗಂಭೀರವಾಗಿಯೇ ನಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ. ಇದಕ್ಕೆ ಅನುಕೂಲಕರವಾದ ವಾತಾವರಣವನ್ನು ನಿರ್ಮಿಸಲು ಈ ನಾಲ್ಕು ಒತ್ತಾಯಗಳನ್ನು ಸಿಪಿಐ(ಎಂ) ಮುಖಂಡರು ಮುಂದಿಟ್ಟಿದ್ದಾರೆ.

1. ಪ್ರಧಾನ ಮಂತ್ರಿಗಳು ರಾಜ್ಯದ ಜನತೆಗೆ ಸಂವಿಧಾನದ ವಿಧಿ 370 ಮತ್ತು 35 ಎ ಯನ್ನು ಕಾಯ್ದು ಕೊಳ್ಳಲಾಗುವುದು ಎಂದು ಆಶ್ವಾಸನೆ ನೀಡಬೇಕು. ಇದನ್ನು ಕುರಿತಂತೆ ಅವರು ಭಾರತದ ಸಂಸತ್ತಿನ ವೇದಿಕೆಯಿಂದ ಒಂದು ಹೇಳಿಕೆಯನ್ನು ನೀಡಬೇಕು.
2. ಜಮ್ಮು ಮತ್ತು ಕಾಶ್ಮೀರದ ಒಳಗೆ ಮತ್ತು ಹೊರಗೆ ವಿವಿಧ ಜೈಲುಗಳಲ್ಲಿ ಇಟ್ಟಿರುವ ರಾಜಕೀಯ ಮುಖಂಡರ ಬಿಡುಗಡೆಯ ಬಗ್ಗೆ ಪರಾಮರ್ಶಿಸಬೇಕು. ಪಿಎಸ್ಎ ಅಡಿಯಲ್ಲಿ ಬಂಧಿಸಿರುವವರ ಕೇಸುಗಳ ಪರಾಮರ್ಶೆಯನ್ನು ನಡೆಸಿ ಆದಷ್ಟು ಬೇಗನೇ ನಡೆಸಿ ಅವರನ್ನು ಬಿಡುಗಡೆ ಮಾಡಬೇಕು.
3. ಪ್ರಸಕ್ತ ಅಸಂತೃಪ್ತಿಯಲ್ಲಿ ಯುವಜನರ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು.
4. ಯುವಜನರಿಗೆ ಅನಗತ್ಯ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕು.

ಕೊಲ್ಕತಾದಲ್ಲಿ 'ಮಹಾಮಿಚಿಲ್': 12 ದಿನಗಳ ರಾಜ್ಯವ್ಯಾಪಿ ಜಾತಾಗಳ ನಂತರ ಬೃಹತ್ ಬಿಪಿಎಂಒ ರ್ಯಾಲಿ

ಹಿಂದಿನ ಸಂಚಿಕೆಗಳಲ್ಲಿ ಈ ಅಂಕಣದಲ್ಲಿ ಪ್ರಕಟಿಸಿರುವಂತೆ ಅಕ್ಟೋಬರ್22 ರಂದು ರಾಜ್ಯದ ಹಲವೆಡೆಗಳಿಂದ ಆರಂಭವಾದ ಬಂಗಾಳ ಸಾಮೂಹಿಕ ಸಂಘಟನೆಗಳ ವೇದಿಕೆ(ಬಿಪಿಎಂಒ) ಜಾಥಾಗಳು 12 ದಿನಗಳ ಕಾಲ ರಾಜ್ಯದ ಮೂಲೆ-ಮೂಲೆಗಳಲ್ಲಿ ಸಂಚರಿಸಿ ನವಂಬರ್ 3ರಂದು ಕೊಲ್ಕತಾದಲ್ಲಿ 'ಮಹಾಮಿಚಿಲ್' (ಮಹಾ ಮೆರವಣಿಗೆ)ನೊಂದಿಗೆ ಮುಕ್ತಾಯಗೊಂಡಿದೆ.

ಎಲ್ಲ ಜನಸಮೂಹಗಳ 17 ಸಾಮಾನ್ಯ ಬೇಡಿಕೆಗಳಲ್ಲದೆ ಅಲ್ಲಲ್ಲಿ ಸ್ಥಳೀಯ ಬೇಡಿಕೆಗಳನ್ನು ಜನಗಳು ಎತ್ತಿದರು. ಉತ್ತರ ಬಂಗಾಲದ ಬಿಪಿಎಂಒ ರ್ಯಾಲಿಗಳಲ್ಲಿ ಮುಚ್ಚಿದ ಚಹಾತೋಟಗಳನ್ನು ತೆರೆಯಬೇಕೆನ್ನುವ ಘೋಷಣೆ ಕೇಳಬಂದರೆ, ಟಿಎಂಸಿ-ಬಿಜೆಪಿ ಪೈಪೋಟಿಯಲ್ಲಿ ಕೋಮುಗ್ರಸ್ತಗೊಂಡಿರುವ ಉತ್ತರ 24 ಪರಗಣ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿ ರೋಗಗ್ರಸ್ತ ಉದ್ದಿಮೆಗಳನ್ನು ಪುನರುಜ್ಜೀವನಗೊಳಿಸಬೇಕೆಂಬ ಬೇಡಿಕೆಯೊಂದಿಗೆ ಕೋಮುವಾದಿ ಧ್ರುವೀಕರಣದ ಪ್ರಯತ್ನಗಳನ್ನು ತಕ್ಷಣವೇ ತಡೆಯಬೇಕೆಂಬ ಆಗ್ರಹಗಳು ಕೇಳಬಂದವು. ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಆಣೆಕಟ್ಟುಗಳನ್ನು ದುರಸ್ತಿಗೊಳಿಸಬೇಕು ಎಂಬ ಬೇಡಿಕೆಗಳು ಕೇಳಬಂದವು.

ನವಂಬರ್ 3ರಂದು ಕೊಲ್ಕತಾ ಮಹಾನಗರ ಮತ್ತೊಮ್ಮೆ ಕೆಂಬಾವುಟಗಳಿಂದ ತುಂಬಿ ಹೋಯೊತು. ರಾಜ್ಯದ ವಿವಿಧೆಡೆಗಳಿಂದ ಜಾತಾಗಳಲ್ಲದೆ, ನಗರದ ವಿವಿಧೆಡೆಗಳಿಂದ ಬಂದ ಮೆರವಣಿಗೆಗಳು 'ಮಹಾಮಿಚಿಲ್'ನಲ್ಲಿ ಸೇರಿಕೊಂಡವು.



ನಂತರ ನಡೆದ ಬೃಹತ್ ರ್ಯಾಲಿಯನ್ನು ಉದ್ದೇಶಿಸಿ ಮಾತಾಡುತ್ತ ಬಿಪಿಎಂಒ ಸಂಯೋಜಕರಾದ ಶ್ಯಾಮಲ್ ಚಕ್ರವರ್ತಿ ಜಾಥಾಗಳು ಕಳೆದ 6 ವರ್ಷಗಳಲ್ಲಿ ಟಿಎಂಸಿ ಹಿಂಸಾಚಾರದಿಂದಾಗಿ ಎಡ-ಪ್ರಜಾಪ್ರಭುತ್ವ ಚಳುವಳಿಗಳನ್ನು ನಡೆಸಲಾಗದೇ ಇದ್ದ ಸ್ಥಳಗಳನ್ನೂ ತಲುಪಿದ್ದು ಇವುಗಳ ಒಂದು ಮಹತ್ವಪೂರ್ಣ ಸಾಧನೆ ಎಂದರು.

ಎಡರಂಗದ ಅಧ್ಯಕ್ಷ ಬಿಮನ್ ಬಸು ಕೂಡ ಮಾತಾಡುತ್ತ 12 ದಿನಗಳಲ್ಲಿ ವಿವಿಧ ಜಾಥಗಳು ವ್ಯಾಪಕ ಪ್ರಚಾರಾಂದೋಲನ ನಡೆಸುವಲ್ಲಿ ಯಶಸ್ವಿಯಾಗಿರು ವುದನ್ನು ಗಮನಿಸುತ್ತ ಈ ಸಾರ್ವಜನಿಕ ಸಂಪರ್ಕವನ್ನು ಕಾಯ್ದುಕೊಳ್ಳಬೇಕು, ಈ ಬಾರಿ ತಲುಪಲಾಗದ ಜಾಗಗಳಿಗೂ ಇವನ್ನು ಒಯ್ಯಬೇಕು, ಶ್ರಮಜೀವಿ ಜನಗಳೊಂದಿಗೆ ಜೀವಂತ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದು ಕರೆ ನೀಡಿದರು. ಪ್ರತಿಭಟನೆಗಳನ್ನು ಪತ್ರಿರೋಧಗಳ ಮಟ್ಟಕ್ಕೆ ಒಯ್ಯಬೇಕಾದ ಕಾಲವೀಗ ಬಂದಿದೆ ಎಂದು ಅವರು ಹೇಳಿದರು.

ನೇತಾಜಿ ಸುಭಾಷ್‌ಚಂದ್ರ ಬೋಸ್ ಮತ್ತು ರವೀಂದ್ರನಾಥ ಟಾಗೋರ್ ಕೃತಿಗಳನ್ನು ನೆನಪಿಸುತ್ತ ಜನಸಮೂಹಗಳು ಟಿಎಂಸಿ ಸರಕಾರ ಹೇರಿರುವ ಸಂಸ್ಕೃತಿಯಿಂದ ಹೊರಬಂದು ಬಂಗಾಲದ ಸಂಸ್ಕೃತಿಯನ್ನು ಮತ್ತೆ ಪಡೆಯಬೇಕಾಗಿದೆ ಎಂದು ಬಿಮನ್ ಬಸು ಕರೆ ನೀಡಿದರು.

ಆಶ್ವಾಸನೆ ಈಡೇರಿಸದ ಸರಕಾರದಿಂದ ರೈತರಿಗೆ ಲಾಟಿಯೇಟು



ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು 2012ರಲ್ಲಿ ವಿರೋಧ ಪಕ್ಷದಲ್ಲಿದ್ದಾಗ ತಾನು ಅಧಿಕಾರಕ್ಕೆ ಬಂದರೆ ಕಾಕಿನಾಡದಲ್ಲಿ ಎಸ್‌ಇಝಡ್‌ಗೆಂದು ಸ್ವಾಧೀನ ಪಡಿಸಿಕೊಂಡು ಏನೂ ಅಭಿವೃದ್ಧಿ ನಡೆಯಿಸಿರದ ಜಮೀನನ್ನು ರೈತರಿಗೆ ಹಿಂದಿರುಗಿಸುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾದರೂ ಈ ಆಶ್ವಾಸನೆಯನ್ನು ಈಡೇರಿಸದಿದ್ದಾಗ ನವಂಬರ್ 4ರಂದು ರೈತರು ಅದನ್ನು ಪಡೆಯಲು ಹೋರಾಟದ ಕಣಕ್ಕಿಳಿದಾಗ ಪೋಲೀಸರು ಅವರ ಮೇಲೆ ಲಾಟೀ ಪ್ರಹಾರ ಮಾಡಿ ಬಂಧಿಸಿದೆ.

ಸಿಪಿಐ(ಎಂ)ನ ಪೂರ್ವ ಗೋದಾವರಿ ಜಿಲ್ಲಾ ಕಾರ್ಯದರ್ಶಿ ನಾಗೇಶ್ವರ ರಾವ್ ಮತ್ತು ಜನವಾದಿ ಮಹಿಳಾ ಸಂಘಟನೆಯ ಬೇಬಿ ರಾಣಿಯವರುಯವರನ್ನು ಪೋಲೀಸರು ಹಿಡಿದೆಳೆದು ಬಂಧಿಸಿದ್ದಾರೆ.

ಹಿಂಸಾಚಾರ ಹಬ್ಬಿಸಲು ತ್ರಿಪುರಾಕ್ಕೆ ಆರೆಸ್ಸೆಸ್-ಬಿಜೆಪಿ ಹಣದ ಹೊಳೆ

ಮುಂದಿನ ವರ್ಷ ವಿಧಾನಸಭೆಯ ಚುನಾವಣೆ ನಡೆಯಲಿರುವ ತ್ರಿಪುರಕ್ಕೆ ಬಿಜೆಪಿ-ಆರೆಸ್ಸೆಸ್ ಕೋಟಿಗಟ್ಟಲೆ ರೂಪಾಯಿಗಳನ್ನು ಹರಿಸುತ್ತಿದೆ, ಗುಂಪುಗಳು ಮತ್ತು ಬುಡಕಟ್ಟೇತರ ಗುಂಪುಗಳ ನಡುವೆ ಸಂಘರ್ಷ ಸೃಷ್ಟಿಸಲು ಇದನ್ನು ಬಳಸಲಾಗುತ್ತಿದೆ ಎಂದು ಸಿಪಿಐ(ಎಂ) ಆಪಾದಿಸಿದೆ.

ರಾಜ್ಯ ಸರಕಾರದ ವಿರುದ್ಧ ಬಿಜೆಪಿಯ ಪಿತೂರಿಯ ನಿಜಚಿತ್ರವನ್ನು ಬಿಂಬಿಸುವ ಒಂದು ಕಿರುಹೊತ್ತಿಗೆಯನ್ನು ಸಿಪಿಐ(ಎಂ) ರಾಜ್ಯಸಮಿತಿ ಪ್ರಕಟಿಸಿದೆ.

ಬಿಜೆಪಿ ಹಲವು ರಾಜ್ಯಗಳಲ್ಲಿ ಚುನಾವಣೆಗಳಲ್ಲಿ ಒಂದೂ ಸೀಟು ಗೆಲ್ಲದೆ ಪ್ರಮುಖ ಪ್ರತಿಪಕ್ಷದ ಸ್ಥಾನ ಗಳಿಸಿದೆ. ಇದಕ್ಕಾಗಿ ಅದು ಪ್ರತಿಪಕ್ಷಗಳವರನ್ನು ಬ್ಲಾಕ್‌ಮೇಲ್ ಮಾಡಲು ಸಿಬಿಐ, ಆದಾಯ ತೆರಿಗೆ ಇಲಾಖೆಗಳನ್ನು ಬಳಸಿಕೊಂಡಿದೆ. ಆದರೆ ತ್ರಿಪುರಾದಲ್ಲಿ ಅದರ ಈ ಯಾವ ತಂತ್ರಗಳೂ ಕೆಲಸ ಮಾಡುತ್ತಿಲ್ಲ ಎಂದು ಈ ಕಿರುಹೊತ್ತಿಗೆ ವಿವರಿಸಿದೆ.

ಉ.ಪ್ರ: ಮತ್ತೆ 4ದಿನಗಳಲ್ಲಿ 55 ಮಕ್ಕಳ ಸಾವು

ಉತ್ತರಪ್ರದೇಶದ ಮುಖ್ಯಮಂತ್ರಿಗಳ ಕ್ಷೇತ್ರ ಗೋರಖ್‌ಪುರದ ಆಸ್ಪತ್ರೆಯಲ್ಲಿ ದೊಡ್ಡ ಸಂಖ್ಯೆಮಕ್ಕಳ ಸಾವು ಇಡೀ ದೇಶದ ಗಮನ ಸೆಳೆದಿತ್ತು. ಆದರೆ ಉತ್ತರಪ್ದೇಶ ಸರಕಾರ ಇದು ಮರುಕಳಿಸದಂತೆ ತಡೆಯಲು ಯಾವುದೇ ಕ್ರಮವನ್ನು ಕೈಗೊಂಡಂತೆ ಕಾಣುತ್ತಿಲ್ಲ.

ಅಕ್ಟೋಬರ್ ತಿಂಗಳಲ್ಲಿ ಮಕ್ಕಳ ಸಾವಿನ ಸಂ-ಖ್ಯೆ ಹಿಂದಿನ ವರ್ಷದ ಸಂಖ್ಯೆಯನ್ನು ದಾಟಿತು. ನವಂಬರ್ 1ರಂದು ಈ ಅಸ್ಪತ್ರೆಯಲ್ಲಿ ಮತ್ತೆ 13 ಮಕ್ಕಳು ಸಾವಪ್ಪಿದರು, ಅವರಲ್ಲಿ 7 ನವಜಾತ ಶಿಶುಗಳು. ನವಂಬರ್ 2,3, ಮತ್ತು 4ರಂದು ಕೂಡ ಅವನುಕ್ರಮವಾಗಿ 12,18,12 ಮಕ್ಕಳು ಸಾವಪ್ಪಿದರು. ಅಂದರೆ 4 ದಿನಗಳಲ್ಲಿ 55 ಮಕ್ಕಳು. ಕಳೆದ ಮೂರು ತಿಂಗಳಲ್ಲಿ 1300 ಮಕ್ಕಳ ಸಾವಿನೊಂದಿಗೆ ಯೋಗಿ ಆದಿತ್ಯನಾಥರ ನೇತೃತ್ವದ ಉತ್ತರಪ್ರದೇಶ ಸರಕಾರ 'ರಾಷ್ಟ್ರೀಯ ದಿಗಿಲು ಪಟ್ಟಿ'ಯ ಮೊದಲ ಸ್ಥಾನಕ್ಕೆ ಏರಿದೆ ಎನ್ನಲಾಗುತ್ತಿದೆ.

ಆದರೆ ಇದರ ಪರಿವೆಯಿಲ್ಲದೆ ಅಲ್ಲಿನ ಸರಕಾರ ಒಂದೆಡೆ ಬೇರೆಯವರಿಗೆ ಪಾಟ ಕಲಿಯಲು ಹೇಳುತ್ತಿದ್ದರೆ, ಇನ್ನೊಂದೆಡೆಯಲ್ಲಿ ಎಲ್ಲವನ್ನೂ ಬಸ್ಸು, ಸಮವಸ್ತ್ರ ಎಲ್ಲವನ್ನೂ ಕೇಸರಿಮಯಗೊಳಿಸುವವುದರಲ್ಲಿ ಮುಳುಗಿದೆ.

ಈ ವಾರ ನೂರು ವರ್ಷಗಳ ಹಿಂದೆ ನವೆಂಬರ್ 7 ರಂದು ನಡೆದ ಮೊದಲ ಸಮಾಜವಾದಿ ಕ್ರಾಂತಿ ನೆನಪು ಮಾಡಿಕೊಳ್ಳುವ ಸಮಯ. ಈ ದಿನ ನೆನಪಿಸಿಕೊಳ್ಳುವುದು ಅದರ ಚಾರಿತ್ರಿಕ ಮಹತ್ವಕ್ಕೆ ಮಾತ್ರವಲ್ಲ. 1917ರ ಕ್ರಾಂತಿಯ ನಂತರ ಸ್ಥಾಪಿತವಾದ ಸೋವಿಯೆಟ್ ಒಕ್ಕೂಟದ ಸಾಧನೆಗಳಿಗಾಗಿ, ಅವು ಜಗತ್ತಿನ ದುಡಿಯುವ ಜನತೆಯ ಜೀವನದ ಮೇಲೆ ಬೀರಿದ ಇನ್ನೂ ಬೀರುತ್ತಿರುವ ಪರಿಣಾಮಗಳಿಗಾಗಿ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ಅವುಗಳ ಸತತ ದಾಳಿಗಳ ನಡುವೆ 74 ವರ್ಷಗಳ ಕಾಲ ಬೆಳೆದು ತೋರಿಸಿದ 10 ಪ್ರಮುಖ ಅದ್ಭುತ ಸಾಧನೆಗಳಿಗಾಗಿ, ಜಗತ್ತಿನ ಜನತೆಗೆ ಕೊಟ್ಟ ಕೊಡುಗೆಗಳಿಗಾಗಿ ನಾವು ನೆನಪಿಸಿಕೊಳ್ಳಬೇಕು. ಈ ವಾರದಿಂದ ಆರಂಭಿಸಿ ಪ್ರತಿ ವಾರ ಒಂದೆರಡು ಅದ್ಭುತಗಳನ್ನು ನೆನಪಿಸಿಕೊಳ್ಳುತ್ತಾ ಹೋಗೋಣ

ಸೋವಿಯೆಟ್ ಒಕ್ಕೂಟದ ಹತ್ತು ಅದ್ಭುತಗಳು

ಸೋವಿಯೆಟ್ ಒಕ್ಕೂಟದ ಹತ್ತು ಅದ್ಭುತ ಸಾಧನೆಗಳು, ಜಗತ್ತಿಗೆ ಕೊಡುಗೆಗಳು ಹೀಗಿವೆ :

1. ದುಡಿಮೆಗಾರರ ಪರಮಾಧಿಕಾರದ ಪ್ರಭುತ್ವದ ಕಾರ್ಯ ಸಾಧ್ಯತೆ ತೋರಿಸಿದ್ದು
2. ಎಲ್ಲರಿಗೂ ಶಿಕ್ಷಣ ಮತ್ತು ಉದ್ಯೋಗ – ಮೂಲಭೂತ ಹಕ್ಕಾಗಿ ಜಾರಿ
3. ಎಲ್ಲರಿಗೂ ಆರೋಗ್ಯದ ಮೂಲಭೂತ ಹಕ್ಕು(ಸಾರ್ವತ್ರಿಕ ಸಮಗ್ರ ಉಚಿತ ಆರೋಗ್ಯ ಸೇವೆ ಜಾರಿ)
4. ಮಹಿಳಾ ಸಮಾನತೆಗೆ ಸಮಗ್ರ ಸಾಮಾಜಿಕ–ಆರ್ಥಿಕ ಬುನಾದಿ
5. ಸಮೃದ್ಧ ಸಮಸಮಾಜದ ಯೋಜನಾಬದ್ಧ ಸಮಗ್ರ ಬೆಳವಣಿಗೆ
6. ಹಿಂದುಳಿದ ದೇಶದ ಕ್ಷಿಪ್ರ ಮತ್ತು ಸತತ ಕೈಗಾರಿಕೀಕರಣ
7. ಉಳುವವನೇ ಹೊಲದೊಡೆಯನಾದ ಭೂ-ಸುಧಾರಣೆ, ಕೃಷಿಯ ಸಮಗ್ರ ಅಭಿವೃದ್ಧಿ
8. ಮಾನವ ಕಲ್ಯಾಣಕ್ಕಾಗಿ ವಿಜ್ಞಾನ–ತಂತ್ರಜ್ಞಾನದ ಯೋಜಿತ ಬೆಳವಣಿಗೆ
9. ಬಹು ಭಾಷೆಗಳ ಧರ್ಮಗಳ ಸಂಸ್ಕೃತಿಗಳ ರಾಷ್ಟ್ರೀಯತೆಗಳ ಜನ ಒಟ್ಟಾಗಿ ಸಮನಾಗಿ ಬದುಕುವ ಒಕ್ಕೂಟ ದೇಶದ ಮಾದರಿ
10. ಫ್ಯಾಸಿಸಂ–ಸಾಮ್ರಾಜ್ಯಶಾಹಿ ವಿರುದ್ಧ ಸಮರದಲ್ಲಿ, ವಿಶ್ವಶಾಂತಿ ರಕ್ಷಣೆಗೆ ಮುಂಚೂಣಿ ಪಾತ್ರ

ಸೋವಿಯೆಟ್ ಸರಕಾರ ಜನತೆಯನ್ನು ಈ ಎಲ್ಲಾ ಸಾಧನೆಗಳಲ್ಲಿ ಎಲ್ಲಾ ನಾಗರಿಕರನ್ನು ಒಳಗೊಳ್ಳಲು ನಡೆಸಿದ ಪ್ರಚಾರದಲ್ಲಿ ಪೋಸ್ಟರ್ ಗಳ ಪಾತ್ರ ದೊಡ್ಡದು. ವಿಶೇಷವಾಗಿ ಸಾಕ್ಷರತೆ ಇನ್ನೂ ವ್ಯಾಪಕವಾಗಿರದ ಮೊದಲ ದಶಕಗಳಲ್ಲಿ. ಆದ್ದರಿಂದ ಪ್ರತಿಯೊಂದು ಅದ್ಭುತ ಸಾಧನೆ ಅದಕ್ಕೆ ಸಂಬಂಧಿತ ಪೋಸ್ಟರ್ ಜತೆ ಕೊಡಲಾಗುತ್ತದೆ

ಜಗತ್ತಿನಲ್ಲೇ ಮೊದಲ ಬಾರಿಗೆ ಶೋಷಕ ವರ್ಗ ಅಲ್ಲದ ಒಂದು ವರ್ಗದ ಪ್ರಭುತ್ವ ಸ್ಥಾಪನೆ ಮತ್ತು ದುಡಿಮೆಗಾರರ ಪರಮಾಧಿಕಾರದ ಪ್ರಭುತ್ವದ ಕಾರ್ಯ ಸಾಧ್ಯತೆ ತೋರಿಸಿದ್ದು ಮತ್ತು ಅದಕ್ಕೊಂದು ಮಾದರಿ ರೂಪಿಸಿದ್ದು ಸೋವಿಯೆಟ್ ಒಕ್ಕೂಟದ ಅದ್ಭುತ ಸಾಧನೆಗಳಲ್ಲೇ ಪ್ರಮುಖವಾದದ್ದು. ಕಾರ್ಮಿಕರ ರೈತರ ಸೈನಿಕರ ಸೋವಿಯೆಟ್ (ಪಂಚಾಯತುಗಳು ಎನ್ನಬಹುದು) ಗಳಿಂದಲೇ ನಡೆದ ಕ್ರಾಂತಿಯಿಂದಲೇ ಹೊಮ್ಮಿದ ಹೊಸ ಕಾರ್ಮಿಕರ ಪ್ರಭುತ್ವ ಇದಾಗಿತ್ತು. ಕಾರ್ಖಾನೆ, ಕೃಷಿ ಫಾರ್ಮು, ಗಣಿಗಳು ಮತ್ತು ಎಲ್ಲಾ ಕೆಲಸದ ಸ್ಥಳಗಳಲ್ಲಿ ದುಡಿಮೆಗಾರರ ಚುನಾಯಿತ ಪ್ರತಿನಿಧಿಗಳಿಂದ ಸ್ವಯಮಾಡಳಿತ; ಯೋಜನೆ ಅದರ ಜಾರಿಯಲ್ಲಿ ಪಾತ್ರ; ಶಾಲೆ, ಆಸ್ಪತ್ರೆ ಮತ್ತಿತರ ಸಾಮಾಜಿಕ ಸೇವಾ ಸಂಘಟನೆಗಳ ಪ್ರಜಾಸತ್ತಾತ್ಮಕ ನಿರ್ವಹಣೆ; ಸ್ಥಳೀಯ ಸರಕಾರದಿಂದ ಹಿಡಿದು ಉನ್ನತ ಮಟ್ಟದ ವರೆಗೆ ಜನತೆಯ ಸೋವಿಯೆಟ್ ಗಳಿಂದ ಆಡಳಿತ; – ಗರಿಷ್ಠ ದುಡಿಮೆಗಾರರು ಸತತವಾಗಿ ಪಾಲುಗೊಳ್ಳುವ ಸಮಾಜವಾದಿ ಪ್ರಜಾಪ್ರಭುತ್ವದ ಈ ಹೊಸ ಮಾದರಿಯನ್ನು ಸೋವಿಯೆಟ್ ಒಕ್ಕೂಟ ತೋರಿಸಿಕೊಟ್ಟಿತು. ಜಗತ್ತಿನಲ್ಲೆ ಮೊದಲ ಬಾರಿಗೆ ದುಡಿಮೆಗಾರರಿಗೆ ಒಂದು ಹಕ್ಕಾಗಿ – ಕೆಲಸದ ಅವಧಿಯ ಮಿತಿ, ಕೌಶಲ್ಯ ಹೆಚ್ಚಿಸಿಕೊಳ್ಳಲು ತರಬೇತಿ, ಇಡೀ ಕುಟುಂಬಕ್ಕೆ ಉಚಿತ ವಸತಿ, ಆರೋಗ್ಯ ಸೇವೆ, ಮಕ್ಕಳಿಗೆ ಉಚಿತ ಶಿಕ್ಷಣ, ಉಚಿತ ಬಿಡುವು, ಆಟೋಟ, ಪ್ರವಾಸ ಮುಂತಾದ ಕಲ್ಯಾಣ ಯೋಜನೆಗಳು; ನಿವೃತ್ತಿಯಾದ ಮೇಲೂ ಎಲ್ಲಾ ಸವಲತ್ತುಗಳು ಸೇರಿದ ಸಾಮಾಜಿಕ ಭದ್ರತೆ ಕ್ರಮಗಳನ್ನು – ಈ ಕಾರ್ಮಿಕರ ಪ್ರಭುತ್ವ ಜಾರಿ ಮಾಡಿತು.

ದುಡಿಮೆಗಾರರ ಹಕ್ಕುಗಳಾಗಿ ಜಾರಿಯಾದ ಈ ಕ್ರಮಗಳು ಇಡೀ ಜಗತ್ತಿನ ದುಡಿಮೆಗಾರರಿಗೆ ಈ ಹಕ್ಕುಗಳಿಗೆ ಹೋರಾಡಲು ಸ್ಫೂರ್ತಿ ಒದಗಿಸಿತು. ಅವುಗಳಲ್ಲಿ ಹಲವನ್ನು ಜಾರಿ ಮಾಡಿಸಲು ಬಂಡವಾಳಶಾಹಿ ವರ್ಗ ಮತ್ತು ಪ್ರಭುತ್ವಗಳ ಮೇಲೆ ಒತ್ತಡ ಹಾಕಿತು. ಎರಡನೇ ಮಹಾಯುದ್ಧದ ನಂತರ ಅದರಲ್ಲೂ ಪೂರ್ವ ಯುರೋಪಿನಲ್ಲಿ ಕಾರ್ಮಿಕರ ಪ್ರಭುತ್ವಗಳ ಉದಯ ಮತ್ತು "ಕಮ್ಯುನಿಸಂನ ಪೆಡಂಭೂತ" ಪಶ್ಚಿಮ ಯುರೋಪಿಗೂ ಹಬ್ಬುವ ಭಯದಿಂದಾಗಿಯೇ ಸೋವಿಯೆಟ್ ಒಕ್ಕೂಟ ಕೊಟ್ಟ ಸವಲತ್ತುಗಳು ಕಲ್ಯಾಣ ಯೋಜನೆಗಳು ಮತ್ತು ಸಾಮಾಜಿಕ ಭದ್ರತಾ ಕ್ರಮಗಳನ್ನು ಬಂಡವಾಳಶಾಹಿ ದೇಶಗಳಲ್ಲೂ (ವಿಶೇಷವಾಗಿ ಕಾರ್ಮಿಕರ ಚಳುವಳಿಗಳು ಪ್ರಬಲವಾಗಿದ್ದ ದೇಶಗಳಲ್ಲಿ) ಸಾರ್ವತ್ರಿಕವಲ್ಲದಿದ್ದರೂ,, ಸಮಗ್ರವಾಗಿ ಅಲ್ಲದಿದ್ದರೂ ಸಾಕಷ್ಟು ವ್ಯಾಪಕವಾಗಿ ಜಾರಿ ಮಾಡಬೇಕಾಯಿತು. ಭಾರತ ಸೇರಿದಂತೆ ಮೂರನೇ ಜಗತ್ತಿನ ದೇಶಗಳಲ್ಲೂ ಸಹ ಇವೆಲ್ಲದರ ಪ್ರಭಾವದಿಂದ ಅವು ಜಾರಿಗೆ ಬಂದವು. ಇಡೀ ಜಗತ್ತಿನ ಕಾರ್ಮಿಕರು ಇಂದು ಅನುಭವಿಸುತ್ತಿರುವ ಹಕ್ಕುಗಳು, ಸವಲತ್ತುಗಳು, ಕಲ್ಯಾಣ ಯೋಜನೆಗಳು, ಸಾಮಾಜಿಕ ಭದ್ರತಾ ಕ್ರಮಗಳ ಹಿಂದೆ ಸೋವಿಯೆಟ್ ಒಕ್ಕೂಟದ ದೊಡ್ಡ ಪಾಲು ಇದೆ ಎಂದು ಮರೆಯಬಾರದು.

ಉಚಿತ ಶಿಕ್ಷಣ ಮತ್ತು ಉದ್ಯೋಗವನ್ನು ಎಲ್ಲರಿಗೂ ಒದಗಿಸಿದ, ಶಿಕ್ಷಣ ಮತ್ತು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿಸಿದ, ಹಾಗೂ ಅದನ್ನು ಹಲವು ದಶಕಗಳ ಕಾಲ ಪೂರ್ಣವಾಗಿ ಜಾರಿ ಮಾಡಿದ ಮೊದಲ ದೇಶ ಸೋವಿಯೆಟ್ ಒಕ್ಕೂಟ. 1936ರ ಸೋವಿಯೆಟ್ ಸಂವಿಧಾನದಲ್ಲಿ ಜಗತ್ತಿನಲ್ಲೇ ಮೊದಲ ಬಾರಿಗೆ ಶಿಕ್ಷಣ ಮತ್ತು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿಸಲಾಯಿತು. ಇದು ಮುಂದೆ ಸಮಾಜವಾದಿ ದೇಶಗಳಿಗೆ ಮಾದರಿಯಾಯಿತು. ಅಭಿವೃದ್ಧ ಬಂಡವಾಳಶಾಹಿ ಮತ್ತು ಮೂರನೇಯ ಜಗತ್ತಿನ ದೇಶಗಳಲ್ಲಿ ಈ ಹಕ್ಕಿಗೆ ಹೋರಾಟಕ್ಕೆ ಸ್ಫೂರ್ತಿಯಾಯಿತು. ಈ ದೇಶಗಳಲ್ಲೂ ಅಷ್ಟು ಸಾರ್ವತ್ರಿಕ, ಸಮಗ್ರವಾಗಿ ಮತ್ತು ಮೂಲಭೂತ ಹಕ್ಕಾಗಿ ಅಲ್ಲದಿದ್ದರೂ ಆಂಶಿಕವಾಗಿಯಾದರೂ ಜಾರಿ ಮಾಡುವ ಒತ್ತಾಯ ಹೇರಿತು. ಹೆಚ್ಚಿನ ದೇಶಗಳಲ್ಲಿ ಸಾರ್ವತ್ರಿಕ ಉಚಿತ ಕಡ್ಡಾಯ ಶಾಲಾ ಶಿಕ್ಷಣದ ಗುರಿ ಹಾಗೂ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಸೋವಿಯೆಟ್ ಒಕ್ಕೂಟದ ಸಾಧನೆ ತಂದ ಒತ್ತಡದ ನೇರ ಫಲ. "ಅತ್ಯುತ್ತಮ ಶಿಕ್ಷಣ ವ್ಯವಸ್ಥೆ ಸೋವಿಯೆಟ್ ಗಳ ಅತ್ಯಂತ ಸಶಕ್ತ ಅಸ್ತ್ರ" ಎಂದು ಪಾಶ್ಚಿಮಾತ್ಯ ನಾಯಕರೊಬ್ಬರು ಉದ್ಗರಿಸಿದ್ದರಂತೆ. ಸೋವಿಯೆಟ್ ಶಿಕ್ಷಣ ಅದರಲ್ಲೂ ಗಣಿತ ಮತ್ತು ವಿಜ್ಞಾನ ಶಿಕ್ಷಣದಲ್ಲಿ ಸಾಧನೆ ಇಂದಿಗೂ ಜಗದ್ವಿಖ್ಯಾತ, ಮತ್ತು ಬಹಳ ಮಟ್ಟಿಗೆ ಇಂದಿಗೂ ಉಳಿದುಕೊಂಡಿದೆ.



ಅದ್ಭುತ 2: ದುಡಿಮೆಗಾರರ ಪರಮಾಧಿಕಾರದ ಪ್ರಭುತ್ವದ ಕಾರ್ಯ ಸಾಧ್ಯತೆ ತೋರಿಸಿದ್ದು
ಸೋವಿಯೆಟ್ ಗಳ ವಿಜಯ ಸಂಭ್ರಮ – 1920 ಪೋಸ್ಟರ್

ಕ್ರಾಂತಿ–ಪೂರ್ವ ಝಾರನ ರಶ್ಯಾದಲ್ಲಿ ಸಾಕ್ಷರತೆ ಪುರುಷರಲ್ಲಿ ಶೇ. 37.9 ಮತ್ತು ಮಹಿಳೆಯರಲ್ಲಿ ಶೇ. 12.5 ಇತ್ತು. ಕ್ರಾಂತಿ ಅತ್ಯುತ್ತಮ ಶಾಲೆ ಅಂತಾರೆ. ಕ್ರಾಂತಿ ರೈತ ಕಾರ್ಮಿಕರಲ್ಲಿ ಮಹಿಳೆಯರಲ್ಲಿ ವಿಜ್ಞಾನದ ಹಸಿವು ಹುಟ್ಟಿಸಿತ್ತು. ಕ್ರಾಂತಿಯ ನಂತರ ಬೊಲ್ಶೆವಿಕರ ಅತಿ ದೊಡ್ಡ ಆದ್ಯತೆ ಸಾಕ್ಷರತೆ–ಯಾಗಿತ್ತು. ಹೊಸ "ಆಳುವ ವರ್ಗ"ವಾದ ರೈತ–ಕಾರ್ಮಿಕರ ರಾಜಕೀಯ ಪ್ರಜ್ಞೆ ಸಾಕ್ಷರತೆ ಇಲ್ಲದೆ ಸಾಧ್ಯವಿಲ್ಲ ಎಂದು ಬೊಲ್ಶೆವಿಕರಿಗೆ ತಿಳಿದಿತ್ತು.

ಸೋವಿಯೆಟ್ ಸರಕಾರ 1918ರಲ್ಲಿ ಸಾರ್ವತ್ರಿಕ ಕಡ್ಡಾಯ ಉಚಿತ ಶಿಕ್ಷಣ ತನ್ನ ಗುರಿ ಎಂದಿತು. 1919ರಲ್ಲಿ "ನಿರಕ್ಷರತೆಯ ನಿರ್ಮೂಲನ" ಆಂದೋಲನ ಆರಂಭಿಸಿತು. ನಿಗದಿತ ಪ್ರದೇಶವಾರು ವಲಯವಾರು ಕಾಲಮಿತಿಯೊಳಗೆ 8ರಿಂದ 50 ವಯಸ್ಸಿನ ಎಲ್ಲರ ಸಾಕ್ಷರತೆಯ ಯೋಜನೆ ಹಾಕಲಾಯಿತು. ಸಾಕ್ಷರತೆಗೆ ಶಿಕ್ಷಕರ ಮತ್ತು ಸ್ವಯಂಸೇವಕರ ಪಡೆಯನ್ನು ಯುದ್ಧೋಪಾದಿಯಲ್ಲಿ ರಚಿಸಲಾಯಿತು. ಕಾರ್ಮಿಕರಿಗೆ ಅತಿ ಹೆಚ್ಚಿನ ವೇಗವಾದ ಗುರಿಗಳನ್ನು ಕೊಡಲಾಯಿತು. 1924ರ ಹೊತ್ತಿಗೆ ಹೆಚ್ಚಿನ ಆದ್ಯತೆಯ ರೈಲ್ವೆ ಮತ್ತಿತರ ಕಾರ್ಮಿಕರ ಮತ್ತು ಕೆಂಪು ಸೈನಿಕರ ಪೂರ್ಣ ಸಾಕ್ಷರತೆ ಸಾಧಿಸಲಾಯಿತು. 1926ರ ಹೊತ್ತಿಗೆ ಸಾಕ್ಷರತೆ ಶೇ. 51ಕ್ಕೆ (ಪುರುಷರಲ್ಲಿ ಶೇ. 66.5 ಮತ್ತು ಮಹಿಳೆಯರಲ್ಲಿ ಶೇ. 37.2), 1939ರ ಹೊತ್ತಿಗೆ ಶೇ. 89.7 ಕ್ಕೆ(ಪುರುಷರಲ್ಲಿ ಶೇ. 90.8ಮತ್ತು ಮಹಿಳೆಯರಲ್ಲಿ ಶೇ. 72.5) ಏರಿತು. ಈ ಅವಧಿಯಲ್ಲಿ 5 ಕೋಟಿ ನಿರಕ್ಷರಿಗಳು, 4 ಕೋಟಿ ಅರೆ–ಸಾಕ್ಷರರು ಸಾಕ್ಷರರಾದರು. ಮಧ್ಯೆ ಎರಡನೇ ಮಹಾಯುದ್ಧದಿಂದಾಗಿ ಪೂರ್ಣ ಸಾಕ್ಷರತೆ–ಯ ಗುರಿಯ ಜಾರಿ ವಿಳಂಬವಾಗದರೂ 1950ರ ಹೊತ್ತಿಗೆ ಸಾಧಿಸಲಾಯಿತು. ಯುರೋಪಿನ ದೇಶಗಳು ಶತಮಾನಗಳ ಕಾಲ ಸಾಧಿಸಿದ್ದನ್ನು ದಶಕಗಳಲ್ಲಿ ಸಾಧಿಸಿದ್ದು ಸೋವಿಯೆಟ್ ಶಿಕ್ಷಣದ ಒಂದು ಅದ್ಭುತ.

ಸಾರ್ವತ್ರಿಕ ಕಡ್ಡಾಯ ಉಚಿತ ಶಿಕ್ಷಣದ ಜಾರಿ, ಯೋಜಿತ ಕ್ಷಿಪ್ರ ಕೈಗಾರಿಕಾ, ಕೃಷಿ, ವಿಜ್ಞಾನ–ತಂತ್ರಜ್ಞಾನ ಬಳಕೆ ಮತ್ತು ಬೆಳವಣಿಗೆಗಳಿಂದ ಎಲ್ಲರಿಗೂ ಉದ್ಯೋಗವನ್ನು 1930ರ ದಶಕದ ಮಧ್ಯಭಾಗದ ಹೊತ್ತಿಗೆ ಸಾಧಿಸಲಾಯಿತು. 1936ರಲ್ಲಿ ಕೊನೆಯ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚಲಾಯಿತು. ಸೋವಿಯೆಟ್ ಒಕ್ಕೂಟ ಇದ್ದ 74 ವರ್ಷಗಳಲ್ಲೂ ಪೂರ್ಣ ಉದ್ಯೋಗ ಜಾರಿ ಯಲ್ಲಿತ್ತು.

ಮಾತೃಭಾಷೆ ಯಲ್ಲಿ (ರಶ್ಯನ್ ಅಲ್ಲದೆ ಇತರ ಭಾಷೆಗಳಲ್ಲಿ ಶಿಕ್ಷಣಕ್ಕೆ ವ್ಯವಸ್ಥೆ) ಶಿಕ್ಷಣ ಮೂಲಭೂತ ಹಕ್ಕಾಗಿ ಜಾರಿ ಮಾಡಿದ್ದು ಇನ್ನೊಂದು ಸೋವಿಯೆಟ್ ಅದ್ಭುತ. ಜಾರಿಯ ಭಾಗವಾಗಿ ಲಿಪಿ ಇಲ್ಲದ 40 ಭಾಷೆಗಳಿಗೆ ಹೊಸ ಲಿಪಿ ರಚಿಸಲಾಯಿತು. 1924ರಲ್ಲಿ 25 ರಶ್ಯನೇತರ ಭಾಷೆಗಳಲ್ಲಿ 1934ರ ಹೊತ್ತಿಗೆ 104 ಭಾಷೆಗಳಲ್ಲಿ ಹೊಸ ಪಠ್ಯ ಪುಸ್ತಕಗಳನ್ನು ರಚಿಸಿ ಮುದ್ರಿಸಲಾಯಿತು.


1932–41 ಅವಧಿಯಲ್ಲಿ ಶಿಕ್ಷಣದಲ್ಲಿ ಹೂಡಿಕೆಯಲ್ಲಿ ತಲಾ 8 ಪಟ್ಟು ಹೆಚ್ಚಳ ಮಾಡಲಾಯಿತು. 1930ರ ದಶಕದಲ್ಲಿ ಕಡ್ಡಾಯ ಸಾರ್ವತ್ರಿಕ ಮಾಧ್ಯಮಿಕ ಶಿಕ್ಷಣ (7ನೇ ಕ್ಲಾಸಿನ ವರೆಗೆ) ಜಾರಿ ಮಾಡಲಾಯಿತು. ಮೂರನೇ ಯೋಜನೆ ಅವಧಿಯಲ್ಲಿ (1938–42) ಕಡ್ಡಾಯ ಹೈಸ್ಕೂಲ್ ಶಿಕ್ಷಣ ಜಾರಿಗೆ ಯೋಜಿಸಲಾಗಿತ್ತು. 2ನೇ ಮಹಾಯುದ್ಧದಿಂದಾಗಿ ಅದರಲ್ಲಿ ವಿಳಂಬವಾಗಿ 1950ರ ದಶಕದಲ್ಲಿ ಜಾರಿ ಮಾಡಲಾಯಿತು. 1970ರ ಹೊತ್ತಿಗೆ ರಾಷ್ಟ್ರೀಯ ಬಜೆಟಿನ ಶೆ, 12 (ಜಿಡಿಪಿಯ ಶೆ. 7) ಇತ್ತು.

ಉಚ್ಚ ಶಿಕ್ಷಣ ವ್ಯವಸ್ಥೆಯನ್ನೂ ಹಂತ ಹಂತವಾಗಿ ವಿಸ್ತರಿಸಲಾಯಿತು. ಅದೂ ಉಚಿತವಾಗಿತ್ತು. 1987ರ ಹೊತ್ತಿಗೆ 69 ವಿ.ವಿಗಳು ಸೇರಿದಂತೆ 896 ಉಚ್ಚ ಶಿಕ್ಷಣ ಸಂಸ್ಥೆಗಳು, ಅವುಗಳಲ್ಲಿ – 400 ಶಿಕ್ಷಕ–ತರಬೇತಿ, ಮೆಡಿಕಲ್, ಸಮಾಜ ವಿಜ್ಞಾನ, ಕಲಾ ಅಕಾಡೆಮಿಗಳು: 360 ವಿಜ್ಞಾನ –ತಂತಜ್ಞಾನ ಕೃಷಿ ಸಂಸ್ಥೆಗಳು ಮತ್ತು 60 ಪಾಲಿಟೆಕ್ನಿಕ್ ಗಳನ್ನು – ಸ್ಥಾಪಿಸಲಾಯಿತು. ಅವುಗಳಲ್ಲಿ ಒಟ್ಟು 50 ಲಕ್ಷ ವಿದ್ಯಾರ್ಥಿಗಳು(ಅರ್ಧ ಅರೆ–ಕಾಲಿಕ) ಅಧ್ಯಯನದಲ್ಲಿ ತೊಡಗಿದ್ದರು. ಪ್ರತಿ ವರ್ಷ 8.5 ಲಕ್ಷ ಪದವಿಧರರು, 5 ಲಕ್ಷ ಸಂಶೋಧಕರು, 50 ಸಾವಿರ ವಿಶೇಷಜ್ಞರು ತಯಾರಾಗುತ್ತಿದ್ದರು.

"ನಿರಕ್ಷರತೆಯ ನಿರ್ಮೂಲನ" ಆಂದೋಲನದಲ್ಲಿ ಮಹಿಳೆಗೆ ಆದ್ಯತೆ ಕೊಡಲಾಗಿತ್ತು. ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು 1950–60 ರ ದಶಕದ ಹೊತ್ತಿಗೆ ಸಾಧಿಸಲಾಗಿತ್ತು. 1987ರ ಹೊತ್ತಿಗೆ ಉಚ್ಚ ಶಿಕ್ಷಣದಲ್ಲಿ ಶೇ. 56 ಮಹಿಳೆಯರು (ಮೆಡಿಕಲ್ ನಲ್ಲಿ ಶೇ. 60, ಇಂಜಿನೀಯರಿಂಗ್ ಮತ್ತು ಇತರ ಕ್ಷೇತ್ರಗಳಲ್ಲಿ ಶೇ. 30–40) ಇದ್ದರು.

ಸೋವಿಯೆಟ್ ಶಿಕ್ಷಣದ ಅದ್ಭುತ ಸಾಧನೆಗಳನ್ನು ಈ ಮುಂದಿನ ಮಾಹಿತಿಯಿಂದ ತಿಳಿಯಬಹುದು – 1975ರ ಹೊತ್ತಿಗೆ ಜಗತ್ತಿನ 14 ರಲ್ಲಿ 1 ಸೋವಿಯೆಟ್ ನಾಗರಿಕ ಇದ್ದರೆ, 4 ರಲ್ಲಿ 1 ಪುಸ್ತಕ ಪ್ರಕಟಣೆ ಸೋವಿಯೆಟ್ ಒಕ್ಕೂಟದಲ್ಲಿ ಆಗುತ್ತಿತ್ತು. ಜತ್ತಿನ 4 ರಲ್ಲಿ ಒಬ್ಬ ಡಾಕ್ಟರ್, 3ರಲ್ಲಿ ಒಬ್ಬ ಸಂಶೋಧಕ ಸೋವಿಯೆಟ್ ಒಕ್ಕೂಟಕ್ಕೆ ಸೇರಿದ್ದ.

*** ನಿರಕ್ಷರತೆಯ ನಿರ್ಮೂಲನ" ಕಾರ್ಯಕ್ರಮ ಆಂದೋಲನಗಳ ಪೋಸ್ಟರ್ ದೊಡ್ಡ ಪಾತ್ರ ವಹಿಸಿತು. ಹೆಚ್ಚಿನ ಇಂತಹ ಪೋಸ್ಟರ್ ಗಳಲ್ಲಿ (ಹೆಚ್ಚಾಗಿ ಬಡ ರೈತ) ಮಹಿಳೆಯ ಚಿತ್ರವನ್ನು ಉದ್ದೇಶಪೂರ್ವಕವಾಗಿ ಬಳಸಲಾಗುತ್ತಿತ್ತು. ಇಲ್ಲಿ ಕೊಟ್ಟ ಪೋಸ್ಟರ್ ನಲ್ಲಿ ಕೂಡಾ ಇದನ್ನು ಕಾಣಬಹುದು.**



ಅದ್ಭುತ 2: ಎಲ್ಲರಿಗೂ ಶಿಕ್ಷಣ ಮತ್ತು ಉದ್ಯೋಗ – ಮೂಲಭೂತ ಹಕ್ಕಾಗಿ ಜಾರಿ
"ನೀವು ನಿರಕ್ಷರತೆ ನಿರ್ಮೂಲನೆಗೆ ಕೈ ಜೋಡಿಸುತ್ತೀರಿ ತಾನೇ?" – 1925 ಪೋಸ್ಟರ್

JANASHAKTHI KANNADA VARA PATRIKE November 13-19, 2017 Price: Rs. 10/- Date of Publication: 10 November 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಜಗದಗಲಕ್ಕೂ ರಶ್ಯನ್ ಕ್ರಾಂತಿಯ ಶತಮಾನೋತ್ಸವ


ಕ್ರಾಂತಿಯ ನೆನಪಿನಲ್ಲಿ ಮಾಸ್ಕೋದಲ್ಲಿ ಮೆರವಣಿಗೆ

ರಶ್ಯನ್ ಕ್ರಾಂತಿಯ ಶತಮಾನೋತ್ಸವವನ್ನು ಜಗದಲಕ್ಕೂ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಲವು ಅಂತರ್ರಾಷ್ಟ್ರೀಯ ಆಚರಣೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಸಮಾರಂಭ ಝಾರ್ ಕಾಲದ ರಾಜಧಾನಿ ಮತ್ತು ಕ್ರಾಂತಿ ನಡೆದ ಪೆಟ್ರೋಗ್ರಾಡ್ (ಈಗ ಸೈಂಟ್ ಪೀಟರ್ಸ್ ಬರ್ಗ್, ಸೋವಿಯೆಟ್ ಸಮಯದಲ್ಲಿ ಲೆನಿನ್‌ಗ್ರಾಡ್) ಮತ್ತು ಮಾಸ್ಕೋಗಳಲ್ಲಿ ಒಂದು ವಾರ ಕಾಲ ನಡೆಯಿತು. ಇದೇ ಸಮಯದಲ್ಲಿ ನೂರಕ್ಕೂ ಹೆಚ್ಚು ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 19ನೇ ಅಂತರ್ರಾಷ್ಟ್ರೀಯ ಸಭೆ ಯೋಜಿಸಲಾಗಿತ್ತು. ಇವೆಲ್ಲವನ್ನು ರಶ್ಯನ್ ಕಮ್ಯುನಿಸ್ಟ್ ಪಕ್ಷ ಸಂಘಟಿಸಿತ್ತು. ಅದರಿಂದಾಗಿ ಈ ಪಕ್ಷಗಳ ನೂರಾರು ಪ್ರತಿನಿಧಿಗಳು ಈ ಸಮಾರಂಭದಲ್ಲಿ ಭಾಗವಹಿಸುವಂತಾಗಿತ್ತು. ಸಿಪಿಐ(ಎಂ) ಪ್ರತಿನಿಧಿಗಳಾಗಿ ಕಾ. ಸೀತಾರಾಂ ಯೆಚುರಿ ಮತ್ತು ಕಾ. ಎಂ.ಎ. ಬೇಬಿ ಅಂತರ್ರಾಷ್ಟ್ರೀಯ ಸಭೆ ಮತ್ತು ಶತಮಾನೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಶತಮಾನೋತ್ಸವದ ಭಾಗವಾಗಿ ನವೆಂಬರ್ 2ರಿಂದ 4 ರವರೆಗೆ ಪೆಟ್ರೋಗ್ರಾಡ್ ನಲ್ಲಿ 5ರಿಂದ 7 ವರೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅಂತರ್ರಾಷ್ಟ್ರೀಯ ಸಭೆ ಅಲ್ಲದೆ ಎರಡೂ ನಗರಗಳಲ್ಲಿ ಭಾರೀ ಮೆರವಣಿಗೆಗಳನ್ನು ಆಯೋಜಿಸಲಾಗಿತ್ತು. ನವೆಂಬರ್ 7ರಂದು ಮಾಸ್ಕೋದಲ್ಲಿ ಭಾರೀ ಮೆರವಣಿಗೆ ನಡೆಯಿತು. ಪೆಟ್ರೋಗ್ರಾಡ್ ನಲ್ಲಿ ಕ್ರಾಂತಿಯಲ್ಲಿ ವಿಶೇಷ ಪಾತ್ರ ವಹಿಸಿದ– ಝಾರನ ಚಳಿಗಾಲದ ಅರಮನೆ, ಅರೋರಾ ಯುದ್ಧ ಹಡಗು (ಇದರಿಂದ ಹಾರಿಸಿದ ತೋಪು ಚಳಿಗಾಲದ ಅರಮನೆ ಮೇಲೆ ದಾಳಿ ಮಾಡಲು ಸೂಚನೆಯಾಗಿತ್ತು), ಕ್ರಾಂತಿಕಾರಿ ಸರಕಾರ ಕೆಲಸ ಮಾಡಿದ ಸ್ಮೊಲ್ನಿ ಇನ್ಸ್ಟಿಟ್ಯೂಟ್ – ಮುಂತಾದ ಸ್ಮಾರಕಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಝಾರನ ಚಳಿಗಾಲದ ಅರಮನೆ, ಅರೋರಾ ಯುದ್ಧ ಹಡಗುಗಳ ಮೇಲೆ ಲೆಸರ್ ಪ್ರೊಜೆಕ್ಶನ್ ಗಳ ಸಹಾಯದಿಂದ ಕ್ರಾಂತಿಯ ಮುಖ್ಯ ಘಟನೆಗಳನ್ನು ತೋರಿಸಲಾಗುತ್ತಿತ್ತು. ಮಾಸ್ಕೋದಲ್ಲಿ ನೂರಕ್ಕೂ ಹೆಚ್ಚು ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳಲ್ಲದೆ ಇತರ ಪಕ್ಷಗಳ ಜತೆ ವಿಸ್ತೃತ ಸಭೆ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ವೆನೆಜುವೆಲಾ ಮತ್ತು ಸಿರಿಯಾ ಅಧ್ಯಕ್ಷರೂ ಭಾಗವಹಿಸಿದ್ದರು.

ಜಗತ್ತಿನ ದೊಡ್ಡ ಹಾಗೂ ಹಳೆಯ ಟ್ರೇಡ್ ಯೂನಿಯನ್ ಆದ ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಈ ಸಂದರ್ಭದಲ್ಲಿ ಲಂಡನಿನಲ್ಲಿ ವಿಶೇಷ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಿತ್ತು. ಇದಕ್ಕೆ ಕಾ. ಬೃಂದಾ ಕಾರಟ್ ಮತ್ತು ಚೆ ಗವೇರಾ ಪುತ್ರಿ ಅಲೇಡಾ ಅವರನ್ನು ಆಹ್ವಾನಿಸಲಾಗಿತ್ತು.





ಕಾ. ಯೆಚುರಿ ರಶ್ಯನ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯ ಜತೆಗೆ


ಕಾ. ಬೃಂದಾ ಚೆ ಮಗಳು ಅಲೈಡಾ ರೊಂದಿಗೆ



ಕಾ. ಬೃಂದಾ ಲಂಡನಿನಲ್ಲಿ ವಿಶೇಷ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ




ಝಾರನ ಚಳಿಗಾಲದ ಅರಮನೆ ಚಾರಿತ್ರಿಕ ಘಟನೆಗಳ ಪ್ರೊಜೆಕ್ಶನ್ ನೊಂದಿಗೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**